09 June 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

**ಭಾವನಾಂತರಂಗ**

ವ್ಯಕ್ತಿ ತನ್ನ ಬದುಕನಲ್ಲಿ ಗೆಲ್ಲಲು, ಕೆಲವೊಮ್ಮೆ ವಾದ,ವಿವಾದಕ್ಕಿಂತ ಸಂಧಾನವೇ ಮುಖ್ಯವಾಗುತ್ತದೆ!

▸▸ ಸ್ನೇಹಾ ಆನಂದ್!


ನಾನು ಮತ್ತೆ ಸಿಎಂ ಆಗಲು ಶಕ್ತಿ ತುಂಬಿ: ಡಿಕೆಶಿವಕುಮಾರ್ ಪುಟ ಸಂ. 2


ಒಳಮೀಸಲಾತಿ: ಯಾವುದೇ ಹೊಸ ಕಾನೂನು ಜಾರಿಯಾಗಿಲ್ಲ ಪುಟ ಸಂ. 3


ಕಲಾವಿದರ ಪ್ರೋತ್ಸಾಹಿಸುವಲ್ಲಿ ಸರ್ಕಾರಗಳು ವಿಫಲ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 189 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಅರಸು ಮೊಮ್ಮಗ ಸೂರಜ್ ಹೆಗ್ಡೆ ನಿಧನ

**ಬೆಂಗಳೂರು:** ಎಐಸಿಸಿ ಕಾರ್ಯದರ್ಶಿ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ, ಮಾಜಿ ಸಿಎಂ ದೇವರಾಜ ಅರಸು ಅವರ ಮೊಮ್ಮಗ ಸೂರಜ್ ಹೆಗ್ಡೆ ನಿಧನರಾಗಿದ್ದಾರೆ.



ಸೂರಜ್ ಹೆಗ್ಡೆ (55) ಅವರು ಭಾನುವಾರ ರಾತ್ರಿ ಹೃದಯಸ್ತಂಭನದಿಂದ ಕೊನೆಯುಸಿರೆಳೆದಿದ್ದಾರೆ. ತಮಿಳುನಾಡು ಹಾಗೂ ಪುದುಚೇರಿ ರಾಜ್ಯದ ಉಸ್ತುವಾರಿಯಾಗಿದ್ದರು.

ತಾತ ದೇವರಾಜ ಅರಸು ಅವರಂತೆ ಹಿಂದುಳಿದ ವರ್ಗಗಳು, ಕಾರ್ಮಿಕರ ಹಕ್ಕು, ಸಾಮಾಜಿಕ ನ್ಯಾಯಕ್ಕಾಗಿ ಶ್ರಮಿಸುತ್ತಿದ್ದರು. ರಾಷ್ಟ್ರೀಯ ಯುವ ಪುಟ 2ಕ್ಕೆ

## ಗೋವಿಂದರಾಜು ಮೈತ್ರಿ ಕೂಟದ 3ನೇ ಅಭ್ಯರ್ಥಿ

**ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಗೆ ಬಿಜೆಪಿ–ಜೆಡಿಎಸ್ ಮೈತ್ರಿಕೂಟ ತನ್ನ ಅಭ್ಯರ್ಥಿಯನ್ನು ಪ್ರಕಟಿಸಿದೆ. ಮೈತ್ರಿಕೂಟದ 3ನೇ ಅಭ್ಯರ್ಥಿಯಾಗಿ ಗೋವಿಂದರಾಜು ಅವರನ್ನು ಕಣಕ್ಕಿಳಿಸಿದೆ.

ಕಾಂಗ್ರೆಸ್‌ನ 5ನೇ ಅಭ್ಯರ್ಥಿ ವಿನಯ್ ಕಾರ್ತಿಕ್ ವಿರುದ್ಧ ಮೈತ್ರಿಕೂಟದ ಅಭ್ಯರ್ಥಿ ಜೆಡಿಎಸ್‌ನ ಗೋವಿಂದ ರಾಜು ಸ್ಪರ್ಧೆ ಮಾಡಲಿದ್ದಾರೆ. ಜೆಡಿಎಸ್‌ನ ಮಾಜಿ ಪರಿಷತ್ ಸದಸ್ಯರಾದ ಫಾರೂಕ್ ಹಾಗೂ ರಮೇಶ್ ಗೌಡ ಇಬ್ಬರಲ್ಲಿ ಒಬ್ಬರು ಮೈತ್ರಿಕೂಟದ ಅಭ್ಯರ್ಥಿ ಆಗಬಹುದು ಎನ್ನಲಾಗಿತ್ತು. ಆದರೆ, ಕೇಂದ್ರ ಸಚಿವ ಕುಮಾರಸ್ವಾಮಿ ಕಡೆ ಗಳಿಗೆಯಲ್ಲಿ ಗೋವಿಂದ ರಾಜು ಕಣಕ್ಕೆ ಇಳಿಸಲು ತೀರ್ಮಾನಿಸಿದ್ದಾರೆ.

# ಖಾತೆ ತಗಾದೆ: ಕೆಬಿಜಿ ಸರದಿ

## ಬಿಡಿಎ, ಬಿಎಂಆರ್‌ಡಿಎ ಸೇರಿಸಿದಿದ್ದರೆ ಅಧಿಕಾರ ಸ್ವೀಕರಿಸಲ್ಲ!

**ಬೆಂಗಳೂರು:** ರಾಜ್ಯ ರಾಜಕಾರಣದಲ್ಲಿ ಸಚಿವ ಸಂಪುಟ ವಿಸ್ತರಣೆ ಮತ್ತು ಖಾತೆ ಹಂಚಿಕೆಯ ಬೆನ್ನಲ್ಲೇ ಇದೀಗ ಅಸಮಾಧಾನದ ಹೊಗೆಯಾಡಲಾರಂಭಿಸಿದೆ. ನಗರಾಭಿವೃದ್ಧಿ ಖಾತೆ ಪಡೆದಿರುವ ಸಚಿವ ಕೃಷ್ಣ ಬೈರೇಗೌಡ ಅವರು ತಮಗೆ ನೀಡಲಾಗಿರುವ ಖಾತೆಯ ಸ್ವರೂಪದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಪ್ರಮುಖ ಪ್ರಾಧಿಕಾರಗಳನ್ನು ಸೇರಿಸದಿದ್ದರೆ ತಾವು ಅಧಿಕಾರ ವಹಿಸಿಕೊಳ್ಳುವುದಿಲ್ಲ ಎಂದು ಹೈಕಮಾಂಡ್‌ಗೆ ಸ್ಪಷ್ಟ ಸಂದೇಶ ರವಾನಿಸಿದ್ದಾರೆ.



### ಅಪೂರ್ಣ ಖಾತೆ ಬಗ್ಗೆ ರಾಜ್ಯ ಉಸ್ತುವಾರಿ ಬಳಿ ಅಸಮಾಧಾನ

ಸಚಿವ ಕೃಷ್ಣ ಬೈರೇಗೌಡ ಅವರಿಗೆ ಬೆಂಗಳೂರು ನಗರಾಭಿವೃದ್ಧಿ ಖಾತೆಯನ್ನು ನೀಡಲಾಗಿದ್ದರೂ, ಅದರಲ್ಲಿ ಅತ್ಯಂತ ಪ್ರಮುಖವಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮತ್ತು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಬಿಎಂಆರ್‌ಡಿಎ) ವಿಭಾಗಗಳನ್ನು ಸೇರ್ಪಡೆ ಮಾಡಲಾಗಿಲ್ಲ. ಇದು ಸಚಿವರ ತೀವ್ರ ಕೋಪಕ್ಕೆ ಕಾರಣವಾಗಿದೆ. ಈ ವಿಚಾರವಾಗಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಸಂಪರ್ಕಿಸಿರುವ ಕೃಷ್ಣ ಬೈರೇಗೌಡ, ತಮ್ಮ ಖಾತೆಯ ಮಿತಿಯ ಬಗ್ಗೆ ತೀವ್ರ ಅಸಮಾಧಾನವನ್ನು ಹೊರ ಹಾಕಿದ್ದಾರೆ ಎಂದು ವರದಿಯಾಗಿದೆ. ಹೈಕ ಮಾಂಡ್ ತಕ್ಷಣವೇ ಪುಟ 2ಕ್ಕೆ

### ರಾಜಕೀಯ ಲೆಕ್ಕಾಚಾರ, ಮುಂದುವರಿಯಲಿರುವ ಖಾತೆ ಕ್ಯಾತೆ

ಬೆಂಗಳೂರು ನಗರಾಭಿವೃದ್ಧಿ ಖಾತೆಯ ಮೇಲೆ ಹಿರಿಯ ನಾಯಕ ರಾಮಲಿಂಗಾ ರೆಡ್ಡಿ ಅವರು ಮೊದಲಿನಿಂದಲೂ ಕಣ್ಣಿಟ್ಟಿದ್ದರು ಹಾಗೂ ಈ ಖಾತೆಯ ತೀವ್ರ ಆಕಾಂಕ್ಷಿಯಾಗಿದ್ದರು. ಆದರೆ, ಅಂತಿಮ ಹಂತದ ಲೆಕ್ಕಾಚಾರದಲ್ಲಿ ಈ ಮಹತ್ವದ ಜವಾಬ್ದಾರಿಯನ್ನು ಕೃಷ್ಣ ಬೈರೇಗೌಡ ಅವರಿಗೆ ನೀಡಲಾಗಿತ್ತು. ಇದೀಗ ಖಾತೆಯ ವ್ಯಾಪ್ತಿಯ ವಿಚಾರದಲ್ಲಿ ಕೃಷ್ಣ ಬೈರೇಗೌಡ ಅವರೇ ಅಸಮಾಧಾನಗೊಂಡು ಮುನಿಸಿಕೊಂಡಿರುವುದು ಆಡಳಿತ ವಲಯದಲ್ಲಿ ಕುತೂಹಲ ಮೂಡಿಸಿದೆ. ಪ್ರಸ್ತುತ ರಾಜಕೀಯ ವಿದ್ಯಮಾನಗಳನ್ನು ಪುಟ 2ಕ್ಕೆ

### ಕೇವಲ ಕಾರ್ಪೊರೇಷನ್‌ಗೆ ಸೀಮಿತವಾಗಲು ಸಚಿವರ ನಕಾರ

ಬೆಂಗಳೂರು ನಗರಾಭಿವೃದ್ಧಿ ಇಲಾಖೆ ಎಂದರೆ ಅದು ಬಿಡಿಎ ಹಾಗೂ ಬಿಎಂಆರ್‌ಡಿಎ ಪ್ರಾಧಿಕಾರಗಳನ್ನು ಒಳಗೊಂಡಾಗ ಮಾತ್ರವೇ ಪರಿಪೂರ್ಣವಾಗುತ್ತದೆ ಎಂಬುದು ಕೃಷ್ಣ ಬೈರೇಗೌಡ ಅವರ ಪ್ರಮುಖ ವಾದವಾಗಿದೆ. ಈ ಎರಡು ಪ್ರಮುಖ ಸಂಸ್ಥೆಗಳನ್ನು ಹೊರತುಪಡಿಸಿ ಈಗ ನೀಡಲಾಗಿರುವ ಖಾತೆಯು ಕೇವಲ ಮಹಾನಗರ ಪಾಲಿಕೆ (ಕಾರ್ಪೊರೇಷನ್) ವಿಷಯಗಳಿಗೆ ಮಾತ್ರ ಸೀಮಿತವಾಗುತ್ತದೆ. ಇದರಿಂದಾಗಿ ನಗರದ ಸಮಗ್ರ ಅಭಿವೃದ್ಧಿಗೆ ಅಗತ್ಯವಾದ ಮಹತ್ವದ ನಿರ್ಧಾರಗಳನ್ನು ಸ್ವತಂತ್ರವಾಗಿ ಪುಟ 2ಕ್ಕೆ

# ದೇವೇಗೌಡರ ಹೆಸರು ಚರ್ಚೆಸಿಲ್ಲ

## ರಾಜ್ಯಸಭೆ ಟಿಕೆಟ್ ಕುರಿತು ಬಿ.ವೈ.ವಿಜಯೇಂದ್ರ ಸ್ಪಷ್ಟನೆ

**ಬೆಂಗಳೂರು:** ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರಿಗೆ ರಾಜ್ಯಸಭೆ ಟಿಕೆಟ್ ನೀಡುವ ಕುರಿತು ರಾಜ್ಯ ಮಟ್ಟದಲ್ಲಿ ಯಾವುದೇ ಚರ್ಚೆ ನಡೆದಿರಲಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಮಾಧ್ಯಮಗಳೊಂದಿಗೆ ಸೋಮವಾರ ಮಾತನಾಡಿದ ಅವರು, ಪಕ್ಷಕ್ಕಾಗಿ ದುಡಿದ ಸಾಮಾನ್ಯ ಕಾರ್ಯಕರ್ತನನ್ನು ರಾಜ್ಯಸಭೆ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಆಯ್ಕೆ ಮಾಡಲಾಗಿದೆ ಎಂದು ಹೇಳಿದರು.

94ನೇ ವಯಸ್ಸಿಗೆ ಕಾಲಿಟ್ಟಿರುವ ದೇವೇಗೌಡರಿಗೆ ಬಿಜೆಪಿ ಮರುನಾಮನಿರ್ದೇಶನ ನೀಡದಿರುವುದನ್ನು ಆಡಳಿತಾರೂಢ ಕಾಂಗ್ರೆಸ್ ಸೇರಿದಂತೆ ಹಲವು ವಲಯಗಳು ಟೀಕಿಸಿದ ಬೆನ್ನಲ್ಲೇ ವಿಜಯೇಂದ್ರ ಈ ಸ್ಪಷ್ಟನೆ ನೀಡಿದರು.

ಎಚ್.ಡಿ.ದೇವೇಗೌಡ ಅವರು ಎನ್‌ಡಿಎ ಬಲವರ್ಧನೆಗೆ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬೆಂಬಲ ನೀಡಲು ಸಾಕಷ್ಟು ಕೆಲಸ ಮಾಡಿದ್ದಾರೆ. ಅವರು ಹಿರಿಯ ನಾಯಕರು. ಆದರೆ ದೇವೇಗೌಡರಿಗೆ ರಾಜ್ಯಸಭಾ



ನಾಮನಿರ್ದೇಶನ ಕುರಿತು ರಾಜ್ಯ ಘಟಕ ಮಟ್ಟದಲ್ಲಿ ಯಾವುದೇ ಚರ್ಚೆ ನಡೆದಿಲ್ಲ ಎಂದರು. ರಾಷ್ಟ್ರೀಯ ಮಟ್ಟದ ಬೆಳವಣಿಗೆಗಳ ಕುರಿತು ಹೆಚ್ಚಿನ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.

ಮಾಜಿ ಮಂಡ್ಯ ಸಂಸದೆ ಸುಮಲತಾ ಅಂಬರೀಶ್ ಅವರ ಹೆಸರೂ ಚರ್ಚೆಯಲ್ಲಿತ್ತು. ಆದರೆ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿದ ನಂತರ ಪಕ್ಷದ ನಾಯಕತ್ವ ಯಾರಿಗೆ ಟಿಕೆಟ್ ನೀಡಬೇಕು ಎಂಬುದನ್ನು ನಿರ್ಧರಿಸಿದೆ ಎಂದು ಅವರು ಹೇಳಿದರು.

## ರಾಜ್ಯಸಭೆಗೆ ಪ್ರೊ.ನಾಗರಾಜ್, ಪರಿಷತ್‌ಗೆ ರಘು ನಾಮಪತ್ರ

**ಬೆಂಗಳೂರು:** ರಾಜ್ಯಸಭೆ ಚುನಾವಣೆಗೆ ಬಿಜೆಪಿ ಅಭ್ಯರ್ಥಿ ಪ್ರೊ.ಎಂ.ನಾಗರಾಜ್ ಅವರು ಸೋಮವಾರ ನಾಮಪತ್ರ ಸಲ್ಲಿಸಿದರು.

ವಿಧಾನಪರಿಷತ್ತಿನ ಎರಡು ಸ್ಥಾನಗಳಿಗೆ ಬಿಜೆಪಿಯ ರಘು ಕೌಟಿಲ್ಯ ಮತ್ತು ಲಿಂಗರಾಜ್ ಪಾಟೀಲ ನಾಮಪತ್ರ ಸಲ್ಲಿಸಿದರು. ವಿಧಾನಸಭೆಯಿಂದ ರಾಜ್ಯಸಭೆ ಮತ್ತು ವಿಧಾನಪರಿಷತ್ತಿಗೆ ಜೂನ್ 18ರಂದು ಚುನಾವಣೆ ನಡೆಯಲಿದೆ. ನಾಮಪತ್ರ ಸಲ್ಲಿಸಲು ಸೋಮವಾರ ಕಡೆಯ ದಿನವಾಗಿತ್ತು.

ವಿಧಾನಪರಿಷತ್ತಿನ ಏಳು ಸ್ಥಾನಗಳಲ್ಲಿ ಐದನೇ ಸ್ಥಾನಕ್ಕೂ ಕಾಂಗ್ರೆಸ್‌ನ ವಿನಯ್ ಕಾರ್ತಿಕ್ ಮತ್ತು ಜೆಡಿಎಸ್‌ನಿಂದ ಗೋವಿಂದರಾಜ್ ಅವರು ನಾಮಪತ್ರ ಸಲ್ಲಿಸಿರುವ ಕಾರಣ ಮತದಾನ ನಡೆಯುವುದು ಖಚಿತವಾಗಿದೆ.

ರಾಜ್ಯಸಭೆ ಹಾಗೂ ವಿಧಾನ

## ಮರ ಬಿದ್ದು ಯುವಕ ಸಾವು

**ರಾಮನಗರ:** ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಯುವಕನ ಮೇಲೆ ಮರ ಬಿದ್ದು ಸ್ಥಳದಲ್ಲೇ ಯುವಕ ಸಾವನ್ನಪ್ಪಿರುವ ಘಟನೆ ತಾಲೂಕಿನ ಹುಣಸನಹಳ್ಳಿ ಗ್ರಾಮದ ಬಳಿ ನಡೆದಿದೆ. ಪ್ರಶಾಂತ್ (19) ಮೃತ ದುರ್ದೈವಿ.



ರಾಮನಗರ ತಾಲೂಕಿನ ನಾಗೋಹಳ್ಳಿ ಗ್ರಾಮದ ಯುವಕ ಪ್ರಶಾಂತ್ ಕೆಲಸಕ್ಕೆಂದು ಸೋಮವಾರ ಮುಂಜಾನೆ ಮನೆಯಿಂದ ರಾಮನಗರಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದ. ಈ ವೇಳೆ ರಾತ್ರಿ ಸುರಿದ ಮಳೆಗೆ ಸಡಿಲಗೊಂಡಿದ್ದ ಬೃಹತ್ ಮರ ಬುಡಸಮೇತ ಬೈಕ್ ಮೇಲೆ ಉರುಳಿಬಿದ್ದಿದೆ. ಮರ ಬಿದ್ದ ರಭಸಕ್ಕೆ ಯುವಕ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಸ್ಥಳಕ್ಕೆ ರಾಮನಗರ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

# ರಾಜಕೀಯ ಚದುರಂಗದ ಆಟ

## ಕಾಯಿ ನಡೆಸುವುದು ಹೇಳುತ್ತೇವೆಯೇ: ಡಿಕೆಶಿ ಪ್ರಶ್ನೆ

**ಬೆಂಗಳೂರು:** ರಾಜಕಾರಣದಲ್ಲಿ ಚದುರಂಗ ಆಟ ಆಡುವಾಗ ಯಾರಾದರು ಯಾವ ರೀತಿ ಕಾಯಿ ನಡೆಸುತ್ತೇವೆ ಎಂದು ಹೇಳುತ್ತಾರೆಯೇ? ಯಾರೂ ಹೇಳುವುದಿಲ್ಲ ಎಂದು ಸಿಎಂ ಡಿ.ಕೆ.ಶಿವಕುಮಾರ್ ಮಾರ್ಮಿಕವಾಗಿ ಹೇಳಿದರು.

ವಿಧಾನಸೌಧದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಸೋಮವಾರ ಪ್ರತಿಕ್ರಿಯೆ ನೀಡಿದ ಅವರು, ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ನಿಂದ ವಿನಯ್ ಕಾರ್ತಿಕ್ ಮತ್ತು ಜೆಡಿಎಸ್ ಹೆಚ್ಚುವರಿ ಅಭ್ಯರ್ಥಿ ಸ್ಪರ್ಧೆ ಬಗ್ಗೆ ಪ್ರತಿಕ್ರಿಯೆ ನೀಡಿದರು.

ಎಚ್.ಡಿ.ದೇವೇಗೌಡರಿಗೆ ರಾಜ್ಯಸಭೆ ಟಿಕೆಟ್ ತಪ್ಪಿಸಿ ಬಿಜೆಪಿ ಅನ್ಯಾಯ ಮಾಡಿದೆ ಎಂದು ಸುರ್ಜೇವಾಲ ಟೀಕೆ ಮಾಡಿರುವ ಬಗ್ಗೆ ಕೇಳಿದಾಗ, ನಾನು ಸದ್ಯಕ್ಕೆ ಏನು ಮಾತನಾಡುವುದಿಲ್ಲ. ನಮ್ಮ ಪಕ್ಷದ ಚಿಂತನೆಯನ್ನು ನಾನು ಪಾಲನೆ ಮಾಡುತ್ತೇನೆ ಎಂದರು.



ಸೂರಜ್ ಹೆಗ್ಡೆ ಆತ್ಮೀಯ ಸ್ನೇಹಿತ. ತ್ಯಾಗಕ್ಕೆ ಹೆಸರಾದವರು. ಇದೇ ಸ್ಥಾನ ಬೇಕು ಎಂದೂ ಕೇಳುತ್ತಿರಲಿಲ್ಲ. ನಾನು ಹಿಂದೆ ಅವರಿಗೆ ಮೈಸೂರು ಸಂಸದ ಸ್ಥಾನಕ್ಕೆ ಟಿಕೆಟ್ ಕೊಡಿಸಬೇಕು ಅಂತ ಬಹಳ ಹೋರಾಟ ಮಾಡಿದ್ದೆ. ಅವರು ದೇವರಾಜ ಅರಸು ಮೊಮ್ಮಗ. ಪಕ್ಷದ ನಿಷ್ಠಾವಂತ ಕಾರ್ಯಕರ್ತ. ನನ್ನ ಜೊತೆ ಪದಾಧಿಕಾರಿ ಆಗಿದ್ದರು ಎಂದು ಭಾವುಕರಾದರು.

ನಿಷ್ಠಾವಂತ ಕಾರ್ಯಕರ್ತ ಪಕ್ಷಕ್ಕೆ ಸಿಗುವುದು ಬಹಳ ವಿಶೇಷ. ಈಗಲೂ ಅನೇಕ ವಿಚಾರಗಳನ್ನು ಅವರ ವಿಷಯದಲ್ಲಿ ಚಿಂತಿಸಲಾಗಿತ್ತು. ಅವರ ಕುಟುಂಬದ ದುಃಖ ನೋಡಲು ಆಗುತ್ತಿಲ್ಲ. ಅವರ ತಂದೆ ಕೂಡ ಹಿರಿಯ ರಾಜಕಾರಣಿ. ಪಕ್ಷದ ಹಾಗೂ ಸರ್ಕಾರದ ಪರವಾಗಿ ಗೌರವ ನಮನ ಸಲ್ಲಿಸುತ್ತೇನೆ.

# ಟಿಶ್ಯೂ ಪೇಪರ್ ತರ ಯೂಸ್ ಮಾಡಿ ಬಿಸಾಕಿದ ಬಿಜೆಪಿ: ಗಣಿಗ

**ಮಂಡ್ಯ:** ತಮ್ಮ ಕ್ಷೇತ್ರವನ್ನೇ ತ್ಯಾಗ ಮಾಡಿದ ಸುಮಲತಾ ಅಂಬರೀಷ್ ಅವರಿಗೆ ರಾಜ್ಯಸಭಾ ಟಿಕೆಟ್ ನೀಡದೆ ಬಿಜೆಪಿ ಅನ್ಯಾಯ ಮಾಡಿದೆ ಎಂದು ಕಾಂಗ್ರೆಸ್ ಶಾಸಕ ರವಿಕುಮಾರ್ ಗಣಿಗ ಆರೋಪಿಸಿದರು.

ಮಂಡ್ಯದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಟಿಶ್ಯೂ ಪೇಪರ್ ತರ ಯೂಸ್ ಮಾಡಿ ಬಿಸಾಕೋದೆ ಬಿಜೆಪಿ ಕೆಲಸ. ಜೆಡಿಎಸ್‌ಗೆ ಬಿಸ್ಕೆಟ್ ಹಾಕೋ ತರ ಕೇಂದ್ರ ಮಂತ್ರಿ ಸ್ಥಾನ ಕೊಟ್ಟು ಕೂರಿಸಿದ್ದಾರೆ. ಇದೀಗ ಬಿಜೆಪಿಯವರು ಮಂಡ್ಯಕ್ಕೆ ಚಪ್ಪಡಿಕಲ್ಲು ಎಳೆದು ಒಕ್ಕಲಿಗರನ್ನು ಮುಗಿಸಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಮಂಡ್ಯ ಜನರಿಗೆ ಅಂಬರೀಶಣ್ಣನ ಕುಟುಂಬ ಮತ್ತು ದೇವೇಗೌಡರ ಮೇಲೆ ಅಪಾರ ಪ್ರೀತಿ ಇದೆ. ನಿಖಿಲ್ ಕುಮಾರಸ್ವಾಮಿ ಅವರನ್ನ ಎಂಪಿ ಚುನಾವಣೆಗೆ ನಿಲ್ಲಿಸಿದ್ದರೂ ಸುಮಲತಾ 1 ಲಕ್ಷಕ್ಕೂ ಅಧಿಕ ಮತಗಳಿಂದ ಗೆಲುವು ಸಾಧಿಸಿದ್ದರು. ಅಂದಿನ ಮುಖ್ಯಮಂತ್ರಿ ಮಗನ ವಿರುದ್ಧ ಗೆಲ್ಲೋದು ಸುಲಭವಲ್ಲ. ಸ್ವತಂತ್ರವಾಗಿ ಸುಮಲತಾ ಅಂಬರೀಶ್ ಗೆದ್ದಿದ್ದರು ಎಂದರು.

ಬಿಜೆಪಿ ಸೇರಿದ ಬಳಿಕ ಸುಮಲತಾ ಪುಟ 2ಕ್ಕೆ



## ಮಹಿಳೆ ಆತ್ಮಹತ್ಯೆ: ಕೊಲೆ ಆರೋಪ

**ಮೈಸೂರು:** ನೇಣುಬಿಗಿದ ಸ್ಥಿತಿಯಲ್ಲಿ ಗೃಹಿಣಿ ಶವ ಪತ್ತೆಯಾಗಿದೆ. ಪತಿ ಮತ್ತು ಕುಟುಂಬಸ್ಥರ ವಿರುದ್ಧವೇ ಕೊಲೆ ಆರೋಪ ಮಾಡಿರುವ ಘಟನೆ ಮೈಸೂರಿನ ಸರಸ್ವತಿಪುರಂನಲ್ಲಿ ನಡೆದಿದೆ.


ಸಂಧ್ಯಾ (30) ಮೃತ ದುರ್ದೈವಿ. ಹುಣಸೂರು ಪುರಸಭೆ ಮಾಜಿ ಅಧ್ಯಕ್ಷೆ ಗೀತಾ ನಿಂಗರಾಜು ಅವರ ಪುತ್ರಿ.



ನಗರದ ಸರಸ್ವತಿಪುರಂ ಜವರೇಗೌಡ ಪಾರ್ಕ್ ಸಮೀಪದಲ್ಲಿ ವಾಸವಿದ್ದರು. ಸಂಧ್ಯಾ ಅವರನ್ನ ಟಿ.ಕೆ ಬಡಾವಣೆ ನಿವಾಸಿ ಮಹದೇವ್ ಅವರ ಪುತ್ರ ಅಕ್ಷಯ್‌ಗೆ ಕೊಟ್ಟು ಮದುವೆ ಮಾಡಲಾಗಿತ್ತು. ಕೆಲವು ದಿನಗಳಿಂದ ಪತಿ–ಪತ್ನಿ ನಡುವೆ ಗಲಾಟೆ ನಡೆಯುತ್ತಿತ್ತು ಎನ್ನಲಾಗಿದೆ. ಮಹಿಳೆ ಪೋಷಕರು ಪತಿ ಕುಟುಂಬದ ವಿರುದ್ಧವೇ ಕೊಲೆ ಆರೋಪ ಮಾಡಿದ್ದಾರೆ. ಸರಸ್ವತಿ ಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ದೇವೇಗೌಡರಿಗೆ ಅಪಮಾನ: ಬಿ.ಕೆ.ಹರಿಪ್ರಸಾದ್ ವಾಗ್ದಾಳಿ

**ಬೆಂಗಳೂರು:** ದೇವೇಗೌಡರ ಸಹಾಯದಿಂದ ಸಂಸತ್ತಿನಲ್ಲಿ ಮಸೂದೆಗಳನ್ನು ಬಿಜೆಪಿ ಪಾಸ್ ಮಾಡಿಕೊಂಡಿದೆ. ಆದರೆ, ಈಗ ಅವರಿಗೆ ಅಪಮಾನ ಮಾಡಿದೆ ಎಂದು ಬಿಜೆಪಿ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ವಾಗ್ದಾಳಿ ನಡೆಸಿದರು



ದೇವೇಗೌಡರಿಗೆ ರಾಜ್ಯಸಭೆ ಟಿಕೆಟ್ ಕೈತಪ್ಪಿದ ಬಗ್ಗೆ ವಿಧಾನಸೌಧದಲ್ಲಿ ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ದೇವೇಗೌಡರಿಗೆ ಮಾಡಿರುವ ಅಪಮಾನಕ್ಕೆ ಮುಂದಿನ ದಿನಗಳಲ್ಲಿ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ವಿಧಾನ ಪರಿಷತ್ ಚುನಾವಣೆಗೆ ಜೆಡಿಎಸ್‌ನವರು ಅಭ್ಯರ್ಥಿ ಹಾಕುತ್ತಿದ್ದಾರೆ. ಅವರು ಅಭ್ಯರ್ಥಿ ಹಾಕಲಿ. ರಾಜಕೀಯದಲ್ಲಿ ಇವೆಲ್ಲ ಬೇಕಾಗುತ್ತದೆ. ನಮ್ಮ ಅಭ್ಯರ್ಥಿ ಗೆಲ್ಲುವ ವಿಶ್ವಾಸ, ಪುಟ 2ಕ್ಕೆ

## ಅಡುಗೆ ಎಣ್ಣೆ: ಎಸ್‌ಓಪಿ ಜಾರಿ

### ಇನ್ನುಂದೆ ಬೇಕಾಬಿಟ್ಟಿ ಮಾರಾಟ ಮಾಡಂಗಿಲ್ಲ

**ನವದೆಹಲಿ:** ಅಡುಗೆ ಎಣ್ಣೆ ಪೊಟ್ಟಣದ ಗಾತ್ರವನ್ನು ನಿಗದಿಪಡಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಎಣ್ಣೆ ಕಂಪನಿಗಳು ತಮಗಿಷ್ಟ ಬಂದಂತೆ ಗಾತ್ರ ಮತ್ತು ಪ್ರಮಾಣದಲ್ಲಿ ಎಣ್ಣೆ ಮಾರಾಟ ಮಾಡಲು ಅವಕಾಶ ಇಲ್ಲ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ಸೂಚಿಸಿದೆ.

ಗ್ರಾಹಕರಿಗೆ ಖಾದ್ಯ ತೈಲದ ಕಂಪನಿ, ಆಂಡ್‌ಗಳ ಮಾರಾಟ ದರವನ್ನು ಹೋಲಿಸಿ ಖರೀದಿಸಲು ಅನುಕೂಲವಾಗಲಿದೆ. ಅಡುಗೆ ಎಣ್ಣೆ ಪ್ಯಾಕೆಟ್ ಗಾತ್ರ ಮತ್ತು ಅವುಗಳಲ್ಲಿ ಭರ್ತಿ ಮಾಡುವ ತೈಲದ ಪ್ರಮಾಣಕ್ಕೆ ಸಂಬಂಧಿಸಿದಂತೆ ಇಲಾಖೆಯು ಎಸ್‌ಓಪಿ ತಿದ್ದುಪಡಿ ಮಾಡಿದೆ.



ಎಣ್ಣೆ ತಯಾರಕರು, ಪ್ಯಾಕ್ ಮಾಡುವವರು, ಆಮದುದಾರರು 3 ತಿಂಗಳಲ್ಲಿ ಈ ಹೊಸ ನಿಯಮ ಅಳವಡಿಸಿಕೊಳ್ಳಬೇಕು ಎಂದು ಗುಡುವು ವಿಧಿಸಿದೆ. ಪರಿಷ್ಕೃತ ಎಸ್‌ಓಪಿ ಪ್ರಕಾರ 9 ಬಗೆಯ ಪೊಟ್ಟಣಗಳಲ್ಲಿ ಮಾರಬಹುದಾಗಿದೆ. ಪುಟ 2ಕ್ಕೆ

## ಫಿಲಿಪೈನ್ಸ್‌ನಲ್ಲಿ ಭೂಕಂಪ: 19 ಮಂದಿ ಸಾವು, ಹಾನಿ



**ಮನಿಲಾ:** ಫಿಲಿಪೈನ್ಸ್‌ನ ದಕ್ಷಿಣ ಭಾಗದಲ್ಲಿ ಸೋಮವಾರ ಸಂಭವಿಸಿದ ಪ್ರಬಲ 7.8 ತೀವ್ರತೆಯ ಭೂಕಂಪದಿಂದ ಕನಿಷ್ಠ 19 ಮಂದಿ ಮೃತಪಟ್ಟಿದ್ದಾರೆ. ಹಲವರು ಗಾಯಗೊಂಡಿದ್ದಾರೆ. ಭಾರೀ ಹಾನಿಯಾಗಿದೆ.

ಭೂಕಂಪದ ಪರಿಣಾಮ ಹಲವಾರು ಕಟ್ಟಡಗಳು ಕುಸಿದು ಬಿದ್ದಿವೆ. ಫಿಲಿಪೈನ್ಸ್, ಇಂಡೋನೇಷ್ಯಾ, ತೈವಾನ್, ಪಲಾವ್, ಪಪುವಾ ನ್ಯೂಗಿನಿಯಾ ಮತ್ತು ಜಪಾನ್ ದೇಶಗಳಲ್ಲಿ ಸುನಾಮಿ ಎಚ್ಚರಿಕೆ ಘೋಷಿಸಲಾಗಿದೆ.

## ದೀದಿಗೆ ಶಾಕ್: ಬಿಜೆಪಿಗೆ 20 ಸಂಸದರು

**ನವದೆಹಲಿ:** ಮಮತಾ ಬ್ಯಾನರ್ಜಿ ದೆಹಲಿಯಲ್ಲಿ ಇಂಡಿ ಒಕ್ಕೂಟದೊಂದಿಗೆ ಸಭೆ ನಡೆಸುತ್ತಿರುವ ಸಂದರ್ಭದಲ್ಲಿಯೇ ತೃಣಮೂಲ ಕಾಂಗ್ರೆಸ್ ಸಂಸದರು ದೀದಿಗೆ ಶಾಕ್ ನೀಡಿದ್ದಾರೆ.

ಟಿಎಂಸಿ ಪಕ್ಷದ 20 ಬಂಡಾಯ ಸಂಸದರು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದು ಬಿಜೆಪಿಯ ನೇತೃತ್ವದ ಎನ್‌ಡಿಎ ಮೈತ್ರಿಕೂಟವನ್ನು ಸೇರಲು ಇಚ್ಛಿಸಿರುವುದಾಗಿ ತಿಳಿಸಿದ್ದಾರೆ.

ನಾವು ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿಯಿಂದ ಹೊರಬಂದಿರುವುದರಿಂದ ನಮಗೆ ಸಂಸತ್ತಿನಲ್ಲಿ ಪ್ರತ್ಯೇಕವಾಗಿ ಆಸನ ವ್ಯವಸ್ಥೆ ಮಾಡಬೇಕು ಮತ್ತು ಟಿಎಂಸಿ ಸಂಸದೀಯ ನಾಯಕರಾಗಿರುವ ಅಭಿಷೇಕ್ ಬ್ಯಾನರ್ಜಿ ಅವರ ನಾಯಕತ್ವವನ್ನು ನಾವು ಒಪ್ಪುವುದಿಲ್ಲ ಎಂದು ಬಂಡಾಯ ಸಂಸದರು ಮನವಿ ಮಾಡಿದ್ದಾರೆ.

ಬಂಡಾಯ ಬಣದ ನಾಯಕಿಯಾಗಿ ಕಾಕೋಲಿ ಘೋಷ್ ದಸ್ತಿದಾರ್ ಅವರನ್ನು ಗುರುತಿಸಬೇಕೆಂದು ಸ್ಪೀಕರ್ ಅವರಿಗೆ ಮನವಿ ನೀಡಲಾಗಿದೆ. ಮನವಿ ಪತ್ರಕ್ಕೆ ಅರೂಪ್ ಚಕ್ರವರ್ತಿ, ಪಾರ್ಥ ಭೌಮಿಕ್, ಶತಬ್ದಿ ರಾಯ್, ಜಗದೀಶ್ ವಸುನಿಯಾ, ಜೂನ್ ಮಾಲಿಯಾ



ಸೇರಿದಂತೆ 20 ಸಂಸದರು ಸಹಿ ಹಾಕಿದ್ದಾರೆ.

ಲೋಕಸಭೆಯಲ್ಲಿ ಟಿಎಂಸಿ ಒಟ್ಟು 28 ಸಂಸದರನ್ನು ಹೊಂದಿದೆ. ಅವರಲ್ಲಿ 20 ಸಂಸದರು ಬಂಡಾಯ ಎದ್ದಿರುವುದರಿಂದ ಮಮತಾ ಬ್ಯಾನರ್ಜಿ ಅವರಿಗೆ ಭಾರೀ ರಾಜಕೀಯ ಹಿನ್ನಡೆಯಾಗಿದೆ.

ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ಟಿಎಂಸಿ ಸೋಲು ಅನುಭವಿಸಿದ ಬೆನ್ನಲ್ಲೇ ಪಕ್ಷದಲ್ಲಿ ದೊಡ್ಡ ಮಟ್ಟದ ಭಿನ್ನಮತ ಉಂಟಾಗಿ ಈಗ ಎರಡು ಹೋಳಾಗಿದೆ.

# 3 ಬಾರಿ ಸಿಎಂ ಸ್ಥಾನ ಕೈ ತಪ್ಪಿತು

## ನನ್ನ ಹಣೆಬರಹವೋ ಏನೋ ಗೊತ್ತಿಲ್ಲ | ಪರಮೇಶ್ವರ್ ಭಾವುಕ ನುಡಿ

**ತುಮಕೂರು:** ನನಗೆ ಮೂರು ಬಾರಿ ಮುಖ್ಯಮಂತ್ರಿ ಸ್ಥಾನ ಕೈತಪ್ಪಿತು ಎಂದು ಬೇಸರ ವ್ಯಕ್ತಪಡಿಸಿದ ಡಿಸಿಎಂ ಡಾ.ಜಿ.ಪರಮೇಶ್ವರ್ ಭಾವುಕರಾಗಿ ಮಾತನಾಡಿದರು.

ಡಿಸಿಎಂ ಆದ ನಂತರ ಮೊದಲಬಾರಿಗೆ ಆಗಮಿಸಿದ ಜಿ.ಪರಮೇಶ್ವರ್ ಅವರನ್ನು ಅವರ ಒಡೆತನದ ಸಿದ್ಧಾರ್ಥ ಕಾಲೇಜಿನ ಸಿಬ್ಬಂದಿ ಸೋಮವಾರ ಆತ್ಮೀಯವಾಗಿ ಬರಮಾಡಿಕೊಂಡರು. ಈ ವೇಳೆ ಅವರು ಮನಬಿಚ್ಚಿ ಮಾತನಾಡಿದರು.

ರಾಜಕೀಯಕ್ಕೆ ನಾನು ಆಕಸ್ಮಿಕವಾಗಿ ಬಂದೆ. ಈಗ 40 ವರ್ಷಗಳ ಅನುಭವ ಬೆನ್ನಿಗಿದೆ. ಜನಪರ ಕೆಲಸ ಮಾಡಿದ್ದರಿಂದ ಜನರ ಪ್ರೀತಿ ಸಿಕ್ಕಿದೆ. ಇಲ್ಲವಾಗಿದ್ದರೆ ಜನರಾಗಲೀ; ಪಕ್ಷವಾಗಲೀ ನನ್ನನ್ನು ಗುರುತಿಸುತ್ತಿರಲಿಲ್ಲ ಎಂದರು.

2013ರ ಚುನಾವಣೆಯಲ್ಲಿ ಸೋತೆ. ಬಹುಶಃ ನಾನು ಗೆದ್ದಿದ್ದರೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗುತ್ತಿರಲಿಲ್ಲ.



ನನ್ನ ಹಣೆಬರಹವೋ ಏನೋ ಗೊತ್ತಿಲ್ಲ. ಆಗ ನಾನು ಸೋತ ಕಾರಣಕ್ಕೆ ಸಿದ್ದರಾಮಯ್ಯ ಸಿಎಂ ಆದರು ಎಂದು ಬೇಸರ ವ್ಯಕ್ತಪಡಿಸಿದರು.

2018ರ ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಪಕ್ಷ 80 ಸ್ಥಾನ ಗೆದ್ದಿತ್ತು. 30 ಸ್ಥಾನಗಳನ್ನು ಗೆದ್ದಿದ್ದ ಜೆಡಿಎಸ್ ಜತೆಗೆ ಪಕ್ಷ ಮೈತ್ರಿ ಮಾಡಿಕೊಂಡಾಗ ಕಾರಣಾಂತರದಿಂದ ಎಚ್.ಡಿ.ಕುಮಾರಸ್ವಾಮಿ ಸಿಎಂ ಆದರು. ಅವತ್ತು ನನ್ನನ್ನು ಮುಖ್ಯಮಂತ್ರಿ ಮಾಡಬಹುದಿತ್ತು. ಆದರೆ, ಆಗಲಿಲ್ಲ. ಎರಡನೇ ಭಾರಿಗೂ ಸಿಎಂ ಸ್ಥಾನ ಕೈತಪ್ಪಿತು ಎಂದು ಹೇಳಿದರು.

2023ರ ವಿಧಾನಸಭಾ ಚುನಾವಣೆ ನಂತರ ಸಿದ್ದರಾಮಯ್ಯ ಸಿಎಂ ಆದರು. ಈಗ ಮುಖ್ಯಮಂತ್ರಿ ಬದಲಾವಣೆ ವಿಚಾರ ಬಂದಾಗ ಸಿಎಂ ಸ್ಥಾನಕ್ಕೆ ಪ್ರಯತ್ನಿಸಿದೆ. ಈ ಭಾರಿ ಸಿಎಂ ಆಗುವ ವಿಶ್ವಾಸ ಇತ್ತು. ನನಗೆ ಸಿಎಂ ಸ್ಥಾನ ಕೊಡಲು ಸಾಧ್ಯವಿಲ್ಲವೆಂದರೆ ನಾನು ವಾಪಸ್ ಹೋಗುತ್ತೇನೆ ಎಂದು ಒಂದು ಹಂತದಲ್ಲಿ ಹೈಕಮಾಂಡ್‌ಗೆ ಹೇಳಿದ್ದೆ ಕೂಡ. ಕಡೆಗೆ ಯಾವುದೋ ಕಾರಣಕ್ಕೆ ಪರಿಸ್ಥಿತಿ ಬದಲಾಯಿತು. ರಾಜಕೀಯ ಪುಟ 2ಕ್ಕೆ

# ನಾನು ಮತ್ತೆ ಸಿಎಂ ಆಗಲು ಶಕ್ತಿ ತುಂಬಿ

## ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ । ಕನಕಪುರ ಮತ್ತು ಹಾರೋಹಳ್ಳಿಯಲ್ಲಿ ಸಿಎಂ ಪ್ರವಾಸ । ನಮಗೆ ಮೋಸ ಮಾಡಿದರೆ ತಮ್ಮ ಆತ್ಮಸಾಕ್ಷಿಗೆ ಮೋಸ ಮಾಡಿಕೊಂಡಂತೆ । ಅಧಿಕಾರ ನನ್ನದಲ್ಲ, ಈ ಜನರ ಸ್ವತ್ತು

ರಾಮನಗರ/ಕನಕಪುರ: ಭಾನುವಾರ ಜಿಲ್ಲೆಯ ಕನಕಪುರ ದಲ್ಲಿ ಸಂಭ್ರಮ ಮನೆಮಾಡಿತ್ತು. ಕಾರಣ ಇತ್ತೀಚೆಗಷ್ಟೇ ರಾಜ್ಯದ ಸಿಎಂ ಆಗಿ ಅಧಿಕಾರ ಸ್ವೀಕರಿಸಿದ ಡಿ.ಕೆ.ಶಿವ ಕುಮಾರ್ ತಮ್ಮ ಸ್ವಕ್ಷೇತ್ರ ಕನಕಪುರಕ್ಕೆ ಭೇಟಿ ನೀಡಿದ್ದರು. ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ ನಂತರ ಡಿಕೆಶಿ ತಮ್ಮ ಸ್ವಕ್ಷೇತ್ರಕ್ಕೆ ಆಗಮಿಸಿದ್ದು ಇದೇ ಮೊದಲು. ಕ್ಷೇತ್ರದ ಜನತೆ ಶಾಸಕರನ್ನಾಗಿ ತಮ್ಮನ್ನು ಆಯ್ಕೆ ಮಾಡಿಕೊಂಡು, ಶಕ್ತಿ ತುಂಬಿದ್ದು, ಇಂದು ಸಿಎಂ ಆಗಲು ಸಾಧ್ಯವಾಗಿದೆ ಎಂದು ಬಲವಾಗಿ ನಂಬಿರುವ ಡಿಕೆಶಿ ಜನತೆಗೆ ಕೃತಜ್ಞತೆ ಸಮರ್ಪಿಸಲು ಸ್ವಕ್ಷೇತ್ರಕ್ಕೆ ಆಗಮಿಸಿದ್ದರು.

ಇತ್ತ ಕನಕಪುರ ತಾಲ್ಲೂಕಿನ ಜನತೆ ತಮ್ಮ ನೆಲದ ಪುತ್ರ, ರಾಜ್ಯದ ಚುಕ್ಕಾಣಿ ಹಿಡಿದಿದ್ದಾರೆ ಎಂದು ಹಿರಿಹಿರಿ ಹಿಗ್ಗಿದ್ದರು. ಡಿಕೆಶಿ ಭೇಟಿಯನ್ನು ಸಂಭ್ರಮಿಸಿದರು. ಬೃಹತ್ ಗಾತ್ರದ ವಿವಿಧ ಬಗೆಯ ಹಾರಗಳನ್ನು ಕ್ರೇನ್ ಮೂಲಕ ಸಮರ್ಪಿಸಿ ಮನಃಪೂರ್ವಕವಾಗಿ ಅಭಿನಂದಿಸಿದರು.

ಬೆಂಗಳೂರು ನಗರದಿಂದ ಕನಕಪುರಕ್ಕೆ ತೆರಳವು ಮುನ್ನ ಡಿಕೆಶಿ ಟ್ರಾಫಿಕ್ ಕಿರಿಕಿರಿ ಉಂಟುಮಾಡಲು ಇಷ್ಟ ಪಡಲಿಲ್ಲ. ಹೀಗಾಗಿ ಅವರು ಮೆಟ್ರೋ ಮೂಲಕ ಕನಕ ಪುರ ರಸ್ತೆಯ ರೇಷ್ಮೆ ಸಂಸ್ಥೆ ಮೆಟ್ರೋ ನಿಲ್ದಾಣಕ್ಕೆ ಆಗಮಿಸಿದರು. ಅಲ್ಲಿಂದ ಕಾರಿನಲ್ಲಿ ಕನಕಪುರದ ಕಡೆಗೆ ತೆರಳಿದರು. ಮೆಟ್ರೋ ನಿಲ್ದಾಣದ ಬಳಿಯಿಂದಲೇ ರಸ್ತೆಯ ಇಕ್ಕೆಲಗಳಲ್ಲಿ ಕಿಕ್ಕಿರಿದು ನಿಂತಿದ್ದ ಸಾರ್ವಜನಿಕರು ಡಿ.ಕೆ. ಶಿವಕುಮಾರ್ ಅವರಿಗೆ ಜೈಕಾರ ಹಾಕಿದರು. ಪಟಾಕಿ ಸಿಡಿಸಿ ಸಂಭ್ರಮಿಸಿದರು. ದಾರಿಯುದ್ದಕ್ಕೂ ಶುಭಾಶಯ ಕೋರುವ ಬ್ಯಾನರ್ ಗಳು, ಫ್ಲೆಕ್ಸ್ ಗಳು ಕಾಂಗ್ರೆಸ್ ಪಕ್ಷದ ಬಾವುಟಗಳು ರಾರಾಜಿಸಿದವು.

### ಹಾರೋಹಳ್ಳಿಗೆ ಭೇಟಿ

ಸಿಎಂ ಡಿಕೆಶಿ ಮೊದಲಿಗೆ ಹಾರೋಹಳ್ಳಿಗೆ ಆಗಮಿಸಿದರು. ಅಲ್ಲಿ ಅವರಿಗೆ ಅದ್ದೂರಿ ಸ್ವಾಗತ ದೊರೆಯಿತು. ಅಲ್ಲಿ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದ ಅವರು ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದರು. ನಂತರ ತುಂಗಣಿ, ಟಿ. ಬೇಕುಪ್ಪೆ ಸರ್ಕಲ್, ನಾರಾಯಣಪುರ, ಕೋಡಿಹಳ್ಳಿ, ಹೇರಿಂದ್ಯಾಪನಹಳ್ಳಿ, ಕೊಳಗೊಂಡನಹಳ್ಳಿ, ಹುಣಸನಹಳ್ಳಿ, ಹೊಸದುರ್ಗಕ್ಕೆ ಆಗಮಿಸಿದರು. ನಂತರ ಕೋಡಿಹಳ್ಳಿಯಲ್ಲಿ ಭೋಜನ ಸೇವಿಸಿ ಸ್ವಲ್ಪ ಹೊತ್ತಿನ ವಿರಾಮ ಪಡೆದರು.

### ಕನಕಪುರದಲ್ಲಿ ಮುಗಿಲು ಮುಟ್ಟಿದ ಹರ್ಷೋದ್ಗಾರ, ಉಕ್ಕಿ ಹರಿದ ಅಭಿಮಾನದ ಹೊಳೆ

ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ಸ್ವಕ್ಷೇತ್ರಕ್ಕೆ ಭೇಟಿ ನೀಡಿದ ಡಿ.ಕೆ.ಶಿವಕುಮಾರ್ ಅವರಿಗೆ ಅಭಿಮಾನಿಗಳಿಂದ ಅಭೂತಪೂರ್ವ ಸ್ವಾಗತ ದೊರೆಯಿತು. ಅಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಕ್ಷೇತ್ರದ ಜನತೆಯನ್ನು ಕಂಡು ಭಾವುಕರಾದ ಡಿಕೆಶಿ, "ನಿಮ್ಮ ಪ್ರೀತಿಗೆ ಆಭಾರಿ. ನಿಮ್ಮಿಂದ ನಾನು ವಿಧಾನಸೌಧದ ಮೂರನೇ ಮಹಡಿಯಲ್ಲಿದ್ದೇನೆ. ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದೇನೆ. ನಿಮಗೆಲ್ಲರಿಗೂ ಕೋಟಿ, ಕೋಟಿ ವಂದನೆಗಳು" ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿನಾಯಪೂರ್ವಕವಾಗಿ ಹೇಳಿದರು.

### 2028ಕ್ಕೆ ಶಕ್ತಿ ತುಂಬಿ

ಕಗ್ಗಲಿಪುರಕ್ಕೆ ಭೇಟಿ ನೀಡಿದ್ದ ವೇಳೆ ಮಾತನಾಡಿದ ಅವರು, 2028 ಕ್ಕೆ ಮತ್ತೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಕ್ಷೇತ್ರದ ಜನ ಪ್ರಾರ್ಥನೆ ಮಾಡಬೇಕು. ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟ. ನನಗೆ ಆ ಧರ್ಮ ಈ ಧರ್ಮ, ಆ ಜಾತಿ ಈ ಜಾತಿ ಎನ್ನುವ ಬೇದವಿಲ್ಲ. ಹಾರೋಹಳ್ಳಿಯ ಮುದ್ದೆಗೌಡರು, ಅಲಿಸಾಬ್, ಪುಟ್ಟೇಗೌಡರು, ಸತ್ತಾರ್ ಸಾಹೇಬರು ಹೀಗೆ ಅನೇಕರು ನನ್ನನ್ನು ಮನೆ ಮಗನಾಗಿ ಬೆಳೆಸಿದರು. ಪಿಜಿಆರ್ ಸಿಂಧ್ಯಾ ಅವರು ನನ್ನ ಜೊತೆಯಾಗಿ ನಿಂತಿದ್ದಾರೆ. ನನ್ನ ವಿರುದ್ಧ ಸ್ಪರ್ಧಿಸಿದ್ದ ನಾರಾಯಣ ಗೌಡರು ಇಂದೂ ನನಗೆ ಬೆಂಬಲವಾಗಿದ್ದಾರೆ ಎಂದರು.

ಟಿ.ಬೇಕುಪ್ಪೆಯಲ್ಲಿ, ನಾರಾಯಣಪುರ, ಸಂತೆ ಕೋಡಿಹಳ್ಳಿ, ಹೆರಿಂದ್ಯಾಪನಹಳ್ಳಿಯಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್ ಅವರು, "ತಿಹಾರ್ ಜೈಲಿನಲ್ಲಿ ಇದ್ದಾಗ ನನ್ನ ಕ್ಷೇತ್ರದ ಜನರು ಕಣ್ಣೀರು ಸುರಿಸಿ ಪ್ರಾರ್ಥನೆ ಮಾಡಿದರು. ಆ ಪ್ರಾರ್ಥನೆ ನನ್ನನ್ನು ಕಾಪಾಡಿದೆ. ನೀವು ನನ್ನ ಪರವಾಗಿ ಕೊರಗಿದ್ದು ನನ್ನ ರಕ್ಷಿಸಿದೆ. ನನಗೆ ಹಣದ, ಅಧಿಕಾರದ ಅವಶ್ಯಕತೆ ಬೇಕಾಗಿಲ್ಲ. ನಿಮ್ಮ ಜೀವನದಲ್ಲಿ ಬದಲಾವಣೆ ಉಂಟಾಗಬೇಕು ಎಂಬುದೇ ನನ್ನ ಧ್ಯೇಯ" ಎಂದರು.

ಜನತೆಗೆ ಕೃತಜ್ಞತೆ ಸಮರ್ಪಣೆ ನಿಮಿತ್ತ ಸಿಎಂ ಡಿ ಕೆ ಶಿವಕುಮಾರ್ ಅವರು ಸಾತನೂರಿನ ಕಬ್ಬಾಳಮ್ಮ ದೇಗುಲದಲ್ಲಿ ಭಾನುವಾರ ಪೂಜೆ ಸಲ್ಲಿಸಿದರು. ಬಮೂಲ್ ಅಧ್ಯಕ್ಷ ಡಿ ಕೆ ಸುರೇಶ್ ಮತ್ತಿತರರು ಜತೆಗಿದ್ದರು.

### 500 ಕೆಜಿಗೂ ಹೆಚ್ಚು ತೂಕದ ಸೇಬಿನ ಹಾರ

ಕಗ್ಗಲೀಪುರ, ತುಂಗಣಿ, ನಾರಾಯಣಪುರಗಳಲ್ಲಿ ಅಭಿಮಾನಿಗಳು ಸುಮಾರು 500 ಕೆಜಿಗೂ ಹೆಚ್ಚು ಸೇಬು ಬಳಸಿ ಬೃಹತ್ ಹಾರಗಳನ್ನು ಮಾಡಿಸಿ ಡಿ.ಕೆ. ಶಿವಕುಮಾರ್ ಅವರ ಮೇಲಿನ ಅಭಿಮಾನ ಮೆರೆದರು. ತುಂಗಣಿಯಲ್ಲಿ ಎರಡು ಸೇಬಿನ ಹಾರಗಳು ಇದ್ದಿದ್ದು ವಿಶೇಷವಾಗಿತ್ತು. ಹೆರಿಂದ್ಯಾಪನಹಳ್ಳಿಯಲ್ಲಿ ಮಾಡಿದ್ದ ಸೇಬಿನ ಹಾರ 30 ಅಡಿಗೂ ಹೆಚ್ಚು ಉದ್ದವಾಗಿತ್ತು.

### ಪೂರ್ಣಕುಂಭ ಸ್ವಾಗತ

ನಾರಾಯಣಪುರದಲ್ಲಿ ಪೂಜಾಕುಣಿತ ಕಲಾವಿದರು ಸ್ವಾಗತಿಸಿದರೆ, ಕೊಳಗೊಂಡನಹಳ್ಳಿಯಲ್ಲಿ ನಂದಿಧ್ವಜ, ಪಟ ಕುಣಿತ, ನಂದಿಧ್ವಜ ಹೊತ್ತ ಕಲಾವಿದರು ಸ್ವಾಗತಿಸಿದರು. ಪ್ರತಿ ಊರಿನಲ್ಲೂ ತಮಟೆ, ನಗಾರಿ ಸದ್ದು ಮೇಳೈಸಿತ್ತು. ಬೇಕುಪ್ಪೆಯಲ್ಲಿ ಮನೆದೇವರು ಕೆಂಕೇರಮ್ಮನಿಗೆ ಹಾಗೂ ತುಂಗಣಿಯಲ್ಲಿ ಚಾಮುಂಡೇಶ್ವರಿ ದೇವಾಲಯದಲ್ಲಿ ಸಹೋದರ ಡಿ.ಕೆ.ಸುರೇಶ್ ಅವರ ಜೊತೆಗೂಡಿ ಪೂಜೆ ಸಲ್ಲಿಸಿದರು. ಕ್ಷೇತ್ರದ ಗಡಿ ಭಾಗದಲ್ಲಿ ಮಹಿಳೆಯರು ಪೂರ್ಣಕುಂಭ ಸ್ವಾಗತ ನೀಡಿದರು.



### ನಾನು ಸಿಎಂ ಆಗಿದ್ದೇನೆ, ಆದರೆ ನಾನು ನಿಮ್ಮ ಸೇವಕ

"ನಿಮ್ಮ ಪಾಲಿಗೆ ನಾನು ಸಿಎಂ ಅಲ್ಲ, ಸೇವಕ. ನನ್ನ ಕೊನೆಯುಸಿರು ಇರುವವರೆಗೂ ನಿಮ್ಮ ಮನೆ ಮಗನಾಗಿ ಸೇವೆ ಮಾಡುವೆ. ಸ್ವಂತ ಮಗನಂತೆ ನನ್ನನ್ನು ಬೆಳೆಸಿದ್ದೀರಿ. ನನ್ನ ಕ್ಷೇತ್ರದ ಪ್ರತಿಯೊಬ್ಬರಿಗೂ ಸಾಷ್ಟಾಂಗ ನಮಸ್ಕಾರಗಳು. ನಾನು ಈ ಕ್ಷೇತ್ರ ದಾಟಿ ಹೋದಾಗ ಮಾತ್ರ ಮುಖ್ಯಮಂತ್ರಿ. ಇಲ್ಲಿಗೆ ಬಂದಾಗ ನಿಮ್ಮ ಮನೆ ಸೇವಕ" ಎಂದರು.

"ನನ್ನ ಶಕ್ತಿ ನೀವೇ, ಬದುಕು ನೀವೇ, ಉಸಿರು ನೀವೇ. ನನ್ನ ಬದುಕಿನ ಕಷ್ಟ ಕಾಲದಲ್ಲಿ ನೀವು ನನಗೆ ನೆರಳಾಗಿದ್ದೀರಿ. ನಿಮ್ಮ ಸೇವಕನಾಗಿ ಮುಂದುವರಿದು, ಋಣ ತೀರಿಸುತ್ತೇನೆ" ಎಂದರು.

### ಆಂಬ್ಯುಲೆನ್ಸ್‌ಗೆ ದಾರಿ

ಟಿಬೇಕುಪ್ಪೆ ಗ್ರಾಮದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದ ವೇಳೆ ಆಂಬ್ಯುಲೆನ್ಸ್ ಬಂದ ಕಾರಣಕ್ಕೆ ಮಧ್ಯದಲ್ಲೇ ಭಾಷಣ ನಿಲ್ಲಿಸಿದ ಮುಖ್ಯಮಂತ್ರಿಯವರು ಜನರಿಗೆ ದಾರಿ ಬಿಡುವಂತೆ ಸೂಚಿಸಿದರು. ಆಂಬ್ಯುಲೆನ್ಸ್ ಹೋದ ನಂತರ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು. ಮೆಡಿಕಲ್ ಕಾಲೇಜು, ಸ್ಥಳೀಯರಿಗೆ ಉದ್ಯೋಗ, ಸರ್ವರಿಗೂ ಸೂರು, ಕೆಪಿಎಸ್ ಶಾಲೆಗಳು, ಸಮಸ್ಯೆ ಆಲಿಸಲು ಅಧಿಕಾರಿ ನೇಮಕ; ಸ್ವಕ್ಷೇತ್ರದ ಜನರಿಗೆ ಪಂಚ ವಚನಗಳನ್ನು ಕೊಟ್ಟರು.

### ಒಣ-ಹಸಿ ಮೆಣಸಿನಕಾಯಿ, ಬೆಳ್ಳುಳ್ಳಿ ಹಾರ

ನೂತನ ಸಿಎಂ ಅವರಿಗೆ ಯಾರ ದೃಷ್ಟಿಯೂ ತಾಕದಿರಲಿ ಎಂದು ಮೆಣಸಿನಕಾಯಿ ಹಾಗೂ ಬೆಳ್ಳುಳ್ಳಿ ಪೋಣಿಸಿ ಮಾಡಿದ್ದ ಬೃಹತ್ ಹಾರವನ್ನು ಹಾರೋಹಳ್ಳಿಯ ಜನರು ಹಾಕಿದ್ದು ವಿಶೇಷವಾಗಿತ್ತು. ಸುಮಾರು 50 ಕೆ.ಜಿ ಒಣ ಮೆಣಸಿನಕಾಯಿ 70 ಕೆಜಿಗೂ ಹೆಚ್ಚು ಹಸಿಮೆಣಸಿನ ಕಾಯಿ ಮತ್ತು 50 ಕೆ.ಜಿಗೂ ಹೆಚ್ಚು ಬೆಳ್ಳುಳ್ಳಿ ಬಳಸಲಾಗಿತ್ತು. ಕ್ರೇನ್ ಮೂಲಕ ಬೃಹತ್ ಸೇಬಿನ ಹಾರವನ್ನು ಹಾಕಿ ಅಭಿಮಾನಿಗಳು ಸಂಭ್ರಮಿಸಿದರು.

### ಅಜ್ಜಯ್ಯನ ಮಾರ್ಗದರ್ಶನ

ಸಿಎಂ ರೋಡ್ ಶೋ ನಡೆಸಿದ ವಾಹನದ ಮುಂಭಾಗದಲ್ಲಿ ಅಜ್ಜಯ್ಯನ ಫೋಟೊ ಅಳವಡಿಸಿದ್ದು ವಿಶೇಷವಾಗಿತ್ತು. ವೀರ ಗಂಗಾಧರ ಅಜ್ಜಯ್ಯನ ಮಾರ್ಗದರ್ಶನದಲ್ಲಿ ಮುನ್ನಡೆಯುವ ಸಂದೇಶ ಕೊಟ್ಟರು.

## ಭೂಮಿ ಮಾರಬೇಡಿ- ವ್ಯವಸಾಯ ಬಿಡಬೇಡಿ ಸಿಎಂ ಡಿಕೆಶಿ ಕಿವಿಮಾತು

ರಾಮನಗರ/ಕನಕಪುರ: ಕ್ಷೇತ್ರದ ಬಡವರಿಗೆ ತಲೆ ಮೇಲೆ ಸೂರು, ಸ್ಥಳೀಯರಿಗೆ ಕೈಗಾರಿಕೆಗಳಲ್ಲಿ ಉದ್ಯೋಗ ಕಡ್ಡಾಯ. ಮೆಡಿಕಲ್ ಕಾಲೇಜು ಶೀಘ್ರ ಪ್ರಾರಂಭ. ಸಮಸ್ಯೆಗಳನ್ನು ಆಲಿಸಲು ಅಧಿಕಾರಿ ನೇಮಕ" – ಹೀಗೆ ಕ್ಷೇತ್ರದ ಜನರಿಗೆ ಪಂಚ ವಚನಗ ಳನ್ನು ಸಿಎಂ ಡಿ.ಕೆ.ಶಿವಕುಮಾರ್ ಅವರು ನೀಡಿದರು.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಶಿವಕುಮಾರ್ ಅವರು ಇದೇ ಮೊದಲ ಬಾರಿಗೆ ತವರು ಕ್ಷೇತ್ರ ಕನಕಪುರದ ವಿವಿಧ ಭಾಗಗಳಿಗೆ ಭಾನುವಾರ ಭೇಟಿ ನೀಡಿ ಜನರಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿದರು. ನನ್ನ ಕ್ಷೇತ್ರದ ಜನರಿಗೆ ನನ್ನ ಮನೆ ಬಾಗಿಲು ಸದಾ ತೆರೆದಿರುತ್ತದೆ. ನಾನು ನಿಮ್ಮ ಸೇವೆಗೆ ಇರುವವನು. ನಿಮ್ಮ ಆಶೀರ್ವಾದದಿಂದ ಮುಖ್ಯಮಂತ್ರಿ ಸ್ಥಾನಕ್ಕೇರಿದ್ದೇನೆ. ನನ್ನ ಕ್ಷೇತ್ರಕ್ಕೆ ಕಾಲಿಟ್ಟ ಕ್ಷಣದಿಂದ ನಾನು ಜನರ ಸೇವಕ ಎಂದರು.

### ಮೆಡಿಕಲ್ ಕಾಲೇಜು ನನ್ನ ಕನಸಾಗಿತ್ತು

ತುಂಗಣಿ ಗ್ರಾಮದಲ್ಲಿ ಮಾತನಾಡಿದ ಅವರು, "ಅಕ್ಷರ, ಆಶ್ರಯ, ಆರೋಗ್ಯ ಹುಡುಕಿಕೊಂಡು ವಲಸೆ ಹೋಗಬೇಡಿ. ಅದೆಲ್ಲವೂ ಇಲ್ಲಿಯೇ ದೊರೆಯಲಿದೆ. ಕನಕಪುರದಲ್ಲಿ ದೊಡ್ಡ ಮೆಡಿಕಲ್ ಕಾಲೇಜು ಆಗಬೇಕು ಎನ್ನುವುದು ನನ್ನ ಕನಸಾಗಿತ್ತು. ಇಡೀ ರಾಜ್ಯದಲ್ಲಿ ತಾಲ್ಲೂಕು ಮಟ್ಟದಲ್ಲಿ ಮೆಡಿಕಲ್ ಕಾಲೇಜು ಇದ್ದರೆ ಅದು ಈ ಕ್ಷೇತ್ರದಲ್ಲಿ ಮಾತ್ರ. ಯಡಿಯೂರಪ್ಪ ಅವರು ನಮಗೆ ಘೋಷಣೆಯಾಗಿದ್ದ ಮೆಡಿಕಲ್ ಕಾಲೇಜನ್ನು ಚಿಕ್ಕಬಳ್ಳಾಪುರಕ್ಕೆ ನೀಡಿದ್ದರು. ನಾನು ಛಲಬಿಡದೇ ಕನಕಪುರಕ್ಕೆ ಮೆಡಿಕಲ್ ಕಾಲೇಜು ತಂದಿದ್ದೇನೆ" ಎಂದರು.

### ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಆದ್ಯತೆ

ಕ್ಷೇತ್ರದಲ್ಲಿನ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಮೊದಲ ಆದ್ಯತೆ ನೀಡುವುದನ್ನು ಕಡ್ಡಾಯಗೊಳಿಸಲಾಗುವುದು. ನನ್ನ ಕ್ಷೇತ್ರದ ಜನ ವಲಸೆ ಹೋಗುವುದನ್ನು ತಪ್ಪಿಸಲು ಕೆಲಸ ಮಾಡಲಾಗುತ್ತಿದೆ. ದೊಡ್ಡಆಲಳ್ಳಿ, ಹೊಸದುರ್ಗಗಳಲ್ಲಿ ಸಿಎಸ್ ಆರ್ ಅನುದಾನ ಬಳಸಿ ಕೆಪಿಎಸ್ ಶಾಲೆಗಳನ್ನು ನಿರ್ಮಾಣ ಮಾಡಲಾಗಿದೆ. ಬೆಂಗಳೂರಿನಲ್ಲಿ ದೊರೆಯುವ ಶಿಕ್ಷಣ ಇಲ್ಲಿಯೇ ದೊರೆಯಬೇಕು. ನಿಮಗೆ ಆಶ್ರಯ, ಆರೋಗ್ಯ, ಅಕ್ಷರ ನೀಡುವುದು ನನ್ನ ಮೊದಲ ಆದ್ಯತೆ. ಇದೇ ವೇಳೆ ಭೂಮಿ ಮಾರಬೇಡಿ– ವ್ಯವಸಾಯ ಬಿಡಬೇಡಿ" ಎಂದು ಕಿವಿಮಾತು ಹೇಳಿದರು.

### ನಿಮಗೆ ಮೋಸ ಮಾಡಿದರೆ ತಮ್ಮ ಆತ್ಮಸಾಕ್ಷಿಗೆ ಮೋಸ ಮಾಡಿಕೊಂಡಂತೆ

ಎಲ್ಲಾ ಪಕ್ಷದ ಮತದಾರರ ಮತ ಉಳಿಸಿಕೊಳ್ಳಬೇಕು. ಇನ್ನು ಮುಂದೆ ಯಾರೂ ನಮಗೆ ಮೋಸ ಮಾಡುವುದಿಲ್ಲ. ನಮಗೆ ಮೋಸ ಮಾಡಿದರೆ ಅವರು ತಮ್ಮ ಆತ್ಮ ಸಾಕ್ಷಿಗೆ ಮೋಸ ಮಾಡಿಕೊಂಡಂತೆ. ಇಲ್ಲಿವರೆಗೂ ತಪ್ಪು ನಿಮ್ಮದೇ ಆಗಿರಲಿ ಅಥವಾ ಅವರದೇ ಆಗಿರಲಿ ಎಲ್ಲರೂ ರಾಜಿ ಮಾಡಿಕೊಂಡು ಒಟ್ಟಾಗಿ ಕೆಲಸ ಮಾಡಿ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಿ. ರಾಜಕೀಯವಾಗಿ ಪ್ರಕರಣ ಬಂದರೆ ಅವುಗಳನ್ನು ರಾಜಿ ಮಾಡಿ ಕಳಿಸಿ ಎಂದು ಪೊಲೀಸರಿಗೆ ತಿಳಿಸಿರುವೆ. ಇದನ್ನು ಮಾದರಿ ಕ್ಷೇತ್ರ ಮಾಡಬೇಕು ಎಂದರು.



### ಕಬ್ಬಾಳಮ್ಮ ದೇಗುಲಕ್ಕೆ ಭೇಟಿ

ಸಿಎಂ ಡಿಕೆಶಿ ತಮ್ಮ ಸ್ವಕ್ಷೇತ್ರಕ್ಕೆ ಭೇಟಿ ನೀಡಿದ್ದ ವೇಳೆ ಸಾತನೂರಿನ ಕಬ್ಬಾಳಮ್ಮ ದೇವಾಲಯಕ್ಕೆ ಭೇಟಿ ಕೊಟ್ಟು ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ನಿಮ್ಮ ಕ್ಷೇತ್ರದ ಜನ ಇಂದು ಹಬ್ಬದಂತೆ ನಿಮ್ಮನ್ನು ಸ್ವಾಗತಿಸಿದೆ ಎಂದು ಕೇಳಿದಾಗ, "ಈ ಅಧಿಕಾರ ನನ್ನದಲ್ಲ, ಈ ಜನರ ಸ್ವತ್ತು. ಈ ಜನ ಬೆಂಗಳೂರಿಗೆ ಬಂದು ಭೇಟಿ ಮಾಡಲು ಆಗುವುದಿಲ್ಲ. ಪ್ರಮಾಣ ವಚನ ಕಾರ್ಯಕ್ರಮವನ್ನು ದೊಡ್ಡದಾಗಿ ಮಾಡಿದರೆ ಸಾವಿರಾರು ಬಸ್ ಜನ ಬರುತ್ತಾರೆ ಜನರಿಗೆ ತೊಂದರೆಯಾಗಲಿದೆ ಎಂದು ಸರಳ ಕಾರ್ಯಕ್ರಮ ಮಾಡಿದೆವು. ಹೀಗಾಗಿ ನಾನೇ ನಮ್ಮ ಜನರನ್ನು ನೋಡಲು ಬಂದಿರುವೆ. ಈ ಕಬ್ಬಾಳಮ್ಮ ದೇವಾಲಯ ಹಾಗೂ ಪ್ರದೇಶ ಈ ಹಿಂದೆ ಹೇಗಿತ್ತು ಈಗ ಹೇಗಾಗಿದೆ ಎಂಬುದೇ ನಮ್ಮ ಸಾಕ್ಷಿಗುಡ್ಡೆ. ಕ್ಷೇತ್ರದಲ್ಲಿ ಪ್ರತಿಹಳ್ಳಿಯಲ್ಲೂ ಸೇರಿದಂತೆ 300ಕ್ಕೂ ಹೆಚ್ಚು ದೇವಾಲಯ ಅಭಿವೃದ್ಧಿ ಮಾಡಿದ್ದೇವೆ. ಎಲ್ಲಾ ವರ್ಗದ ಜನ ನನಗೆ ಸತತವಾಗಿ ಆಶೀರ್ವಾದ ಮಾಡಿದ್ದು, ಜನರಿಗೆ ಕೃತಜ್ಞತೆ ಸಲ್ಲಿಸಲು ಬಂದಿದ್ದೇನೆ" ಎಂದು ತಿಳಿಸಿದರು.

---

## ಮೊದಲನೇ ಪುಟದಿಂದ

### ಟಿಶ್ಯೂ ಪೇಪರ್ ತರ ಯೂಸ್ ಮಾಡಿ ಬಿಸಾಕಿದ ಬಿಜೆಪಿ: ಗಣಿಗ

ಅವರು ಕುಮಾರ ಸ್ವಾಮಿಗೆ ಕ್ಷೇತ್ರ ಬಿಟ್ಟುಕೊಟ್ಟರು. ಕಾಂಗ್ರೆಸ್ ಸೇರಿದ್ದರೆ ನಮ್ಮ ಪಕ್ಷದಿಂದ ಗೆಲ್ಲುತ್ತಿದ್ದರು. ಆದರೆ ಬಿಜೆಪಿ ಸೇರಿದ್ದರಿಂದ ತ್ಯಾಗ ಮಾಡಬೇಕಾಯಿತು ಎಂದು ಟೀಕಿಸಿದರು.

### ಅಡುಗೆ ಎಣ್ಣೆ: ಎಸ್‌ಓಪಿ ಜಾರಿ

200 ಗ್ರಾಂ, 500 ಗ್ರಾಂ, 1 ಲೀಟರ್/ ಕೆಜಿ, 2 ಲೀಟರ್/ಕೆಜಿ, 3 ಲೀಟರ್/ಕೆಜಿ, 4 ಲೀಟರ್/ಕೆಜಿ, 5 ಲೀಟರ್/ಕೆಜಿ, 15 ಲೀಟರ್/ಕೆಜಿ, 20 ಲೀಟರ್/ ಕೆಜಿಯ ಪೊಟ್ಟಣ್ಣಗಳಲ್ಲಿ ಮಾರಾಟ ಮಾಡಬಹುದಾಗಿದೆ.

ತಾಳೆ ಎಣ್ಣೆ (ಪಾಮ್ ಆಯಿಲ್), ಸೋಯಾಬೀನ್, ಸೂರ್ಯಕಾಂತಿ, ಶೇಂಗಾ, ಸಾಸಿವೆ, ಎಳ್ಳು, ಅಕ್ಕಿ ಹೊಟ್ಟಿನಿಂದ ಮಾಡಿದ ಎಣ್ಣೆ, ಹತ್ತಿ, ಜೋಳದ ಎಣ್ಣೆಗಳಿಗೆ ಈ ಎಸ್‌ಓಪಿ ಅನ್ವಯ ಆಗಲಿದೆ. 200 ಎಂಎಲ್‌ಗಿಂತ ಕಡಿಮೆ ಇರುವ ಪ್ಯಾಕ್‌ಗಳಿಗೆ ಈ ನಿಯಮ ಅನ್ವಯಿಸಲ್ಲ.

### ದೇವೇಗೌಡರಿಗೆ ಅಪಮಾನ: ಬಿ.ಕೆ. ಹರಿಪ್ರಸಾದ್ ವಾಗ್ದಾಳಿ

ನಂಬಿಕೆ ಇದೆ ಎಂದರು. ನಾವು ಐದನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೇವೆ. ಎಲ್ಲ ಅಭ್ಯರ್ಥಿಗಳು ಗೆಲ್ಲುವ ಸಂಖ್ಯೆ ನಮ್ಮ ಬಳಿ ಇದೆ. ಈಗಾಗಲೇ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಎಲ್ಲ ಶಾಸಕರ ಜೊತೆ ಮಾತನಾಡಿದ್ದಾರೆ. ಜೆಡಿಎಸ್ ಬಳಿ ಸಂಖ್ಯೆಯೇ ಇಲ್ಲ. ಹೀಗಾಗಿ ಆತ್ಮಸಾಕ್ಷಿ ಮತ ಕೇಳುತ್ತಿದ್ದಾರೆ ಎಂದು ಟೀಕಿಸಿದರು.

### ರಾಜಕೀಯ ಲೆಕ್ಕಾಚಾರ, ಮುಂದುವರಿಯಲಿರುವ ಖಾತೆ ಕ್ಯಾತೆ

ಗಮನಿಸಿದರೆ ಈ ಖಾತೆ ಕ್ಯಾತೆ ಸದ್ಯಕ್ಕಂತೂ ಮುಗಿಯುವ ಯಾವುದೇ ಲಕ್ಷಣಗಳು ಗೋಚರಿಸುತ್ತಿಲ್ಲ. ಮುಂಬರುವ ವಿಧಾನ ಪರಿಷತ್ ಚುನಾವಣೆ ಮುಕ್ತಾಯಗೊಂಡ ಬಳಿಕ, ಎರಡನೇ ಹಂತದಲ್ಲಿ ಮತ್ತಷ್ಟು ಸಚಿವರು ತಮ್ಮ ಖಾತೆಗಳ ಬಗ್ಗೆ ಅಸಮಾಧಾನ ಹೊರಹಾಕುವ ಸಾಧ್ಯತೆ ದಟ್ಟವಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

### ರಾಜಕೀಯ ಚದುರಂಗದ ಆಟ

ಸರ್ಕಾರಿ ಗೌರವದೊಂದಿಗೆ ಅಂತಿಮ ನಮನ ಸಲ್ಲಿಸಲಾಗುವುದು ಎಂದು ತಿಳಿಸಿದರು.

### ಕೇವಲ ಕಾರ್ಪೊರೇಷನ್‌ಗೆ ಸೀಮಿತವಾಗಲು ಸಚಿವರ ನಕಾರ

ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಹೀಗಾಗಿ, ಈ ಎರಡೂ ಪ್ರಾಧಿಕಾರಗಳನ್ನು ತಮ್ಮ ಖಾತೆಗೆ ಅಧಿಕೃತವಾಗಿ ಸೇರ್ಪಡೆ ಮಾಡುವವರೆಗೆ ಯಾವುದೇ ಕಾರಣಕ್ಕೂ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡು ಅಧಿಕಾರ ಸ್ವೀಕರಿಸುವುದಿಲ್ಲ ಎಂದು ಅವರು ಸ್ಪಷ್ಟವಾಗಿ ತಿಳಿಸಿದ್ದಾರೆ.

### ರಾಜ್ಯಸಭೆಗೆ ಪ್ರೊ.ನಾಗರಾಜ್, ಪರಿಷತ್‌ಗೆ ರಘು ನಾಮಪತ್ರ

ಪರಿಷತ್ ಚುನಾವಣೆಗೆ ಸಮರ್ಥ ಅಭ್ಯರ್ಥಿಗಳನ್ನೇ ಪಕ್ಷದ ವರಿಷ್ಠರು ಆಯ್ಕೆ ಮಾಡಿದ್ದಾರೆ. ಈ ಆಯ್ಕೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಸಂತಸ ತಂದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯಸಭೆ ಅಭ್ಯರ್ಥಿ ಎಂ.ನಾಗರಾಜ್ ಅವರು, ಕುರುಬ ಸಮಾಜಕ್ಕೆ ಸೇರಿದವರು. ಆರ್‌ಎಸ್‌ಎಸ್ ಮತ್ತು ಎಬಿವಿಪಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ರಾಜ್ಯ ಬಿಜೆಪಿ ಉಪಾಧ್ಯಕ್ಷರಾಗಿದ್ದರು ಎಂದರು.

### ಅರಸು ಮೊಮ್ಮಗ ಸೂರಜ್ ಹೆಗ್ಡೆ ನಿಧನ

ಕಾಂಗ್ರೆಸ್ ಉಸ್ತುವಾರಿಗಳಾಗಿ ಪಕ್ಷದ ಸಂಘಟನೆ ಮೂಲಕ ರಾಜಕೀಯಕ್ಕೆ ಪ್ರವೇಶಿಸಿದ್ದರು.

### 3 ಬಾರಿ ಸಿಎಂ ಸ್ಥಾನ ಕೈತಪ್ಪಿತು

ವಾತಾವರಣ ಬದಲಾದಂತೆ, ತೀರ್ಮಾನಗಳು ಕೂಡ ಬದಲಾಗುತ್ತವೆ. ಹಾಗಾಗಿ, ಈಗ ಡಿಸಿಎಂ ಸ್ಥಾನ ಕೊಟ್ಟಿದ್ದಾರೆ. ಜವಾಬ್ದಾರಿಯುತ ಸ್ಥಾನ. ಅದಕ್ಕೆ ಕುಂದು ಬಾರದ ರೀತಿಯಲ್ಲಿ ನಡೆದುಕೊಳ್ಳುತ್ತೇನೆ ಎಂದು ಭಾವುಕರಾಗಿ ಮಾತನಾಡಿದರು.

### ಅಪೂರ್ಣ ಖಾತೆ ಬಗ್ಗೆ ರಾಜ್ಯ ಉಸ್ತುವಾರಿ ಬಳಿ ಅಸಮಾಧಾನ

ಮಧ್ಯಪ್ರವೇಶಿಸಿ ಈ ಗೊಂದಲವನ್ನು ಬಗೆಹರಿಸಬೇಕು ಎಂದು ಅವರು ಪಟ್ಟು ಹಿಡಿದಿದ್ದಾರೆ.

---

## ಬಿಳಿ ಸುಳಿ ರೋಗ: ಕೃಷಿ ವಿಜ್ಞಾನಿಗಳಿಂದ ಪರಿಶೀಲನೆ

ಶಿವಕುಮಾರ ತುಂಬಸೋಗೆ

ಎಚ್.ಡಿ.ಕೋಟೆ: ತಾಲೂಕಿನ ರೈತರು ಈ ವರ್ಷ ಮುಸುಕಿನ ಜೋಳ ಬೆಳೆಯಲ್ಲಿ ವ್ಯಾಪಕವಾಗಿ ಕಾಣಿಸಿಕೊಳ್ಳುತ್ತಿರುವ ಬಿಳಿ ಸುಳಿರೋಗದಿಂದ ಕಂಗಾಲಾಗಿದ್ದ ರೈತರಿಗೆ ಪರಿಹಾರ ಮಾರ್ಗವಾಗಿ ತಾಲೂಕಿನ ಕೃಷಿ ಅಧಿಕಾರಿ ವಿಶೇಷ ಹೆಜ್ಜೆ ಇಟ್ಟಿದ್ದಾರೆ. ಮಂಡ್ಯದ ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳನ್ನು ಕರೆಸಿ, ರೈತರ ಜಮೀನುಗಳಿಗೆ ಭೇಟಿ ನೀಡಿ ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದಾರೆ.

ಕೃಷಿ ವಿಜ್ಞಾನಿಗಳಾದ ಡಾ. ಮಹದೇವ್ ಹಾಗೂ ಡಾ. ಮಲ್ಲಿಕಾರ್ಜುನ್, ಉಪ ಕೃಷಿ ನಿರ್ದೇಶಕ ಧನಂಜಯ್, ತಾಲೂಕಿನ ಸಹಾಯಕ ಕೃಷಿ ನಿರ್ದೇಶಕ, ಪ್ರಸಾದ್, ಕೃಷಿ ಅಧಿಕಾರಿಗಳಾದ ಸಿದ್ದಪ್ಪ ಸ್ವಾಮಿ, ಪ್ರವೀಣ್ ಮತ್ತು ಸಿಬ್ಬಂದಿಗಳು

ಕೋಳಗಾಲ, ನಾಯಕನ ಹುಂಡಿ, ಯರಹಳ್ಳಿ, ಚಾಕಹಳ್ಳಿ ಚಕ್ಕೊಡನಹಳ್ಳಿ, ನಾಗನಹಳ್ಳಿ, ರಾಮೇನಹಳ್ಳಿ, ನೂರಲಕುಪ್ಪೆ, ಗಣೇಶನಗುಡಿ, ನೇರಳೆ ಸೇರಿದಂತೆ ಅನೇಕ ಗ್ರಾಮಗಳ ಜಮೀನುಗಳಿಗೆ ಭೇಟಿ ನೀಡಿ, ಮುಸುಕಿನ ಜೋಳದಲ್ಲಿ ಕಾಣಿಸಿಕೊಂಡಿರುವ ಬೂಜುರೋಗ /ಬಿಳಿ ಸುಳಿರೋಗದ ತಾಕುಗಳನ್ನು ಪರಿಶೀಲಿಸಿದ್ದಾರೆ. ಈ ವೇಳೆ ರೈತರೊಂದಿಗೆ ಸಂವಾದ ನಡೆಸಿ ರೋಗದ ನಿಯಂತ್ರಣ ಕ್ರಮಗಳು, ಬೆಳೆ ನಿರ್ವಹಣೆ ಹಾಗೂ ಅಗತ್ಯ ಮುಂಜಾಗ್ರತಾ ಕ್ರಮಗಳ ಕುರಿತು ಸಲಹೆ ಹಾಗೂ ಸೂಚನೆಗಳನ್ನು ನೀಡಿದ್ದಾರೆ.

ಬೆಳೆ ಬೆಳೆದ ಪ್ರಾರಂಭದ ದಿನಗಳಲ್ಲಿ ರೋಗದ ಹತೋಟಿಗೆ ಅನುಸರಿಸಬೇಕಾದ ಕ್ರಮಗಳು, ಸಮತೋಲಿತ ರಸಗೊಬ್ಬರಗಳ ಬಳಕೆ ಸೇರಿದಂತೆ ಕೃಷಿ ಇಲಾಖೆಯ ಇತರೆ ಮಾಹಿತಿಗಳನ್ನು ಹೊಂದಿರುವ ಪ್ರಚಾರ ರಥದ ಮೂಲಕ ಕ್ಯಾತನಹಳ್ಳಿ ಗ್ರಾ.ಪಂ ವ್ಯಾಪ್ತಿಯ ಗ್ರಾಮಗಳಲ್ಲಿ ರೈತರಿಗೆ ತಾಲೂಕಿನ ಕೃಷಿ ಅಧಿಕಾರಿ ಪ್ರಸಾದ್ ಮಾಹಿತಿ ನೀಡಿದ್ದರು. ಇತ್ತೀಚಿನ ದಿನಗಳಲ್ಲಿ ರೋಗ ನಿಯಂತ್ರಣ ಕಷ್ಟ ಸಾಧ್ಯವಾಗುತ್ತಿರುವುದು ಸೇರಿದಂತೆ ರೈತರಿಂದ ದೂರುಗಳು ಹೆಚ್ಚಾದ ಹಿನ್ನೆಲೆ ಕೃಷಿ ವಿಜ್ಞಾನಿಗಳನ್ನೇ ಕರೆಸಿ ಸಂವಾದ ಏರ್ಪಡಿಸಿರುವುದು ವಿಶೇಷವಾಗಿದೆ.

ಪ್ರಸಕ್ತ ಸಾಲಿನಲ್ಲಿ ಸರಗೂರು ಸೇರಿದಂತೆ ಸುತ್ತಮುತ್ತಲ ಅನೇಕ ಗ್ರಾಮಗಳಲ್ಲಿ ಸುಮಾರು 23 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮುಸುಕಿನ ಜೋಳ ಬೆಳೆದಿದ್ದಾರೆ. ಬಹುತೇಕ ಎಲ್ಲೆಡೆ ಬಿಳಿ ಸುಳಿ ರೋಗದಿಂದ ರೈತರು ಬಾಧಿತರಾಗಿದ್ದರು.

ಕೃಷಿ ನಿರ್ದೇಶಕ ಪ್ರಸಾದ್ ಮಾತನಾಡಿ, ಫಸಲು ಬೆಳೆಯುವ ಮೊದಲು ಭೂಮಿಯನ್ನು ಆಳವಾಗಿ ಎರಡು ಬಾರಿ ಬೇಸಿಗೆ ಉಳುಮೆ ಮಾಡಬೇಕು.



ಸಮಗ್ರ ಪೋಷಕಾಂಶ ನಿರ್ವಹಣೆಗಾಗಿ ಭೂಮಿಗೆ ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರಗಳ ಬಳಕೆ ಮಾಡಬೇಕು. ಜೈವಿಕ ಜೀವಾಣು ಮತ್ತು ಜೈವಿಕ ಗೊಬ್ಬರಗಳ ಬಳಕೆ, ಅಧಿಕಾರಿಗಳು ಶಿಫಾರಸ್ಸು ಮಾಡಿದ ರಸಗೊಬ್ಬರಗಳ ಬಳಕೆ ಮಾಡಿ, ಬದುಗಳ ಮೇಲೆ ಕಳೆ ನಿರ್ವಹಣೆ ಮಾಡಬೇಕು ಎಂದು ರೈತರಿಗೆ ತಿಳಿಸಿದರು.

ಪ್ರತೀ ವರ್ಷ ಒಂದೇ ಭೂಮಿಯಲ್ಲಿ ಮುಸುಕಿನ ಜೋಳ ಬೆಳೆ ಬದಲು ರಾಗಿ, ಅಲಸಂದೆ, ತೊಗರಿ ಮತ್ತು ಅವರೆ ಬೆಳೆಗಳೊಂದಿಗೆ ಬೆಳೆ ಪರಿವರ್ತನೆ ಮಾಡಬೇಕು. ಭೂಮಿಯ ತೇವಾಂಶ ಹೆಚ್ಚಾಗುವುದನ್ನು ತಡೆಯಲು ನೀರು ಬಸಿದು ಹೋಗುವಂತಹ ಬಸಿ ಕಾಲುವೆಗಳನ್ನು ನಿರ್ಮಾಣ ಮಾಡುವುದು.ಬಿತ್ತನೆ ಮೊದಲು ಯಾವುದೇ ಖಾಸಗಿ ಅಥವಾ ಸರ್ಕಾರಿ ಸಂಸ್ಥೆಯಿಂದ ಖರೀದಿಸಿದ ಬೀಜಗಳನ್ನು ಪ್ರತಿ ಕೆ.ಜಿ.ಬೀಜಕ್ಕೆ 3.0 ಗ್ರಾಂ ಮೆಟಾಲಾಕ್ಸಿಲ್ + ಮ್ಯಾಂಕೋಜೆಬ್ ಎಂಬ ಸಂಯುಕ್ತ ಶಿಲೀಂದ್ರನಾಶಕದಿಂದ ಬೆರಸಿ ಬಿತ್ತನೆ ಮಾಡಬೇಕು. ಬಿತ್ತನೆ ಮಾಡಿದ 15–20 ದಿನಗಳ ಅಂತರದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಸಂಯುಕ್ತ ಶಿಲೀಂದ್ರನಾಶಕವಾದ ಮೆಟಲಾಕ್ಸಿಲ್ 4% ಡಬ್ಲ್ಯೂ.ಪಿ. + ಮ್ಯಾಂಕೋಜೆಬ್ 64% ಪ್ರತಿ ಲೀಟರ್ ನೀರಿಗೆ 2 ಗ್ರಾಂ ನಂತೆ ಔಷಧಿ ಸಿಂಪಡಣೆ ಮಾಡಬೇಕು ಎಂದು ತಿಳಿಸಿದರು.

> ಸಾಲ ಮಾಡಿ ಬೆಳೆದ ಬೆಳೆ ಕೈ ಕೊಡುತ್ತಿದೆ. ಎರಡು ಬಾರಿ ಔಷಧಿ ಒಡೆದರು ರೋಗ ಕಡಿಮೆಯಾಗಿಲ್ಲ. ಇದರಿಂದ ಮಾಡಿದ ಸಾಲವೂ ತೀರದ ಚಿಂತೆಯಲ್ಲಿದ್ದೇವೆ. ಯೂರಿಯಾ ಸೇರಿದಂತೆ ಕ್ರಿಮಿನಾಶಕಗಳನ್ನು ನಿಗದಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ಅಂಗಡಿಯವರು ಮಾರಾಟ ಮಾಡುತ್ತಿದ್ದಾರೆ. ಇದಕ್ಕೆ ಅಧಿಕಾರಿಗಳು ಕಡಿವಾಣ ಹಾಕಬೇಕು.
>
> –ರವಿ ರೈತ.

ಇತ್ತೀಚೆಗೆ ಮುಸುಕಿನ ಜೋಳದ ಬೆಳೆಯಲ್ಲಿ ಬೂಜುರೋಗ/ಬಿಳಿ ಸುಳಿರೋಗ ವ್ಯಾಪಕವಾಗಿ ಕಾಣಿಸಿಕೊಳ್ಳುತ್ತಿದೆ. ಒಂದು ಗಿಡಕ್ಕೆ ರೋಗ ಕಾಣಿಸಿಕೊಂಡರೆ, ಗಾಳಿಯ ಮೂಲಕ ಬೆಳೆಯನ್ನೆಲ್ಲ ಆವರಿಸಿಕೊಳ್ಳಲಿದೆ. ಮೊದಲ ಔಷಧ ಒಡೆದ ನಂತರ, ಎರಡನೇ ಔಷಧವಾಗಿ ಅಜೋಕ್ಸಿಸ್ಟ್ರೋಬಿನ್ 18.2+ ಡೈಫ್ ನೊಕೊನೊಜೋಲ್ 11.4% ಪ್ರತಿ ಲೀಟರ್ ನೀರಿಗೆ 1 ಮೀ.ಲೀ. ಬೆರಸಿ ತಪ್ಪದೇ ಸಿಂಪರಣೆ ಮಾಡುವುದರಿಂದ ರೋಗ ಲಕ್ಷಣದಿಂದ ಬೆಳೆಗಳನ್ನು ಪಾರು ಮಾಡಬಹುದು ಎಂದು ರೈತರಲ್ಲಿ ಜಾಗೃತಿ ಮೂಡಿಸಿದರು.

## ಕೋಡಿಮೋಳೆ ಕೆರೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಶಂಕುಸ್ಥಾಪನೆ



ಚಾಮರಾಜನಗರ, ಸೇಲ್ಸ್ ಇಂಟರ್ ನ್ಯಾಷನಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅವರು ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಹಮ್ಮಿಕೊಳ್ಳಲಾಗುತ್ತಿರುವ ಕೋಡಿಮೋಳೆ ಕೆರೆ ಅಭಿವೃದ್ಧಿ ಕಾಮಗಾರಿಗೆ ಇಂದು ಗುದ್ದಲಿಪೂಜೆ ನೆರವೇರಿಸಿದರು.

ನಗರದ ಹೊರವಲಯದಲ್ಲಿರುವ ಕೋಡಿಮೋಳೆ ಕೆರೆ ಆವರಣದಲ್ಲಿ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು 4 ಕೋಟಿ 25 ಲಕ್ಷ ರೂ. ವೆಚ್ಚದ ಕೋಡಿಮೋಳೆ ಕೆರೆ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ ಮಾಡಿದರು.. ಇದೇ ವೇಳೆ ಮಾತನಾಡಿದ ಎಂ.ಎಸ್.ಐ.ಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ 3 ಕೋಟಿ 50 ಲಕ್ಷ ರೂ. ವೆಚ್ಚದಲ್ಲಿ ಕೋಡಿಮೋಳೆ ಕೆರೆ ಹಾಗೂ 60 ಲಕ್ಷ ರೂ. ವೆಚ್ಚದಲ್ಲಿ ಸೋಮವಾರಪೇಟೆಯ ಬಳಿ ಕಟ್ಟೆ ಅಭಿವೃದ್ಧಿ ಕಾಮಗಾರಿ ಮಾಡಲಾಗುತ್ತಿದೆ. ಕೋಡಿಮೋಳೆ ಕೆರೆ ಅಭಿವೃದ್ಧಿ ಕಾಮಗಾರಿಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ವಾಕಿಂಗ್ ಪಾತ್ (ಫುಟ್ಪಾತ್), ವಿದ್ಯುತ್ ದೀಪ, ಪಾರ್ಕಿಂಗ್ ಜನರು ಕುಳಿತುಕೊಳ್ಳಲು ಕಲ್ಲುಬೆಂಚುಗಳ ವ್ಯವಸ್ಥೆ, ರಸ್ತೆ ಅಭಿವೃದ್ಧಿಯೂ ಸೇರಿವೆ ಎಂದರು.

ಸೋಮವಾರಪೇಟೆಯಿಂದ ಭುವನೇಶ್ವರಿ ವೃತ್ತ ಹಾಗೂ ಭುವನೇಶ್ವರಿ ವೃತ್ತದಿಂದ ಜಾಲಹಳ್ಳಿ ಹುಂಡಿವರೆಗೆ ವಿದ್ಯುತ್ ಬೀದಿದೀಪಗಳನ್ನು 80 ಲಕ್ಷ ರೂ. ವೆಚ್ಚದಲ್ಲಿ ಅಳವಡಿಸಲಾಗುತ್ತಿದೆ. ಪಟ್ಟಣದ ಅಭಿವೃದ್ಧಿಗಾಗಿ ನೂರಾರು ಕೋಟಿ ವೆಚ್ಚದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ ಮಾತನಾಡಿ 1998-99ರಲ್ಲಿ ನಗರಾಭಿವೃದ್ಧಿ ಪ್ರಾಧಿಕಾರವನ್ನು ಚಾಮರಾಜನಗರದಲ್ಲಿ ಅಗ್ರೇಗೊಳಿಸಲಾಯಿತು. 2011-12ನೇ ಸಾಲಿನಲ್ಲಿ ಕೆರೆ ಅಭಿವೃದ್ಧಿ ಯೋಜನೆಯನ್ನು ಸರ್ಕಾರ ಜಾರಿಗೊಳಿಸಿತ್ತು. ಅಂದಿನಿಂದ ಈವರೆಗೆ ಬಿಡುಗಡೆಯಾದ ಅನುದಾನವನ್ನು ಕ್ರೋಢಿಕರಿಸಿ ಶಾಸಕರ ಮಾರ್ಗದರ್ಶನದಲ್ಲಿ ಕೋಡಿಮೋಳೆ ಕೆರೆ ಹಾಗೂ ಸೋಮವಾರಪೇಟೆಯ ಬಳಿ ಇರುವ ಕಟ್ಟೆ ಅಭಿವೃದ್ಧಿ ಕಾಮಗಾರಿ ಹಮ್ಮಿಕೊಳ್ಳಲಾಗಿದೆ. ಕಾಮಗಾರಿಗೆ ಸರ್ಕಾರದ ಅನುಮೋದನೆಯು ದೊರೆತಿದೆ ಎಂದರು.

ಮುಂಬರುವ ದಿನಗಳಲ್ಲಿ ಪಟ್ಟಣದಲ್ಲಿ 50:50ರ ಅನುಪಾತದಲ್ಲಿ ಲೇಔಟ್ ನಿರ್ಮಿಸಲಾಗುತ್ತಿದ್ದು, ಇದಕ್ಕಾಗಿ 14 ಕೋಟಿ 34 ಲಕ್ಷ ರೂ ವೆಚ್ಚದಲ್ಲಿ ಟೆಂಡರ್ ಕರೆಯಲಾಗುತ್ತಿದೆ. ಕೋಡಿಮೋಳೆ ಕೆರೆ ಕಾಮಗಾರಿಯಲ್ಲಿ ಜನರಿಗೆ ವಾಯುವಿಹಾರಕ್ಕೆ ಅನುಕೂಲವಾಗುವಂತೆ ವಾಕಿಂಗ್ ಪಾತ್, ಕೆರೆಯ ಸುತ್ತಲು ಗಿಡಗಳನ್ನು ಬೆಳೆಸಲಾಗುತ್ತದೆ. ವಿದ್ಯುತ್ ದೀಪ ಅಳವಡಿಸಲಾಗುತ್ತದೆ. ಪ್ರವಾಸೋದ್ಯಮ ಇಲಾಖೆಯಿಂದ ದೋಣಿ ವಿಹಾರಕ್ಕೂ ಅನುಕೂಲ ಕಲ್ಪಿಸಲಾಗುತ್ತದೆ. ಕೋಡಿಮೋಳೆ ಕೆರೆ ಅಭಿವೃದ್ಧಿಪಡಿಸಿ ನಿರ್ವಹಣೆಗಾಗಿ ಸಂಬಂಧಪಟ್ಟ ಪಂಚಾಯಿತಿಗೆ ಹಸ್ತಾಂತರಿಸಲಾಗುವುದು ಎಂದು ಅಸ್ಗರ್ ಮುನ್ನಾ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಕೆ.ಡಿ.ಪಿ. ಅಧಿಕಾರೇತರ ಸದಸ್ಯರಾದ ಸಯ್ಯದ್ ಮುಸಾಯಿಲ್, ತಾಲೂಕು ಪಂಚಾಯಿತಿ ಕೆ.ಡಿ.ಪಿ ಸದಸ್ಯರಾದ ಶ್ರೀನಿವಾಸ್, ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಮರಿಸ್ವಾಮಿ, ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಪುಟ್ಟಸ್ವಾಮಿ ದ್ವಾರಕಿ, ರಾಜು, ಕನಿಷ್ಠ ವೇತನ ಸಲಹಾ ಮಂಡಳಿ ಮಾಜಿ ಅಧ್ಯಕ್ಷರಾದ ಉಮೇಶ್, ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಸೀಮಾ, ಸಣ್ಣ ನೀರಾವರಿ ಇಲಾಖೆಯ ಇಂಜಿನಿಯರ್ ಮಂಜುಳ, ಮುಖಂಡರಾದ ಕೋಡಿಮೋಳೆ ಗೋವಿಂದಶೆಟ್ಟಿ, ಪ್ರಕಾಶ್, ರಮೇಶ್, ನಟರಾಜು, ಸ್ವಾಮಿ, ಇತರರು ಹಾಜರಿದ್ದರು.

ಬಳಿಕ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ (ಸಿಮ್ಸ್) ಹಿಂಭಾಗದಲ್ಲಿ 4 ಕೋಟಿ ರೂ. ವೆಚ್ಚದಲ್ಲಿ ವಿದ್ಯುತ್ ಚಿತಾಗಾರ ನಿರ್ಮಾಣಕ್ಕೆ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಗುದ್ದಲಿಪೂಜೆ ನೆರವೇರಿಸಿದರು. ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ನಗರಸಭೆ ಪೌರಾಯುಕ್ತರಾದ ಪರಶುರಾಮ ಛಲವಾದಿ, ಕಿರಿಯ ಎಂಜಿನಿಯರ್ ಗಿರೀಶ್ ಆರಾಧ್ಯ, ನಗರಸಭೆ ಮಾಜಿ ಅಧ್ಯಕ್ಷರಾದ ರಾಜಪ್ಪ, ಇತರೆ ಮುಖಂಡರು ಇದೇ ಸಂದರ್ಭದಲ್ಲಿ ಇದ್ದರು.

# ಒಳಮೀಸಲಾತಿ: ಕಾನೂನು ಜಾರಿಯಾಗಿಲ್ಲ

## ಸರ್ಕಾರಗಳ ವಿರುದ್ಧ ಎ. ನಾರಾಯಣಸ್ವಾಮಿ ಆರೋಪ । 'ಪ್ರತಿಭಾ ಪುರಸ್ಕಾರ'

ಚಾಮರಾಜನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ನೂತನ 'ಜಿಲ್ಲಾ ಡಾ. ಬಾಬು ಜಗಜೀವನ್‌ರಾಮ್ ಸಂಘಟನೆಗಳ ಒಕ್ಕೂಟ'ದ ಉದ್ಘಾಟನೆ ಹಾಗೂ 2026-27ನೇ ಸಾಲಿನ ಮಾದಿಗ ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ' ಸಮಾರಂಭವನ್ನು ಅದ್ಧೂರಿಯಾಗಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಗಣ್ಯರು ಸಮುದಾಯದ ಅಭಿವೃದ್ಧಿ, ಒಳಮೀಸಲಾತಿ ಹಾಗೂ ವಿದ್ಯಾರ್ಥಿಗಳ ಭವಿಷ್ಯದ ಕುರಿತು ಮಹತ್ವದ ವಿಚಾರಗಳನ್ನು ಹಂಚಿಕೊಂಡರು.

### ಒಳಮೀಸಲಾತಿ: ಕೇವಲ ಬೆನ್ನು ತಟ್ಟಿಕೊಳ್ಳುವ ಕೆಲಸವಾಗುತ್ತಿದೆ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಾಜಿ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ಯಾವುದೇ ಸರ್ಕಾರಗಳು ಒಳಮೀಸಲಾತಿಗೆ ಸಂಬಂಧಿಸಿದಂತೆ ಹೊಸ ತಿದ್ದುಪಡಿ ಅಥವಾ ಕಾನೂನನ್ನು ಜಾರಿಮಾಡಿಲ್ಲ ಎಂದು ಆರೋಪಿಸಿದರು. ನಾವೆಲ್ಲರೂ ಒಳಮೀಸಲಾತಿ ಸಿಕ್ಕಿಬಿಟ್ಟಿದೆ ಎಂದು ಸುಮ್ಮನೆ ಬೆನ್ನು ತಟ್ಟಿಕೊಂಡು ಬೀಗುತ್ತಿದ್ದೇವೆ. ಆದರೆ, ದೇಶದ ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ಶಾಸಕ ಸ್ಥಾನಗಳಲ್ಲಿಯೂ ಶೋಷಿತರಿಗೆ ಒಳಮೀಸಲಾತಿ ಸಿಗಬೇಕೆಂಬ ಕಾನೂನಿದ್ದರೂ, ಈ ಬಗ್ಗೆ ಯಾರೊಬ್ಬರೂ ಮಾಧ್ಯಮಗಳ ಮುಂದೆ ಮಾತನಾಡುತ್ತಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಕೇವಲ ಪದವಿ ಪ್ರಮಾಣಪತ್ರದಿಂದ ಉದ್ಯೋಗ ಸಿಗುವುದಿಲ್ಲ; ಬದಲಿಗೆ ಜ್ಞಾನ ಮತ್ತು ಕೌಶಲ್ಯದ ಆಧಾರದ ಮೇಲೆ ಕೆಲಸ ದೊರೆಯುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಅಲ್ಲದೆ, ಜಿಲ್ಲೆಯಲ್ಲಿ ಒಕ್ಕೂಟದ ವತಿಯಿಂದ ಐಎಎಸ್ ಕೋಚಿಂಗ್ ಸೆಂಟರ್ ತೆರೆದು ಸಮುದಾಯದ ಮಕ್ಕಳಿಗೆ ತರಬೇತಿ ನೀಡುವಂತೆಯೂ, ಅದಕ್ಕೆ ತಮ್ಮ ಸಂಪೂರ್ಣ ಸಹಕಾರವಿರಲಿದೆ ಎಂದೂ ಭರವಸೆ ನೀಡಿದರು.



### ಕೌಶಲ್ಯಾಧಾರಿತ ಶಿಕ್ಷಣ, ಸಮುದಾಯದ ಪ್ರೋತ್ಸಾಹ

ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಕೃಷಿ ಇಲಾಖೆ ಎಸ್‌ಸಿ/ಎಸ್‌ಟಿ ನೌಕರರ ಸಂಘದ ರಾಜ್ಯಾಧ್ಯಕ್ಷ ಎಂ. ತಿರುಮಲೇಶ್ ಮಾತನಾಡಿ, ಕೇವಲ ಸರ್ಕಾರಿ ನೌಕರಿ ಮಾತ್ರವಲ್ಲದೆ ಖಾಸಗಿ ವಲಯದಲ್ಲೂ ವಿಪುಲ ಅವಕಾಶಗಳಿವೆ. ಶಿಕ್ಷಣ ಎಂಬುದು ಕೇವಲ ಒಂದು ಮಾಧ್ಯಮವೇ ಹೊರತು ಅದೇ ಜೀವನವಲ್ಲ. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಅಗತ್ಯ ಕೌಶಲ್ಯಗಳನ್ನು ರೂಢಿಸಿಕೊಂಡರೆ ಅವಕಾಶಗಳು ತಾವಾಗಿಯೇ ಒಲಿದು ಬರುತ್ತವೆ ಎಂದರು. ಇದೇ ವೇಳೆ ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ಗೌರವಾಧ್ಯಕ್ಷ ಬಸವನಪುರ ರಾಜಶೇಖರ, ಸಮುದಾಯದ ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಪ್ರೋತ್ಸಾಹಿಸುವ ಸದುದ್ದೇಶದಿಂದ ಈ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಪುರಸ್ಕೃತ ಮಕ್ಕಳು ಉನ್ನತ ವ್ಯಾಸಂಗ ಮಾಡುವ ಮೂಲಕ ಸಮುದಾಯದ ಶೈಕ್ಷಣಿಕ ಪ್ರಗತಿಗೆ ಒತ್ತು ನೀಡಬೇಕು ಎಂದು ಆಶಿಸಿದರು.

### ಐಎಎಸ್, ಐಪಿಎಸ್ ಉನ್ನತ ವ್ಯಾಸಂಗಕ್ಕೆ ಆದ್ಯತೆ ನೀಡಿ

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಾಜಿ ಸಚಿವ ಕೋಟೆ ಎಂ. ಶಿವಣ್ಣ, ಪೋಷಕರು ತಮ್ಮ ಮಕ್ಕಳನ್ನು ಕೇವಲ ಸಾಮಾನ್ಯ ಶಿಕ್ಷಣಕ್ಕೆ ಸೀಮಿತಗೊಳಿಸದೆ ಐಎಎಸ್, ಐಪಿಎಸ್‌ನಂತಹ ಉನ್ನತ ವ್ಯಾಸಂಗದತ್ತ ಕೊಂಡೊಯ್ಯಬೇಕು ಎಂದು ಸಲಹೆ ನೀಡಿದರು. ಪ್ರಸ್ತುತ ರಾಜಕಾರಣವು ಹಿಂದಿನಂತಿಲ್ಲ; ಆದ್ದರಿಂದ ವಿದ್ಯಾರ್ಥಿಗಳು ರಾಜಕಾರಣದತ್ತ ಮುಖಮಾಡುವ ಬದಲು, ಉತ್ತಮ ಶಿಕ್ಷಣ ಪಡೆದು ಸಮಾಜದ ಸತ್ಪ್ರಜೆಗಳಾಗಿ ರೂಪುಗೊಳ್ಳುವತ್ತ ಗಮನಹರಿಸಬೇಕು ಎಂದು ಅವರು ಕರೆ ನೀಡಿದರು.

### 250 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಹಾಗೂ ಗಣ್ಯರ ಉಪಸ್ಥಿತಿ

ಕಾರ್ಯಕ್ರಮದಲ್ಲಿ 2026-27ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸುಮಾರು 250 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ, ಅವರಿಗೆ ನೆನಪಿನ ಕಾಣಿಕೆ, ಪ್ರಮಾಣಪತ್ರ ಹಾಗೂ ನಗದು ಪುರಸ್ಕಾರ ನೀಡಿ ಒಕ್ಕೂಟದ ವತಿಯಿಂದ ಗೌರವಿಸಲಾಯಿತು. ಸಮಾರಂಭದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ವಿ. ಗಿರೀಶ್ ಚಂದ್ರ, ಸರ್ಕಾರಿ ಎಸ್‌ಸಿ ನೌಕರರ ಸಂಘದ ರಾಜ್ಯಾಧ್ಯಕ್ಷ ಮಂಜುನಾಥ ಓಣಿಕೇರಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಎಂ.ಮುನಿರಾಜು, ಉಪನ್ಯಾಸಕ ಎಲ್.ಮಧುಕರ್, ಎಂ.ಪ್ರಶಾಂತ್ ಕುಮಾರ್, ಮುಖ್ಯಶಿಕ್ಷಕ ಬಿ. ಶಿವನಂಜು, ನಿವೃತ್ತ ಪ್ರಾಂಶುಪಾಲ ಪ್ರೊ. ಹೆಚ್.ಎಸ್.ಲಿಂಗಣ್ಣ, ಎಲ್‌ಐಸಿ ನಿವೃತ್ತ ಆಡಳಿತಾಧಿಕಾರಿ ಎಸ್.ರಾಜಣ್ಣ, ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಲಿಂಗರಾಜು, ಕಾಗಲವಾಡಿ ಮಹಾದೇವಸ್ವಾಮಿ, ಮೈಸೂರು ಮುಡಾದ ಕಂದಾಯ ಅಧಿಕಾರಿ ಸಿದ್ಧಾರ್ಥ, ಎಂ. ಚಂದ್ರಶೇಖರ್ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

# ಪರಿಸರ ಜಾಗೃತಿ ಮೂಡಿಸಿದ ಮೋದಿ



ಚಾಮರಾಜನಗರ, ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ದೇಶದಲ್ಲಿ, ಜಾಗತಿಕ ಮಟ್ಟದಲ್ಲಿ ಪರಿಸರ ಸಂರಕ್ಷಣೆ ಮತ್ತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ದೊಡ್ಡ ಮಟ್ಟದ ಅಭಿಯಾನಗಳು ನಡೆದಿವೆ. ಅವುಗಳು ದೇಶದ ಜನರಲ್ಲಿ ಪರಿಸರ ಜಾಗೃತಿ ಉಂಟು ಮಾಡುವಲ್ಲಿ ಯಶಸ್ವಿಯಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಮಾಜಿ ಸದಸ್ಯ ಪ್ರೊ.ಕೆ.ಆರ್. ಮಲ್ಲಿಕಾರ್ಜುನ ಹೇಳಿದರು.

ತಾಲೂಕಿನ ಕೊತ್ತಲವಾಡಿ ಗ್ರಾಮದಲ್ಲಿ ಬಿಜೆಪಿ ಗ್ರಾಮಾಂತರ ಮಂಡಲ ವತಿಯಿಂದ ನಡೆದ ವಿಶ್ವಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಗಿಡನೆಟ್ಟು ನೀರೆರೆದು ಮಾತನಾಡಿದರು.

ನರೇಂದ್ರಮೋದಿ ಅವರು ಮೊಟ್ಟಮೊದಲ ಪ್ರಧಾನಿಮಂತ್ರಿಯಾಗಿ ಪದಗ್ರಹಣ ಸ್ವೀಕರಿಸಿದ ಮೇಲೆ ಒಂದು ದೃಢ ನಿರ್ಧಾರ ತೆಗೆದುಕೊಂಡು, ಸ್ವಚ್ಚಭಾರತ ಅಭಿಯಾನದ ಮೂಲಕ ಪರಿಸರ ಉಳಿಸಬೇಕು. ಪರಿಸರ ಉಳಿದರೆ ಪ್ರತಿಯೊಬ್ಬರ ಜೀವನ ಉಳಿಯುತ್ತದೆ ಎಂಬ ಧ್ಯೇಯವಾಕ್ಯದಲ್ಲಿ ತಮ್ಮ ಆಡಳಿತ ಅರಂಭ ಮಾಡಿದರು.ದೇಶದಲ್ಲಿ ಶೌಚಾಲಯಗಳನ್ನು ನಿರ್ಮಿಸುವ ಮೂಲಕ ಪರಿಸರ, ಪ್ರತಿಯೊಬ್ಬರ ಗೌರವ ಕಾಪಾಡಬೇಕು ಎಂಬ ಉದ್ದೇಶನ್ನಿಟ್ಟು ಕೊಂಡು ಸ್ವಚ್ಚಭಾರತ ಅಭಿಯಾನದಡಿಯಲ್ಲಿ ದೇಶದಲ್ಲಿ ಸುಮಾರು 12 ಕೋಟಿ ಗೂ ಹೆಚ್ಚು ಶೌಚಾಲಯ ನಿರ್ಮಿಸುವ ಮೂಲಕ ಜನರಲ್ಲಿ ಪರಿಸರ ಜಾಗೃತಿ ಮೂಡಿಸಿದ ಕೀರ್ತಿ ನರೇಂದ್ರಮೋದಿ ಅವರಿಗೆ ಸಲ್ಲುತ್ತದೆ ಎಂದರು.

ಪ್ರಧಾನಿ ನರೇಂದ್ರಮೋದಿಯವರ ಆಶಯದಂತೆ ಪ್ರತಿಯೊಬ್ಬರೂ ಒಂದೊಂದು ಗಿಡನೆಟ್ಟು ಪರಿಸರ ಉಳಿಸಿ ಬೆಳೆಸಬೇಕು ಎಂದು ಕರೆ ನೀಡಿದರು.ಈ ಸಂದರ್ಭದಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಹಳ್ಳಿ ಕುಮಾರ್, ಕಾರ್ಯಕ್ರಮದ ಸಂಚಾಲಕ , ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಬೇಂದ್ರಪ್ಪ, ನಟರಾಜ್ ಗೌಡ, ಅರಕಲವಾಡಿ ನಾಗೇಂದ್ರ, ಸಾಹಿತಿ ಕೋಡಿಉಗನೆ ಮಂಜು, ನಿಕಟಪೂರ್ವ ಅಧ್ಯಕ್ಷ ಅರಕಲವಾಡಿ ಮಹೇಶ , ಗ್ರಾಮಾಂತರ ಮಂಡಲ ಪ್ರಧಾನ ಕಾರ್ಯದರ್ಶಿ ಮಾದಪ್ಪ ಕೊತ್ತಲವಾಡಿ, ಉಪಾಧ್ಯಕ್ಷ ಎಂ.ಎಸ್.ಮಹಾದೇವಸ್ವಾಮಿ, ಕಾರ್ಯದರ್ಶಿ ಮೋಹನ್ ಕುಮಾರ್, ನಾಗರಾಜು ಬಸಪ್ಪನ ಪಾಳ್ಯ, ಮಹಾಶಕ್ತಿ ಕೇಂದ್ರದ ಅಧ್ಯಕ್ಷರಾದ ಎಂ.ಕುಮಾರಸ್ವಾಮಿ , ಡಿ.ಮಂಜು, ಶಕ್ತಿಕೇಂದ್ರ ಅಧ್ಯಕ್ಷ ಶೇಖರ್, ಹಾಜರಿದ್ದರು.

## ಆದರ್ಶ ವಿದ್ಯಾಲಯಗಳಲ್ಲಿ ಪ್ರವೇಶ ಪರೀಕ್ಷೆಗಾಗಿ ಅರ್ಜಿ ಆಹ್ವಾನ

ಮೈಸೂರು:- 2026-27 ನೇ ಸಾಲಿನ ಆದರ್ಶ ವಿದ್ಯಾಲಯಗಳಲ್ಲಿ 7, 8 ಮತ್ತು 9 ನೇ ತರಗತಿಯಲ್ಲಿ ಖಾಲಿ ಇರುವ ಸೀಟುಗಳಿಗೆ ಭರ್ತಿಗಾಗಿ ಜೂನ್ 08 ರಿಂದ ಜೂನ್ 20 ವರೆಗೆ ಜಿಲ್ಲೆಯ ಆರು ಆದರ್ಶ ವಿದ್ಯಾಲಯಗಳಲ್ಲಿ ಪ್ರವೇಶ ಪರೀಕ್ಷೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆದರ್ಶ ವಿದ್ಯಾಲಯ ಹೆಚ್.ಡಿ.ಕೋಟೆ ತಾಲ್ಲೂಕು ರವೀಂದ್ರ ಬಾಬು ದೂ ಸಂ: 9902377356, ಆದರ್ಶ ವಿದ್ಯಾಲಯ ಹುಣಸೂರ ತಾಲ್ಲೂಕು ಚಂದ್ರಕುಮಾರ್ ದೂ ಸಂ:7892118767, ಆದರ್ಶ ವಿದ್ಯಾಲಯ ಕೆ.ಆರ್.ನಗರ ತಾಲ್ಲೂಕು ರುಕ್ಮಿಣಿ ದೂ ಸಂ: 998002884, ಆದರ್ಶ ವಿದ್ಯಾಲಯ ಜಾಕಿ ಕ್ವಾಟ್ರಸ್ ಸರ್ಕಲ್ ಮೈಸೂರು ನಗರ ಬೋರರಾಜು ದೂ ಸಂ: 8497847517, ಆದರ್ಶ ವಿದ್ಯಾಲಯ ನಂಜನಗೂಡು ತಾಲ್ಲೂಕು ಸುಮಾ ದೂ ಸಂ: 948272226, ಆದರ್ಶ ವಿದ್ಯಾಲಯ ಟಿ.ನರಸೀಪುರ ತಾಲ್ಲೂಕು ಮಂಜಣ್ಣ ದೂ ಸಂ: 9900163242 ಮುಖ್ಯ ಶಿಕ್ಷಕರನ್ನು ಸಂಪರ್ಕಿಸಬಹುದೆಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪೂರ್ವಭಾವಿ ಸಭೆ

ಮೈಸೂರು:- ಶ್ರೀ ಕೆಂಪೇಗೌಡ ಹಾಗೂ ಡಾ॥ ಫ.ಗು.ಹಳಕಟ್ಟಿಯವರ ಜನ್ಮದಿನ-ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯನ್ನು ಆಚರಿಸುವ ಸಂಬಂಧ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜೂನ್ 11 ರಂದು ಸಂಜೆ 4.00 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣ, ಸಿದ್ಧಾರ್ಥನಗರ ಇಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಎಂ.ಡಿ ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಲಯ ಅರಣ್ಯಾಧಿಕಾರಿ ಅಮಾನತು

ಗುಂಡ್ಲುಪೇಟೆ: -ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅಕ್ರಮ ಪ್ರವೇಶ ಹಾಗೂ ಮದ್ಯಪಾನ ಪ್ರಕರಣಕ್ಕೆ ಸಂಬಂಧಿಸಿದಂತೆ ಮದ್ದೂರು ವನ್ಯಜೀವಿ ವಲಯದ ವಲಯ ಅರಣ್ಯಾಧಿಕಾರಿ ಪುನೀತ್ ಕುಮಾರ. ಡಿ, ಅವರನ್ನು ಅರಣ್ಯ ಇಲಾಖೆ ಸೇವೆಯಿಂದ ಅಮಾನತುಗೊಳಿಸಿದೆ.




ಜೂ. 5ರಂದು ಮದ್ದೂರು ವಲಯದ ಹುಲಿಕಟ್ಟೆ ಕಳ್ಳಬೇಟೆ ತಡೆ ಶಿಬಿರ ವ್ಯಾಪ್ತಿಯ ಸೂಕ್ಷ್ಮ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಮೂವರು ಖಾಸಗಿ ವ್ಯಕ್ತಿಗಳು ಅಕ್ರಮವಾಗಿ ಪ್ರವೇಶಿಸಿ ಮದ್ಯಪಾನ ಮಾಡಿರುವ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದವು. ಈ ಘಟನೆಗೆ ರಾಜ್ಯದ ಅರಣ್ಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿತ್ತು. ಈ ಹಿನ್ನೆಲೆ ಪ್ರಕರಣದ ತನಿಖೆ ವೇಳೆ ದಾಖಲಿಸಲಾದ ವೈಲ್ಡ್‌ಲೈಫ್ ಅಪರಾಧ ವರದಿಯಲ್ಲಿ ಛಾಯಾಚಿತ್ರಗಳಲ್ಲಿ ಸ್ಪಷ್ಟವಾಗಿ ಕಾಣಿಸಿಕೊಂಡಿದ್ದ ಶಂಕಿತ ಆರೋಪಿಗಳ ಹೆಸರನ್ನು ದಾಖಲಿಸದೇ ಇರುವುದು ಹಾಗೂ ಅಗತ್ಯ ಕಾನೂನು ಕ್ರಮ ಕೈಗೊಳ್ಳದಿರುವ ಕಾರಣ ಇದು ಗಂಭೀರ ಕರ್ತವ್ಯ ಲೋಪವೆಂದು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಪರಿಗಣಿಸಿದ್ದಾರೆ.

ಸೂಕ್ಷ್ಮ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅನಧಿಕೃತ ಪ್ರವೇಶವೇ ಗಂಭೀರ ಅಪರಾಧವಾಗಿರುವ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಯ ನಿರ್ಲಕ್ಷ್ಯ ಮೇಲ್ನೋಟಕ್ಕೆ ಕಂಡುಬಂದ ಹಿನ್ನೆಲೆಯಲ್ಲಿ ಇಲಾಖೆ ವಿಚಾರಣೆ ಪೂರ್ಣಗೊಳ್ಳುವವರೆಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಮೀನಾಕ್ಷಿ ನೇಗಿ ಅವರು ಅಮಾನತು ಆದೇಶ ಹೊರಡಿಸಿದ್ದಾರೆ.

# ಡಿ.ಕೆ.ಸುರೇಶ್ ಬಳಿಗೆ ನಿಯೋಗ: ಎಸ್.ಗಂಗಾಧರಯ್ಯ ಪರಿಗಣಿಸಲು ಆಗ್ರಹ

ರಾಮನಗರ: ರಾಮನಗರ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಸುಗ್ಗನಹಳ್ಳಿ ವಿಎಸ್ ಎಸ್ ಎನ್ ಮಾಜಿ ಅಧ್ಯಕ್ಷ ಎಸ್.ಗಂಗಾಧರಯ್ಯ (ಗುಂಡಣ್ಣ) ಅವರನ್ನು ಪರಿಗಣಿಸುವಂತೆ ನಿಯೋಗವೊಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಮತ್ತು ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿದ್ದರು.

### ಗಂಗಾಧರಯ್ಯ ನೇತೃತ್ವ

ನಿಯೋಗದ ನೇತೃತ್ವವನ್ನು ಸ್ವತಃ ಎಸ್.ಗಂಗಾಧರಯ್ಯ ವಹಿಸಿದ್ದರು. ನಿಯೋಗದಲ್ಲಿ ಕಸಬಾ ಮತ್ತು ಕೈಲಾಂಚ ಹೋಬಳಿ ಭಾಗದ ಕಾಂಗ್ರೆಸ್ ನ ಹಿರಿಯ ಮತ್ತು ಯುವ ಕಾರ್ಯಕರ್ತರು ಭಾಗವಹಿಸಿದ್ದರು. ಡಿ.ಕೆ.ಸುರೇಶ್ ಅವರನ್ನು ಭೇಟಿ ಮಾಡಿದ ಪಕ್ಷದ ಕಾರ್ಯಕರ್ತರು, ಎಸ್ ಗಂಗಾಧ ರಯ್ಯ ಅವರು ಪಕ್ಷದಲ್ಲಿ ನಿಷ್ಠಾವಂತ ಕಾರ್ಯಕರ್ತನಾಗಿ ಶ್ರಮಿಸುತ್ತಿದ್ದಾರೆ. ಗ್ರಾಮ ಮತ್ತು ತಾಲೂಕಿನಲ್ಲಿ ಪಕ್ಷ ಸಂಘಟನೆಗೆ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ. ಅವರಿಗೆ ರಾಮನಗರ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ಕಲ್ಪಿಸಿದರೆ ಪಕ್ಷವನ್ನು ಮತ್ತಷ್ಟು ಬಲಿಷ್ಠವಾಗಿ ಸಂಘಟಿಸುತ್ತಾರೆ ಎಂದು ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಎಸ್.ಗಂಗಾಧರಯ್ಯ, ಕಳೆದ 22 ವರ್ಷದಿಂದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಸುಗ್ಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಪಕ್ಷದ ಧ್ಯೇಯೋದ್ದೇಶವನ್ನು ಸಾರುವ ಮೂಲಕ ಯುವ ಸಮೂಹವನ್ನು ಕಾಂಗ್ರೆಸ್ ಪಕ್ಷಕ್ಕೆ ಕರೆ ತರುವಲ್ಲಿ ಸಾಕಷ್ಟು ಕೆಲಸ ಮಾಡಿದ್ದೇನೆ. ಈ ಎಲ್ಲ ಕಾರಣಗಳಿಂದಾಗಿ ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಪಕ್ಷವೂ ಸದೃಢವಾಗುತ್ತಿದೆ ಎಂದು ಹೇಳಿದರು.



ನನ್ನ ಪಕ್ಷ ನಿಷ್ಠೆಯನ್ನು ಗುರುತಿಸಿ ನೀಡಿದ್ದ ಮಾರ್ಗದರ್ಶನದ ಮೇರೆಗೆ ಸುಗ್ಗನಹಳ್ಳಿ ವಿಎಸ್‌ಎಸ್‌ಎನ್ ನಿರ್ದೇಶಕನಾಗಿ ಅವಿರೋಧವಾಗಿ ಆಯ್ಕೆಯಾಗಿದ್ದೆ. ಇದೇ ಅವಧಿಯಲ್ಲಿ ಸಂಘದ ಅಧ್ಯಕ್ಷನಾಗಿ ಆಯ್ಕೆಯಾಗುವ ಭಾಗ್ಯವೂ ಲಭಿಸಿತು. ನನಗೆ ಸಿಕ್ಕ ಅಧಿಕಾರವಧಿಯಲ್ಲಿ ಸಾಕಷ್ಟು ಕೆಲಸ ಮಾಡಿದ್ದೇನೆ. ಜನಾಭಿಮುಖಿಯಾಗಿ ಹಾಗೂ ರೈತರಿಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದ್ದೇನೆ ಎಂದರು.

ನನ್ನ ಅವಧಿಯಲ್ಲಿ ಸಂಘಕ್ಕೆ 40 ಲಕ್ಷ ರು. ಆದಾಯ ಬಂದಿದ್ದು, ಎರಡು ಅಂತಸ್ತಿನ ಕಟ್ಟಡ ನಿರ್ಮಾಣ ಮಾಡಿ, ಲೋಕಾರ್ಪಣೆಗೊಳಿಸಲಾಗಿದೆ. ಕೆಸಿಸಿ ಬೆಳೆಸಾಲ, ರಸಗೊಬ್ಬರ ರೈತರಿಗೆ ವಿತರಣೆ ಮಾಡಲಾಗಿದೆ. ನನ್ನ ಅಧಿಕಾರಾವಧಿಯಲ್ಲಿ ಯಾವುದೇ ಲೋಪದೋಷವಾಗದಂತೆ ನೀಡಿದ ಜವಾಬ್ದಾರಿಯನ್ನು ನಿಷ್ಠೆಯಿಂದ ನಿಭಾಯಿಸಿದ್ದೇನೆ ಎಂದು ಹೇಳಿದರು. ಈಗ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಆಡಳಿತದಲ್ಲಿದ್ದು, ನಮ್ಮದೇ ಪಕ್ಷದ ಶಾಸಕರು ಇದ್ದಾರೆ. ಇದೆಲ್ಲವನ್ನು ಬಳಸಿಕೊಂಡು ಹಾಗೂ ಹಿರಿಯ - ಕಿರಿಯ ಮುಖಂಡರನ್ನು ವಿಶ್ವಾಸಕ್ಕೆ ಪಡೆದು ಪಕ್ಷವನ್ನು ಸದೃಢವಾಗಿ ಸಂಘಟಿಸುತ್ತೇನೆ ಎಂದರು. ಎಸ್.ಗಂಗಾಧರಯ್ಯ ಮತ್ತು ನಿಯೋಗದ ಮನವಿಯನ್ನು ಆಲಿಸಿದ ಡಿ.ಕೆ.ಸುರೇಶ್ ಮತ್ತು ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಈ ವಿಚಾರದಲ್ಲಿ ಸೂಕ್ತವಾಗಿ ಸ್ಪಂದಿಸುವ ಭರವಸೆ ನೀಡಿದ್ದಾರೆ.

ಂಂಂಂ

# ರಾಜ್ಯದಲ್ಲಿ ಬಿಎಸ್ಪಿಯಿಂದ ಮಾತ್ರ ದಲಿತ ಸಿಎಂ ಸಾಧ್ಯ: ನಿತಿನ್ ಸಿಂಗ್

ಚಾಮರಾಜನಗರ: ರಾಜ್ಯದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಇನ್ನಿತರೆ ಪಕ್ಷಗಳಿಂದ ದಲಿತ ಸಿಎಂ ಅಸಾಧ್ಯವಾಗಿದ್ದು, ಬಿಎಸ್ಪಿಯಿಂದ ಮಾತ್ರ ದಲಿತರು ಮುಖ್ಯಮಂತ್ರಿಯಾಗಲು ಸಾಧ್ಯವಿದೆ ಎಂದು ಬಿಎಸ್‌ಪಿ ಕೇಂದ್ರೀಯ ಉಸ್ತುವಾರಿ ನಿತಿನ್ ಸಿಂಗ್ ಹೇಳಿದರು.

ಯಳಂದೂರು ಪಟ್ಟಣದ ಅಂಬೇಡ್ಕರ್ ಭವನದ ಆವರಣದಲ್ಲಿ ಬಿಎಸ್‌ಪಿ ಯಳಂದೂರು ಬ್ಲಾಕ್ ಸಮಿತಿ ಬಹು ಜನರ ಜನಜಾಗೃತಿ ಕಾರ್ಯಕ್ರದ ಅಂಗವಾಗಿ ಭಾನುವಾರ ಆಯೋಜಿಸಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನದ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಕಾನ್ಶಿರಾಂ ಅವರು ಬುದ್ಧ, ಬಸವ, ಫುಲೆ, ಶಾಹು ಮಹಾರಾಜ್, ರಾಮಸ್ವಾಮಿ ನಾಯ್ಕರ್, ನಾರಾಯಣ ಗುರು ಹಾಗೂ ಅಂಬೇಡ್ಕರ್ ಅವರ ಚಿಂತನೆಗಳಲ್ಲಿ ಬಹುಜನ ಸಮಾಜದ ಆಶಯಗಳು ಇರುವುದನ್ನು ಮನಗಂಡಿದ್ದರು. ನಾಲ್ವಡಿಯವರ ಜನಪರ ಆಡಳಿತಗಳಿಂದ ಪ್ರೇರೇಪಣೆಗೊಂಡು ಎಸ್ಸಿ, ಎಸ್‌ಟಿ, ಒಬಿಸಿ, ಅಲ್ಪಸಂಖ್ಯಾತರು ರಾಜ್ಯಾಧಿಕಾರ ಪಡೆಯಲು ರಾಜಕೀಯ ಕ್ಷೇತ್ರದಿಂದ ಮಾತ್ರ ಸಾಧ್ಯ ಎಂಬುದನ್ನು ಕಂಡುಕೊಂಡರು. ಹಾಗಾಗಿ, ನಿರ್ಲಕ್ಷಿತ ಸಮುದಾಯಗಳು ಮನುವಾದಿಗಳ ಹಿಡಿತದಿಂದ ಹೊರಬಂದು ದೇಶದ ಗದ್ದುಗೆ ಹಿಡಿಯಬೇಕು ಎಂದರು.




ಬಿಎಸ್‌ಪಿ ಸ್ವಾಭಿಮಾನದ ಸಂಘಟನೆಯಾಗಿ ಅಂಬೇಡ್ಕರ್ ಆಶಯದಂತೆ ಸರ್ವರಿಗೂ ರಾಜಕೀಯ ಮತ್ತು ಸಮಾನತೆ ಒದಗಿಸಲು ಕಟಿಬದ್ಧವಾಗಿದೆ. ಆದರೆ, ಬಿಎಸ್‌ಪಿ ಹೊರತುಪಡಿಸಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಂದ ದಲಿತ ಮುಖ್ಯಮಂತ್ರಿ ಸ್ಥಾನ ನಿರೀಕ್ಷಿಸಲುಸಾಧ್ಯವಿಲ್ಲ' ಎಂದರು.

ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಎಂ.ಕೃಷ್ಣಮೂರ್ತಿ ಮಾತನಾಡಿ, ನಾಲ್ವಡಿ ಕೃಷ್ಣರಾಜರು ತಮ್ಮ ಆಡಳಿತದಲ್ಲಿ ಸಾಮಾನ್ಯ ಜನರಿಗೂ ಶಿಕ್ಷಣ, ಸಮಾನತೆ, ಜನಾಡಳಿತದ ಕನಸನ್ನು ಈಡೇರಿಸಿದ್ದರು. ತುಳಿತಕ್ಕೆ ಒಳಗಾದ ಮೂಲ ನಿವಾಸಿಗಳು ಸಹ ನಾಡು ಕಟ್ಟಲು ಅವಕಾಶ ಕಲ್ಪಿಸಿದ್ದರು ಎಂದು ತಿಳಿಸಿದರು.

ಬಿಎಸ್‌ಪಿ ರಾಜ್ಯ ಉಸ್ತುವಾರಿ ಹ.ರಾ.ಮಹೇಶ್ ಮಾತನಾಡಿ, ಅಂಬೇಡ್ಕರ್ ವಾದ ನೀಲಿ ಬಣ್ಣ ಪ್ರತಿನಿಧಿಸುತ್ತದೆ. ಬಹುಜನ ಸಿದ್ಧಾಂತಗಳ ಮೂಲಕ ರಾಜಕೀಯ ಪ್ರವೇಶಿಸಿದ ಮಾಯಾವತಿ 31 ಸ್ಥಾನವನ್ನು ಪಡೆದು ಯುಪಿ ಮುಖ್ಯಮಂತ್ರಿ ಆದರು. ಕರ್ನಾಟಕದಲ್ಲಿ 2028ರಲ್ಲಿ 20 ಸ್ಥಾನ ಪಡೆದರೆ ದಲಿತರು ಮುಖ್ಯಮಂತ್ರಿ ಸ್ಥಾನಕ್ಕೆ ಏರಬಹುದು ಎಂದರು. ಗಂಗಾಧರ್ ಬಹುಜನ್, ಜಾಕೀರ್ ಹುಸೇನ್, ಬ.ಮ.ಕೃಷ್ಣಮೂರ್ತಿ, ಎನ್.ನಾಗಯ್ಯ, ಕಾಂತಪ್ಪ ಆಲಂಕಾರ್, ಕೊಳ್ಳೇಗಾಲ ಬ್ಲಾಕ್ ಅಧ್ಯಕ್ಷ ಶಂಕರ್ ಚೇತನ್, ಹೊನ್ನೂರು ಮಲ್ಲಿಕ್, ಕಾರ್ಯದರ್ಶಿ ಶಾಂತರಾಜ್, ರವಿ, ಶಿವಶಂಕರ್, ಮಣಿ, ಶಿವಾಲಂಕಾರಾಯ್ಯ, ಚಿನ್ನಮ್ಮ, ಬಸವರಾಜ್, ಶಿವಕುಮಾರ್, ಚಂದ್ರಕಾಂತ್, ಶಶಿಧರ್ ಭಾಗವಹಿಸಿದ್ದರು.

## ವಿದ್ಯುತ್ ವ್ಯತ್ಯಯ

ಮೈಸೂರು:- ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ 66/11 ಕೆ.ವಿ ಬೋಗಾದಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ 1ನೇ ತ್ರೈಮಾಸಿಕ ನಿರ್ವಹಣಾ ಕೆಲಸದ ನಿಮಿತ್ತ ಜೂನ್ 09 ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 06:00 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.




**ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:-** ಜನತಾನಗರ, ಬೋಗಾದಿ 2ನೇ ಹಂತ North & South, ಗಂಗೋತ್ರಿ ಕ್ಯಾಂಪಸ್, ಗಂಗೋತ್ರಿ ಕ್ವಾಟ್ರಸ್, ದಾಸನಕೊಪ್ಪಲು, ಮರಟಿ ಕ್ಯಾತನಹಳ್ಳಿ, ರೂಪ ನಗರ, ದೀಪಾ ನಗರ, ಬೋಗಾದಿ ಗ್ರಾಮ, ಪ್ರೀತಿ ಲೇಔಟ್, ಆರ್.ಎಂ.ಪಿ ಲೇಔಟ್, ವಿಜಯನಗರ 3ನೇ ಹಂತ, ಹಿನಕಲ್, ವಿಜಯನಗರ 4ನೇ ಹಂತ, ವಿಜಯಶ್ರೀಪುರ, ಸುಧಾ ಲೇಔಟ್, ರೈಲ್ವೆ ಲೇಔಟ್, ಎಸ್.ಬಿ.ಎಂ ಲೇಔಟ್, ವಾಗ್ದೇವಿನಗರ, ಸಿ.ಎಫ್.ಟಿ.ಆರ್.ಐ ಲೇಔಟ್, ಯುನಿವರ್ಸಿಟಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ., ವಿ.ವಿ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮುಂದಿನ ಪೀಳಿಗೆಗಾಗಿ ಪರಿಸರ ಉಳಿಸಿ ಬೆಳೆಸುವ ಅಗತ್ಯತೆ ಇದೆ

**ಕುರುಬೂರು ಶಾಂತಕುಮಾರ್**



ಚಾಮರಾಜನಗರ, ನಮ್ಮ ಉಳಿವಿಗಾಗಿ ಪರಿಸರ, ಕೆರೆಗಳನ್ನು ಸಂರಕ್ಷಣೆ ಮಾಡುವುದು ಅತ್ಯಂತ ಅಗತ್ಯವಾಗಿದ್ದು, ರೈತರು ಮನಸ್ಸು ಮಾಡಿದರೆ ದೇಶದಲ್ಲಿ ಪರಿಸರ ಸಮತೋಲನ ಸುಧಾರಿಸಬಹುದು ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಹೇಳಿದರು.ಅಂಬೇಡ್ಕರ್

ನಗರದ ಎಪಿಎಂಸಿ ಕಚೇರಿ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ಚಿಂತನ ಮಂಥನ ಕಾರ್ಯಕ್ರಮವನ್ನು ಗಿಡಕ್ಕೆ ನೀರೆರೆದು ಉದ್ಘಾಟಿಸಿ ಮಾತನಾಡಿದರು.

ದೇಶದಲ್ಲಿ ಜನಸಂಖ್ಯೆ ಹೆಚ್ಚಳವಾಗುತ್ತಿದೆ ಹೊರತು ಮರಗಳ ಸಂಖ್ಯೆ ಹೆಚ್ಚಾಗುತ್ತಿಲ್ಲ. ಜನಸಂಖ್ಯೆಗೆ... ಆಧಾರವಾಗಿ ಮರಗಳು ಹೆಚ್ಚಾಗಬೇಕು ಆಗ ಪ್ರತಿಯೊಬ್ಬರಿಗೂ ಸಂಪೂರ್ಣ ಸಿಗುತ್ತದೆ. ಇಲ್ಲದಿದ್ದರೆ ಆಮ್ಲಜನಕ ಕೊರತೆ ಎದುರಿಸಬೇಕಾಗುತ್ತದೆ. ದೆಹಲಿಯಲ್ಲಿ ಆಮ್ಲ ಜನಕಕ್ಕಾಗಿ ನಗರ ಬಿಟ್ಟು ಬೇರೆ ಕಡೆ ಹೋಗುತ್ತಿದ್ದಾರೆ. ಹಣಕೊಟ್ಟ ಆಮ್ಲ ಜನಕ ಉಪಯೋಗಿಸುವ ಪರಿಸ್ಥಿತಿಗೆ ಬಂದಿದ್ದಾರೆ. ಇದು ಮುಂದೆ ದೊಡ್ಡ ಪರಿಣಾಮ ಬೀರುತ್ತದೆ. ರೈತರು ಮನಸ್ಸು ಮಾಡಿದರೆ ಎಲ್ಲವನ್ನೂ ಬದಲಾವಣೆ ಮಾಡಬಹುದು ಎಂದರು.

ಪರಿಸರ ದಿನಾಚರಣೆ ನಮಗಾಗಿ ಅಲ್ಲ ಇಡೀ ಸಮಾಜಕ್ಕಾಗಿ, ಅರಣ್ಯ ಇಲಾಖೆ ಹೆಚ್ಚು ಕಾಳಜಿ ಮಾಡುವ ಜವಾಬ್ದಾರಿ ಅವರದ್ದು. ಮರ ಕಟ್ ಮಾಡುವುದು, ಮರ ಬೆಳೆಸುವ ಅನುಮತಿ ಜೊತೆಗೆ ಪರಿಸರ ಜಾಗೃತಿ ಮೂಡಿಸುವ ಕೆಲಸವನ್ನು ಅರಣ್ಯ ಇಲಾಖೆ ಮಾಡಬೇಕಿದೆ – ಎಲ್ಲವರ್ಗ ಜನರನ್ನು ಕ್ರೋಡೀಕರಿಸಿ ಕಾರ್ಯಕ್ರಮ ಮಾಡಿದರೆ ಜಾಗೃತಿ ಬರುತ್ತದೆ. ಮಕ್ಕಳು ಪರಿಸರದ ಬಗ್ಗೆ ತಿಳಿದುಕೊಂಡರೆ ಅವರಿಂದ ಒಂದಿಷ್ಟು ಉಪಯೋಗ ಆಗುತ್ತದೆ. ಎಲ್ಲ ವರ್ಗ ಜನರನ್ನು ಒಗ್ಗೂಡಿಸಿಕೊಂಡು ಪರಿಸರವನ್ನು ಕಾಪಾಡುವ ಕೆಲಸ ಮಾಡಬೇಕಾಗುತ್ತದೆ ಎಂದರು.

ವಿಷದ ಆಹಾರ ಸೇವನೆಯಿಂದ ಮನುಷ್ಯನಿಗೆ ಬಾರಬಾದರ ರೋಗಗಳು ಬರುತ್ತಿವೆ. ಹಣದ ಲಾಭಕ್ಕಾಗಿ ಕೃಷಿಯಲ್ಲಿ ಕೀಟನಾಶಕ ಸಿಂಪಡಿಸುತ್ತೀರಿ ಇಂತಹ ಆಹಾರ ಸೇವನೆಯಿಂದ ಆರೋಗ್ಯ ಹಾಳಾಗಿ. ಆಸ್ಪತ್ರೆಗಳಿಗೆ ಲಕ್ಷ ಲಕ್ಷ ಹಣ ಕೊಡುತ್ತಿದ್ದೀರಿ. ರೈತರ ಮನಸ್ಸು ಮಾಡಿದರೆ ದೇಶದಲ್ಲಿ ಸುಧಾರಣೆ ಮಾಡಬಹುದು ಎಂದರು

.ರಾಜ್ಯದಲ್ಲಿ 41,200 ಕೆರೆಗಳು ಇದ್ದು, ಮರಾಜನಗರ ಜಿಲ್ಲೆಯಲ್ಲಿ 690 ಕೆರೆಗಳ ಪುನರ್ಜೀವನಗೊಳಿಸಿ ಪರಿಸರ ಸಂರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಈಗ ಏಳು ಜನರಿಗೆ ಒಂದು ಮರ ಆಮ್ಲಜನಕ ನೀಡುತ್ತಿದೆ ಎಂದು ವರದಿ ಹೇಳುತ್ತದೆ. ಶುದ್ಧ ಪರಿಸರವಿದ್ದರೆ ಪ್ರತಿಯೊಬ್ಬ ಮನುಷ್ಯರಿಗೆ ಶುದ್ಧ ಆರೋಗ್ಯವಿರುತ್ತದೆ. ರೈತರು ಗ್ರಾಮೀಣ ಭಾಗದಲ್ಲಿರುವ ಕೆರೆಗಳ ಊಳು ತೆಗೆಸಿ ಜಮೀನಿಗೆ ಮಣ್ಣು ಹಾಕಿ ಕೊಂಡರೆ ಭೂಮಿ ಫಲವತ್ತತೆ ವೃದ್ಧಿಯಾಗಿ ರಸಗೊಬ್ಬರ ಕೀಟನಾಶಕ ಬಳಕೆ ಕಡಿಮೆಯಾಗುತ್ತದೆ. ಉತ್ತಮ ಆಹಾರ ಬೆಳೆಯಲು ಸಹಕಾರಿಯಾಗುತ್ತದೆ ಎಂದರು.

ಕೃಷಿ ಉತ್ಪನ್ನ ಮಾರುಕಟ್ಟೆ ಜಿಲ್ಲಾ ಉಪ ನಿರ್ದೇಶಕ ಬಸವಣ್ಣ ಮಾತನಾಡಿ, ರೈತರು ಮನಸು ಮಾಡಿದರೆ ವರ್ಷ ಪೂರ್ತಿ ಮರ ಗಿಡ ನೆಟ್ಟು ಪರಿಸರ ಸಂರಕ್ಷಿಸಲು ಸಾಧ್ಯವಿದೆ ಎಂದರು.

ಕಾರ್ಯಕ್ರಮದಲ್ಲಿಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕಿ ಗೌರಮ್ಮ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾಧ್ಯಕ್ಷ ಸೋಮಶೇಖರ್ ,ಚಾಮರಾಜನಗರ ಜಿಲ್ಲಾ ಕಾರ್ಯಾಧ್ಯಕ್ಷ ಉಡಿಗಾಲ ರೇವಣ್ಣ, ಜಿಲ್ಲಾ ಉಪಾಧ್ಯಕ್ಷ ಮೂಡಲಪುರ ಶಿವಮೂರ್ತಿ ಜಿಲ್ಲಾ ಕಾರ್ಯದರ್ಶಿ ಹೆಚ್. ಮೂಕಳ್ಳಿ ಮಹದೇವಸ್ವಾಮಿ, ತಾಲೂಕು ಅಧ್ಯಕ್ಷ ನಂಜೇದೇವನಪುರ ಸತೀಶ್ ,ತಾಲೂಕು ಉಪಾಧ್ಯಕ್ಷರಾದ ಎಚ್ .ಮೂಕಳ್ಳಿ ಶಿವಕುಮಾರಸ್ವಾಮಿ ಹೆಗ್ಗೋಠಾರ ಶಿವಸ್ವಾಮಿ ,ತಾಲೂಕು ಕಾರ್ಯದರ್ಶಿ, ಉಡಿಗಾಲ ಸುಂದ್ರಪ್ಪ ,ಯಳಂದೂರು ತಾಲೂಕು ಅಧ್ಯಕ್ಷ ಗೌಡಳ್ಳಿ ಷಡಕ್ಷರಿಸ್ವಾಮಿ ಕಾರ್ಯದರ್ಶಿ ಯರಿಯೂರ ಮಹೇಶ್ ಮೆಲ್ಲಹಳ್ಳಿ ಚಂದ್ರಶೇಖರ್ ಮೂರ್ತಿ, ಎ.ಸಿ.ಸಿದ್ದರಾಜು, ಉಡಿಗಾಲ ಗುರುಪ್ರಸಾದ್ ನಟರಾಜು, ವಿಜಯ್ ಕುಮಾರ್, ನವೀನ್ ಮಹೇಂದರ್, ಮೈಸೂರು ತಾಲೂಕು ಸಂಘದ ಮುಖಂಡರು, ನಂಜನಗೂಡು ತಾಲೂಕು ಸಂಘದ ಮುಖಂಡರಗಳು ನರಸೀಪುರ ತಾಲೂಕು ಸಂಘದ ಮುಖಂಡರುಗಳು ಹಾಜರಿದ್ದರು.

> **ಕೊರೋನ ಸಂದರ್ಭದಲ್ಲಿ ಅಮ್ಲಜನಕ ಸರಬರಾಜು ಇಲ್ಲದ ಕಾರಣ ಹಲವಾರು ಜನರು ಚಾಮರಾಜನಗರದಲ್ಲಿ ಸಾವಿಗೀಡಾದರು. ಆಮ್ಲಜನಕ ಮರಗಳಿಂದಲೇ ಉತ್ಪಾದನೆಯಾಗುವುದು ಆದ್ದರಿಂದ ಪರಿಸರ ಸಂರಕ್ಷಿಸುವುದು ಎಲ್ಲರ ಜವಾಬ್ದಾರಿ.**
>
> **ಮಂಜುನಾಥ**
> ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ

> **ಪರಿಸರ ಉಳಿದರೆ ನಾವು ಉಳಿಯುತ್ತೇವೆ. ಕೇಂದ್ರ ಪರಿಸರ ವಾಯುಮಾಲಿನ್ಯ ಇಲಾಖೆಯು ಬಿಡುಗಡೆ ಮಾಡಿರುವ ವರದಿಯಲ್ಲಿ ಪರಿಸರದ ಸಂರಕ್ಷಣೆಯಲ್ಲಿ ಶುದ್ಧ ಗಾಳಿ ಸಿಗುವ ಜಿಲ್ಲೆ ದೇಶದಲ್ಲಿಯೇ ಚಾಮರಾಜನಗರ 4ನೇ ಸ್ಥಾನ ಪಡೆದಿದೆ. ಇದು ನಮಗೆಲ್ಲ ವರದಾನವಾಗಿದೆ. ಇದನ್ನು ಉಳಿಸಿಕೊಳ್ಳುವುದು ಜಿಲ್ಲೆಯ ಪ್ರತಿಯೊಬ್ಬರೂ ಕರ್ತವ್ಯ ವಾಗಿದೆ.**
>
> **ಆರ್.ಎನ್.ಸಿದ್ದಲಿಂಗಸ್ವಾಮಿ**
> ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ

# 4 ಕೋಟಿ ವೆಚ್ಚದ ವಿದ್ಯುತ್ ಚಿತಾಗಾರಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ



ಚಾಮರಾಜನಗರ, ನಗರದ. ಹೊರವಲಯ ದಲ್ಲಿರುವ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆಸ್ಪತ್ರೆಯ ಸಮೀಪದಲ್ಲಿ ವಿದ್ಯುತ್ ಚಿತಾಗಾರ ನಿರ್ಮಾಣಕ್ಕೆ ಎಂಎಲ್ ಅಧ್ಯಕ್ಷರು, ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿ ಪೂಜೆ ನೆರವೇರಿಸಿದರು.

ಗುದ್ದಲಿ ಪೂಜೆ ನೆರವೇರಿಸಿದ ಬಳಿಕ ಅವರು ಮಾತನಾಡಿ, ನಗರದ ಜನಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಅಂತ್ಯಕ್ರಿಯೆಗೆ ಪೂರಕವಾದ ಆಧುನಿಕ ವ್ಯವಸ್ಥೆಯ ಅಗತ್ಯವಿತ್ತು. ಈ ನಿಟ್ಟಿನಲ್ಲಿ ಜನರು ವಿದ್ಯುತ್ ಚಿತಾಗಾರಕ್ಕಾಗಿ ಬಹಳ ವರ್ಷಗಳಿಂದ ಮನವಿ ಮಾಡುತ್ತಿದ್ದರು. ಜನರ ಈ ಬೇಡಿಕೆಯನ್ನು ಸರ್ಕಾರದ ಗಮನಕ್ಕೆ ತರಲಾಗಿತ್ತು ಸರ್ಕಾರ ಬಳಿಕ 2025-26ನೇ ಸಾಲಿನ ನಗರ ಮೂಲಸೌಕರ್ಯ ಅಭಿವೃದ್ಧಿ ನಿಧಿ ಅಡಿಯಲ್ಲಿ 4 ಕೋಟಿ ರೂ. ಅನುದಾನವನ್ನು ವಿದ್ಯುತ್ ಚಿತಾಗಾರ ನಿರ್ಮಾಣಕ್ಕೆ ಮಂಜೂರಾಗಿದ್ದು, ಜನರ ಬೇಡಿಕೆಯಂತೆ

ವಿದ್ಯುತ್ ಚಿತಾಗಾರ ನಿರ್ಮಾಣ ಆಗಲಿದ್ದು, ಪರಿಸರ ಸ್ನೇಹಿಯಾಗಿ ಶವಸಂಸ್ಕಾರ ಮಾಡಲು ಸಹಕಾರಿ ಯಾಗಲಿದೆ ಎಂದರು. ಈ ಸಂದರ್ಭದಲ್ಲಿ ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಕನಿಷ್ಠ ವೇತನಾ ಸಲಹಾ ಸಮಿತಿಯ ಮಾಜಿ ಅಧ್ಯಕ್ಷ ಉಮೇಶ್ ಎಸ್ ಪಿಕೆ, ನಗರಸಭಾ ಮಾಜಿ ಉಪಾಧ್ಯಕ್ಷ ರಾಜಪ್ಪ, ಚೂಡಾ ಸದಸ್ಯರಾದ ಮಸಗಾಪುರರಾಜು, ಪುಟ್ಟಸ್ವಾಮಿ, ದ್ವಾರ್ಕಿ,ನಗರಸಭಾ ಪೌರಾಯುಕ್ತ ಪರಶುರಾಮ ಛಲವಾದಿ, ಜೆಇ ಶಿವಶಂಕರ ಅರಾಧ್ಯ, ಅಪ್ಪಾಜಿ ಬಿಲ್ಡರ್ಸ್ ನ ಸತೀಶ್ ಇತರರು ಹಾಜರಿದ್ದರು.

# ವೃಕ್ಷಾರೋಪಣಾ ಅಭಿಯಾನಕ್ಕೆ ಚಾಲನೆ



ಮೈಸೂರು: ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಿಂದ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ ವಿಶ್ವಪರಿಸರ ದಿನಾಚರಣೆಯನ್ನು ಗಿಡ ನೆಡುವ ಮೂಲಕ ಮಹಾ ವೃಕ್ಷಾರೋಪಣಾ ಅಭಿಯಾನಕ್ಕೆ ಮಾಜಿ ಸಚಿವ ಎಸ್.ಎ.ರಾಮದಾಸ್ ಚಾಲನೆ ನೀಡಿದರು.

ಬಳಿಕ ಮಾತನಾಡಿ ನಾವು ಈ ದಿನ ಗಿಡ ನೆಡುವುದಕ್ಕೆ ಸಿಮೀತವಾಗಬಾರದು ಅದನ್ನು ಮುಂದೆ ಪೋಷಿಸಿ ಬೆಳೆಸಬೇಕು. ಪ್ರತಿಯೊಬ್ಬರು ಒಂದೊಂದು ಗಿಡವನ್ನು ದತ್ತು ತೆಗೆದುಕೊಳ್ಳಬೇಕು. ಗಿಡಗಳಿಗೆ ಭಾಷೆ ಇದೆ ಮಾತನಾಡುತ್ತವೆ. ಸೇಹ ಮಾಡುತ್ತವೆ ಎಂದು ಭೋಸ್ ಎಂಬ ವಿಜ್ಞಾನಿ ಪ್ರಾರಂಭದಲ್ಲಿ ಹೇಳಿದಾಗ ಎಲ್ಲಾರು ನಂಬಲಿಲ್ಲ. ಆದರೆ, ಇಂದು ಎಲ್ಲಾರು ಅದರ ಬಗ್ಗೆ ಅಧ್ಯಯನ ಮಾಡಲು ಪ್ರಾರಂಭ ಮಾಡಿದ್ದಾರೆ ಎಂದು ಸ್ಮರಿಸಿದರು. ನಾವು ಭೂಮಿಯನ್ನು, ಗಾಳಿಯನ್ನು, ನೀರನ್ನು ಶುದ್ಧವಾಗಿ ಇಟ್ಟುಕೊಂಡರೆ ನಾವು ಉತ್ತುಮವಾದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದರು. ಸಿಎಸ್ ಆರ್‌ಟಿಐ ಡಾ.ಪಿ.ದೀಪಾ ಮಾತನಾಡಿ, ಪ್ರಸ್ತುತ ಪರಿಸರ ಸಂರಕ್ಷಣೆ ಅನಿವಾರ್ಯತೆ ಬಗ್ಗೆ ಪ್ರತಿಯೊಬ್ಬರು ಗಮನ ಹರಿಸಬೇಕೆಂದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಪರಮೇಶ್, ಹಿರಿಯ ವಿಜ್ಞಾನಿ ಡಾ.ಎಸ್. ಮಹೀಬಾ ಹೆಲೇನ್, ಡಾ. ಮಧುಸೂಧನ್, ಡಾ.ಸುರೇಶ್ ಇನ್ನಿತರರು ಉಪಸ್ಥಿತರಿದ್ದರು.

# ಕಲಾವಿದರ ಪ್ರೋತ್ಸಾಹಿಸುವಲ್ಲಿ ವಿಫಲ

## ಡಾ.ರಾಜ್‌ಕುಮಾರ್‌ಗೆ 'ಭಾರತ ರತ್ನ' ನೀಡಲು ಆಗ್ರಹ

ಚಾಮರಾಜನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ನಾದಶ್ರೀ ಮೆಲೋಡಿಸ್ ವತಿಯಿಂದ ವರನಟ ಡಾ. ರಾಜ್ ಕುಮಾರ್ ಅವರ 20ನೇ ವರ್ಷದ ಪುಣ್ಯಸ್ಮರಣೆ ಹಾಗೂ ಸಂಸ್ಥೆಯ 25ನೇ ವಾರ್ಷಿಕೋತ್ಸವದ ಪ್ರಯುಕ್ತ 'ರಾಜ್ ಪರಿವಾರ ರಸಮಂಜರಿ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ವೇದಿಕೆಯಲ್ಲಿ ನಾಡಿನ ಕಲಾವಿದರ ಸ್ಥಿತಿಗತಿ ಹಾಗೂ ಅಣ್ಣಾವ್ರ ಸಾಧನೆಗಳ ಕುರಿತು ಗಣ್ಯರು ತಮ್ಮ ವಿಚಾರಗಳನ್ನು ಹಂಚಿಕೊಂಡರು.

ಸರ್ಕಾರದ ವಿರುದ್ಧ ಅಸಮಾಧಾನ ಹಾಗೂ ಕಲಾವಿದರ ಪರ ಕಳಕಳಿ

ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಚಾಮರಾಜನಗರ ಮತ್ತು ಮೈಸೂರು ನಾಯಕರ ಸಂಘದ ಜಿಲ್ಲಾಧ್ಯಕ್ಷ ಕೆಲ್ಲಂಬಳ್ಳಿ ಸೋಮನಾಯಕ ಅವರು, ವಿಶ್ವಮಟ್ಟದಲ್ಲಿ ಕನ್ನಡವನ್ನು ಬೆಳೆಸುತ್ತಾ, ಕರ್ನಾಟಕದ ಕೀರ್ತಿಯನ್ನು ಪಸರಿಸುತ್ತಿರುವ ಕಲಾವಿದರನ್ನು ಪ್ರೋತ್ಸಾಹಿಸುವಲ್ಲಿ ಸರ್ಕಾರಗಳು ಸಂಪೂರ್ಣವಾಗಿ ವಿಫಲವಾಗಿವೆ ಎಂದು ಆರೋಪಿಸಿದರು. ಕಲೆಗಳ ತವರೂರಾಗಿರುವ ಚಾಮರಾಜನಗರ ಜಿಲ್ಲೆಯಲ್ಲಿ ಎಲ್ಲಾ ಬಗೆಯ ಪ್ರತಿಭಾವಂತ ಕಲಾವಿದರಿದ್ದಾರೆ. ಆದರೆ, ನಿರಂತರವಾಗಿ ಕಲಾಸೇವೆ ಮಾಡಿರುವ ಅನೇಕರು ಇಂದು ಅನಾರೋಗ್ಯಕ್ಕೊಳಗಾಗಿ ತೀವ್ರ ಆರ್ಥಿಕ ಹಾಗೂ ಜೀವನ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು.



### ಮರಣೋತ್ತರ 'ಭಾರತ ರತ್ನ' ಪ್ರಶಸ್ತಿಗೆ ಒತ್ತಾಯ

ಇದೇ ಜಿಲ್ಲೆಯಲ್ಲಿ ಹುಟ್ಟಿ, ಕನ್ನಡ ಚಿತ್ರರಂಗದ ಮೂಲಕ ರಾಷ್ಟ್ರಮಟ್ಟದಲ್ಲಿ ಕೀರ್ತಿ ಪತಾಕೆ ಹಾರಿಸಿದ ಡಾ. ರಾಜ್ ಕುಮಾರ್ ಅವರಿಗೆ 'ಭಾರತ ರತ್ನ' ಪ್ರಶಸ್ತಿ ನೀಡಬೇಕೆಂಬ ಬಹುಕಾಲದ ಬೇಡಿಕೆಯನ್ನು ಸರ್ಕಾರಗಳು ನಿರ್ಲಕ್ಷಿಸಿವೆ. ಅನೇಕ ಸಂಘ-ಸಂಸ್ಥೆಗಳು ಒತ್ತಾಯ ಮಾಡಿಕೊಂಡು ಬಂದಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಕೆಲ್ಲಂಬಳ್ಳಿ ಸೋಮನಾಯಕ ದೂರಿದರು.

ನಂತರ ಮಾತ ನಾಡಿದ ಅಖಿಲ ಕರ್ನಾಟಕ ಡಾ. ರಾಜ್ ಕುಮಾರ್ ಅಭಿ ಮಾನಿಗಳ ಸಂಘದ ಸಂಸ್ಥಾಪಕ ಅಧ್ಯಕ್ಷ ಎಂ. ರಾಮೆ ೧ಗೌಡ ಅವರು, ಕನ್ನಡ ಚಿತ್ರರಂಗದ ಈ ಮೇರುನಟನಿಗೆ ಮರಣೋತ್ತರ 'ಭಾರತ ರತ್ನ' ನೀಡು ವಂತೆ ಕೇಂದ್ರ ಸರ್ಕಾರವನ್ನು ಬಲವಾಗಿ ಆಗ್ರಹಿಸಿದರು.

### ಗೋಕಾಕ್ ಚಳವಳಿ, ಕನ್ನಡದ ಉಳಿವಿಗೆ ಶ್ರಮ

ನಾಯಕ ಜನಾಂಗದ ಮುಖಂಡ ಪು. ಶ್ರೀನಿವಾಸನಾಯಕ ಮಾತನಾಡಿ, ಕನ್ನಡ ಚಿತ್ರರಂಗದ ಧ್ರುವತಾರೆ ಡಾ. ರಾಜ್‌ಕುಮಾರ್ ಕೇವಲ ನಟರಾಗಿರದೆ ಕನ್ನಡ ಭಾಷೆಯ ಉಳಿವಿಗಾಗಿ ನಿರಂತರವಾಗಿ ಶ್ರಮಿಸಿದವರು. ರಾಜ್ಯದಲ್ಲಿ ಕನ್ನಡಕ್ಕೆ ಪ್ರಥಮ ಆದ್ಯತೆ ಸಿಗಬೇಕು ಎಂದು ಆಗ್ರಹಿಸಿ ನಡೆದ ಐತಿಹಾಸಿಕ ಗೋಕಾಕ್ ಚಳವಳಿಗೆ ತಮ್ಮ ಪ್ರಬಲ ನಾಯಕತ್ವವನ್ನು ಒದಗಿಸುವ ಮೂಲಕ ಸಮಸ್ತ ನಾಡನ್ನು ಒಗ್ಗೂಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಸ್ಮರಿಸಿದರು.

### ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರು ಹಾಗೂ ಕಲಾವಿದರು

ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿ ಅಧ್ಯಕ್ಷ ಹೊಂಗನೂರು ಚಂದ್ರು, ಅಂತಾರಾಷ್ಟ್ರೀಯ ಜಾನಪದ ಕಲಾವಿದ ಸಿ.ಎಂ. ನರಸಿಂಹಮೂರ್ತಿ ಹಾಗೂ ಪರಿಸರ ಪ್ರೇಮಿ ಸಿ.ಎಂ. ವೆಂಕಟೇಶ್ ಅವರು ಉದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ಎಸ್.ಟಿ ಮೋರ್ಚಾದ ರಾಜ್ಯ ಕಾರ್ಯದರ್ಶಿ ಜಯಸುಂದ್ರ, ಜಿಲ್ಲಾಧ್ಯಕ್ಷ ಚಂದ್ರಶೇಖರ್, ಕನ್ನಡ ಯುವಸೇನೆ ಜಿಲ್ಲಾಧ್ಯಕ್ಷ ಕಂಡಕ್ಟರ್ ಚಾ.ಸಿ. ಸೋಮನಾಯಕ, ನಟ ರವಿಸಂತು, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ಜಿಲ್ಲಾಧ್ಯಕ್ಷ ನಂದೀಶ್ ಮೂಡ್ಲುಪುರ, ಜಿ.ಪಂ. ಮಾಜಿ ಸದಸ್ಯ ಎಸ್. ಸೋಮನಾಯಕ, ಕರ್ನಾಟಕ ಸೇನಾಪಡೆ ಅಧ್ಯಕ್ಷ ಶ್ರೀನಿವಾಸಗೌಡ, ಸುರೇಶ್ ಗೌಡ, ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಸಂಘಟನಾ ಕಾರ್ಯದರ್ಶಿ ವಿ. ಮಾದೇಶ್, ತಾಲೂಕು ಅಧ್ಯಕ್ಷ ಕ್ವಾಲಿಟಿ ನವೀನ್ ಮತ್ತು ವೆಂಕಟೇಶ್ ನಾಯಕ ಉಪಸ್ಥಿತರಿದ್ದರು. ಅಲ್ಲದೆ, ಪ್ರಮುಖ ಗಾಯಕರಾದ ವಿ. ರಾಮದಾಸ್, ಜ. ಸುರೇಶ್‌ನಾಗ್, ವಿ. ಶ್ರೀನಿವಾಸ್, ರಾಜಬುದ್ಧಿ, ಪ್ರೇಮ್, ನಂಜುಂಡಯ್ಯ, ಸಿಂಚನ, ಅನುಭವ್ಯ ಹಾಗೂ ಸುಗಂದ್ ರಾಜ್ ಸೇರಿದಂತೆ ಅನೇಕ ಕಲಾಭಿಮಾನಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಉರುಳು ಹಾಕುತ್ತಿದ್ದವನ ಬಂಧನ



ಚಾಮರಾಜನಗರ, ಬಿ.ಆರ್.ಟಿ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಜಿಂಕೆ, ಮೊಲ ಹಾಗೂ ಇನ್ನಿತರೆ ಕಾಡು ಪ್ರಾಣಿಗಳನ್ನು ಭೇಟಿಯಾಡುತ್ತಿದ್ದವನನ್ನು ಭಾನುವಾರ ಬಂಧಿಸಲಾಗಿದೆ.

ತಾಲೂಕಿನ ಎತ್ತೇಗೌಡನದೊಡ್ಡಿ ನಿವಾಸಿ ಸಣ್ಣ ಬಿನ್ ಮಾದೇಗೌಡ ಬಂಧಿತ ಆರೋಪಿ. ಈತ ಕೋಳಿಪಾಳ್ಯ ಗಸ್ತಿನ ಎತ್ತೇಗೌಡನದೊಡ್ಡಿ ಕೆರೆ ಡಿ-ಲೈನ್ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಜಿಂಕೆ ಮತ್ತು ಮೊಲಗಳನ್ನು ಬೇಟೆಯಾಡುವ ಉದ್ದೇಶದಿಂದ 06 ಸಂಖ್ಯೆಯ ಉರುಳುಗಳನ್ನು ಹಾಕಿದ್ದನು.

ಈ ಸಂಬಂಧ ಇತನನ್ನು ಬಂಧಿಸಿ ವನ್ಯಜೀವಿ (ಸಂರಕ್ಷಣಾ) ಕಾಯ್ದೆ 1972 ರ ಉಲ್ಲಂಘಣೆ ಅಡಿಯಲ್ಲಿ ಪುಣಜನೂರು ವನ್ಯಜೀವಿ ವಲಯದಲ್ಲಿ ಮೊಕದ್ದಮೆಯನ್ನು ದಾಖಲಿಸಿಕೊಂಡು ಆರೋಪಿಯನ್ನು ವಿಚಾರಣೆ ಮಾಡಿ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗಿರುತ್ತದೆ ಎಂದು ಚಾಮರಾಜನಗರ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೂ. 15ರಂದು ಬಾ ನಂ ಲೋಕೇಶ ವಿರಚಿತ ವಚನಾನಿರ್ವಚನ ಕೃತಿ ಲೋಕಾರ್ಪಣೆ

ಹಾಸನ : ಸುಕ್ಷೇತ್ರ ತುಮಕೂರಿನ ತಪೋವನ,ಹಿರೇಮಠದಲ್ಲಿ ಜೂನ್ 15ರ ಸೋಮವಾರದಂದು ನಡೆಯುವ ಗುರುಕೃಪೆಯಲ್ಲಿ ವಚನ ಬೆಳಗು ಕಾರ್ಯಕ್ರಮವನ್ನು ಆಯೋಜಿಸಿಕೊಳ್ಳಲಾಗಿದೆ ಎಂದು ಪರಮ ಪೂಜ್ಯ ಡಾ. ಶ್ರೀ ಶ್ರೀ ಶಿವಾನಂದ ಶಿವಾಚಾರ್ಯ ಮಹಾ ಸ್ವಾಮೀಜಿ ತಿಳಿಸಿದ್ದಾರೆ.



ಹಾಸನ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಾ ನಂ ಲೋಕೇಶ ವಿರಚಿತ ವಚನಾ ನಿರ್ವಚನ ಕೃತಿ ಲೋಕಾರ್ಪಣೆಗೊಳ್ಳಲಿದೆ. ಕಾರ್ಯಕ್ರಮದ ದಿವ್ಯ ಸಾನಿದ್ಯ ಹಾಗೂ ಆಶೀರ್ವಚನವನ್ನು ಸುಕ್ಷೇತ್ರ ಹಿರೇಮಠ ತಪೋವನ ತುಮಕೂರಿನ ಮಾಠಾಧ್ಯಕ್ಷರಾದ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಾನಂದ ಶಿವಾಚಾರ್ಯ ಮಹಾ ಸ್ವಾಮೀಜಿಯವರು ನೀಡಲಿದ್ದಾರೆ. ಉದ್ಘಾಟನೆಯನ್ನು ಕೇಂದ್ರ ಚುಟುಕು ಸಾಹಿತ್ಯ ಪರಿಷತ್ ಸಂಸ್ಥಾಪಕ ಅಧ್ಯಕ್ಷರಾದ ಚುಟುಕು ಯುಗಾಚಾರ್ಯ ಡಾ. ಎಂ ಜಿ ಆರ್ ಅರಸ್ ನೆರವೇರಿಸಲಿದ್ದಾರೆ. ಪ್ರಾಸ್ತಾವಿಕ ನುಡಿಯನ್ನು ಹಾಸನ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಾ ನಂ ಲೋಕೇಶ ನುಡಿಯಲಿದ್ದು ಅಧ್ಯಕ್ಷತೆಯನ್ನು ತುಮಕೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರಕಾಶ್ ಎ ನಾಡಿಗ್ ವಹಿಸಲಿದ್ದಾರೆ.

ಪುಸ್ತಕ ತಾಂಬೂಲವನ್ನು ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷೆ ಚುಟುಕು ಸಿರಿ ಡಾ. ರತ್ನ ಹಾಲಪ್ಪಗೌಡ ನೀಡಲಿದ್ದಾರೆ. ಹಾಸನದ ಆಚಾರ್ಯ ಕಾಮರ್ಸ್ ಕಾಲೇಜಿನ ಪ್ರಾಂಶು ಪಾಲ ಡಾ. ಹೆಚ್ ಆರ್ ಆದರ್ಶ ವಚನಗಳ ಅಮೃತವನ್ನು ಲೋಕಕ್ಕೆ ಅರ್ಪಿಸುವರು.

ಕಾರ್ಯಕ್ರಮದಲ್ಲಿ ಅರಸೀಕೆರೆ ತಾಲ್ಲೂಕು ಚುಸಾಪ ಅಧ್ಯಕ್ಷೆ ಪದ್ಮಮೂರ್ತಿ, ಹೊಳೆನರಸೀಪುರ ತಾಲ್ಲೂಕು ಚುಸಾಪ ಅಧ್ಯಕ್ಷೆ ಪ್ರೇಮಮಂಜುನಾಥ್, ಬೆಳಕು ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಯ ಹಾಸನ ಜಿಲ್ಲಾ ಅಧ್ಯಕ್ಷೆ ಪೂರ್ಣಿಮಾನಾಗೇಂದ್ರ, ಹಾಸನ ತಾಲ್ಲೂಕು ಚುಸಾಪ ಅಧ್ಯಕ್ಷ ಕುಮಾರ್ ಹೆಚ್ ಬಿ, ಬೇಲೂರ್ ತಾಲ್ಲೂಕು ಚುಸಾಪ ಅಧ್ಯಕ್ಷ ಕಿರಣ್ ಕುಮಾರ್, ಸಕಲೇಶಪುರ ತಾಲ್ಲೂಕು ಚುಸಾಪ ಅಧ್ಯಕ್ಷ ಮಲ್ಲೇಶ್ ಜಿ, ಕದಳಿ ವೇದಿಕೆಯ ಅಧ್ಯಕ್ಷೆ ಗಿರಿಜಾ ನಿರ್ವಾಣಿ ಇನ್ನಿತರರು ಉಪಸ್ಥಿತರಿರುವರು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಣ್ಣಗಳಲ್ಲಿ ಹಾಲಿನ ಮಹತ್ವದ ಸಾರಿದ ಚಿಣ್ಣರು

ಮೈಸೂರು: ಅಲ್ಲಿ ನೆರದಿದ್ದ ಚಿಣ್ಣರೆಲ್ಲರೂ ಪರಿಸರ, ನಂದಿನ ಹಾಲಿನ ಮಹತ್ವವನ್ನು ಸಾರುವ ನಿಟ್ಟಿನಲ್ಲಿ ಚಿತ್ರಗಳನ್ನು ಚಿತ್ರಿಸಿ ನೆರೆದಿದ್ದವರ ಗಮನ ಸೆಳೆದರು.

ಮೈಸೂರು ಜಿಲ್ಲಾ ಹಾಲು ಒಕ್ಕೂಟದ ವತಿಯಿಂದ ವಿಶ್ವ ಹಾಲು ದಿನಾಚರಣೆಯ ಅಂಗವಾಗಿ ಮೊಟ್ಟ ಮೊದಲ ಬಾರಿಗೆ ಫೋರಮ್ ಮಾಲ್ ನಲ್ಲಿ ಹಾಲು ಮತ್ತು ಹಾಲಿನ ಮಹತ್ವವನ್ನು ಸಾರುವ ನಿಟ್ಟಿನಲ್ಲಿ ಮಕ್ಕಳಿಗೆ ಚಿತ್ರ ಬಿಡಿಸುವ ಸ್ಪರ್ಧೆ, ಹಾಲು ಮತ್ತು ಹಾಲಿನ ಉತ್ಪನ್ನಗಳ ಬಗ್ಗೆ ರಸಪ್ರಶ್ನೆ ಕಾರ್ಯಕ್ರಮಗಳನ್ನು ನಡೆಸಿಕೊಡಲಾಯಿತು. ಚಿತ್ರ ಬಿಡಿಸುವ ಸ್ಪರ್ಧೆ ಐದನೇ ತರಗತಿವರೆಗಿನ ವಿಭಾಗದಲ್ಲಿ ಎಂ.ಶಶಾಂಕ್(ಪ್ರ), ಹುಮೈರಾ ಕೌಸಘ್(ದ್ವಿ) ಸ್ಥಾನ ಪಡೆದು ಪ್ರಶಸ್ತಿ ಗೆದ್ದರು. 10ನೇ ತರಗತಿ ವರೆಗಿನ ವಿಭಾಗದಲ್ಲಿ ಸಹನಾ(ಪ್ರ), ಟೆನ್ಜಿನ್ ಚೋಗ್ಯೆನ್ (ದ್ವಿ) ಪಡೆದು ಸಂಭ್ರಮಿಸಿದರು. ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಸಹ ಸಮಾಧಾನಕರ ಬಹುಮಾನವನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಯಾಗಿ ನಟ ಡಾರ್ಲಿಂಗ್ ಕೃಷ್ಣ ಮಾತನಾಡಿ, ನಂದಿನಿ ಎಂಬುದು



ಕೇವಲ ಒಂದು ಬ್ರಾಂಡ್ ಅಲ್ಲ ಅದು ನಮ್ಮೆಲ್ಲರ ಹೆಮ್ಮೆಯಾಗಿದೆ. ನಮ್ಮ ಮನೆಯಲ್ಲೂ ಸಹ ನಂದಿನಿ ಹಾಲು ಹಾಗೂ ಹಾಲಿನ ಉತ್ಪನ್ನವನ್ನೇ ಬಳಸುತ್ತಿದ್ದೇವೆ. ನೀವು ಸಹ ನಂದಿನಿ ಹಾಲು ಹಾಗೂ ಹಾಲಿನ ಉತ್ಪನ್ನವನ್ನು ಬಳಸಿ ರೈತರ ಹಿತ ಕಾಪಾಡಿ ಎಂದು ಸಂದೇಶ ನೀಡಿದರು.

ವಾಗ್ಮಿ ಪ್ರೊ.ಕೃಷ್ಣೇಗೌಡ ಮಾತನಾಡಿ ಹಾಲನ್ನು ಬಿಟ್ಟು ಮನುಷ್ಯನ ಕಲ್ಪನೆ ಅಸಾಧ್ಯ. ಅರ್ಧ ಶತಮಾನದ ಇತಿಹಾಸದಲ್ಲಿ ನಂದಿನಿ ಹಾಲು ಎಂಬುದು ವಿಶ್ವಾಸಾರ್ಹ ಬ್ರಾಂಡ್ ಆಗಿದೆ. ಕಡಿಮೆ ಹಣಕ್ಕೆ ಕೆಟ್ಟ ಹಾಲು, ಮೊಸರು ಸಿಕ್ಕರೆ ಕೊಂಡುಕೊಳ್ಳುವ ಜನರಿದ್ದಾರೆ. ಆದರೆ, ಅದು ದೀರ್ಘಾಕಾಲದಲ್ಲಿ ನಮ್ಮ ಆರೋಗ್ಯದ ಬಗ್ಗೆ ಪರಿಣಾಮ ಬೀರುತ್ತದೆ. ಆದರೆ, ಇದೆಲ್ಲವನ್ನೂ ಮೀರಿ ಆರೋಗ್ಯಯುತವಾಗಿ ರುಚಿ, ಗುಣಮಟ್ಟದಲ್ಲಿ ಯಾವುದೇ ರಾಜೀ ಆಗದೇ ರೈತರೇ ಕಟ್ಟಿದ, ರೈತರಿಂದ ಸ್ಥಾಪಿಸಲ್ಪಟ್ಟ ಸಂಸ್ಥೆಯಾಗಿ ನಂದಿನಿಯನ್ನು ಉಳಿಸಿ ಬೆಳೆಸಲು ನಾವೆಲ್ಲರೂ ಪ್ರೋತ್ಸಾಹ ನೀಡಬೇಕಿದೆ ಎಂದು ಹೇಳಿದರು.

ವಿವಿಧ ಮನರಂಜನಾತ್ಮಕ ಸ್ಪರ್ಧೆಗಳಲ್ಲಿ ಭಾಗ ವಹಿಸಿದ ಗೃಹಿಣಿಯರಿಗೂ ಬಹುಮಾನ ನೀಡಲಾಯಿತು. ಕಾರ್ಯಕ್ರಮದಲ್ಲಿ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ಸುರೇಶ್ ನಾಯ್ಕ್, ಪ್ರಧಾನ ವ್ಯವಸ್ಥಾಪಕ ಎ.ಕೆ.ಜಯಶಂಕರ್, ಉಪ ವ್ಯವಸ್ಥಾಪಕರಾದ ಎಸ್.ಸಿ. ಅರವಿಂದ್, ಎನ್ ಸೌಮ್ಯ, ಬಬಿತಾ ಸಿ, ಲಾವಣ್ಯವತಿ, ನಂದಿನಿ, ಜಮುನಾ, ರಶ್ಮಿ, ಪವಿತ್ರ, ಜಯಭಾಯಿ, ನವೀನ ಕುಮಾರ್ ಎಂ.ವಿ.,ಎಂ ಶಂಕರ್, ಸಂದೇಶ, ಪ್ರದೀಪ್, ಮನೋಜ್ ಕುಮಾರ್, ಲೋಕೇಶ್, ರಾಹುಲ್, ಈಶ್ವರ್, ಗೌರವ್ ರಾಜ್ ಅರಸ್, ಆಕಾಶ್, ರಚಿತ್ ಗೌಡ, ನಟರಾಜು, ಶೈನಿ ಮೆಲೊನಿಯ ಇದರು.

# ಸರ್ಕಾರಿ ಶಾಲೆ ಮಕ್ಕಳ ಬೆನ್ನಿಗೆ ನಿಂತ ಆರೋಗ್ಯ ನಿರೀಕ್ಷಕ ಮಂಜುನಾಥ್

ಮೈಸೂರು: ಸರ್ಕಾರಿ ಶಾಲೆಗಳ ಬೆಳವರ್ದನೆಗೆ ಸರ್ಕಾರಗಳು ಇನ್ನಿಲ್ಲದ ಪ್ರಯತ್ನ ನಡೆಸುತ್ತಿರುವ ಈ ಹೊತ್ತಿನಲ್ಲಿ ಇಲ್ಲೊಬ್ಬ ಆರೋಗ್ಯ ನಿರೀಕ್ಷಕ ತಮ್ಮ ಅಳಿಲು ಸೇವೆ ಮೂಲಕ ಸರ್ಕಾರಿ ಶಾಲಾ ಮಕ್ಕಳ ಬೆನ್ನಿಗೆ ನಿಂತಿದ್ದಾರೆ.

ಕಡಕೊಳ ಗ್ರಾಮದ ಕಡಕೊಳ ಪಟ್ಟಣ ಪಂಚಾಯಿತಿ ಆರೋಗ್ಯ ನಿರೀಕ್ಷಕ ಮಂಜುನಾಥ್ ಅವರೇ ಇಂತಹದೊಂದು ಅಳಿಲು ಸೇವೆ ಮಾಡುತ್ತಿರುವವರಾಗಿದ್ದಾರೆ. ಅಗ್ರಹಾರ ಮೂಲದ ನಿವಾಸಿ ಹಾಗೂ ಹಿಂದೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ನಗರ ಯೋಜನ ಕಚೇರಿಯಲ್ಲಿ ತಾಂತ್ರಿಕ ಸಹಾಯಕರಾಗಿದ್ದವರು ಈಗ ಶಾಲೆ ಪ್ರಾರಂಭಗೊಂಡಿರುವ ಹಿನ್ನೆಲೆಯಲ್ಲಿ 20 ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತ ಪೆನ್ನು, ಪುಸ್ತಕ, ಪೆನ್ಸಿಲ್, ರಬ್ಬರ್, ಡ್ರಾಯಿಂಗ್ ಪುಸ್ತಕ ಜಾಮಿಟ್ರಿ ಬಾಕ್ಸ್ ಇತ್ಯಾದಿ ಪರಿಕರಗಳನ್ನು ನೀಡಲು ಆರಂಭಿಸಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕಿ ಚಂಪಾ, ಸಮಾಜ ಸೇವಕ ಎಸ್. ಎನ್.ರಾಜೇಶ್ ಇನ್ನಿತರರು ಹಾಜರಿದ್ದರು



## ಸಂಕ್ಷಿಪ್ತ ಸುದ್ದಿ

### ಅರ್ಜಿ ಆಹ್ವಾನ

**ಹಾಸನ:** ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಜಿಲ್ಲಾ ಕಚೇರಿಯಿಂದ 2026-27 ನೇ ಸಾಲಿನ ಸೆಪ್ಟೆಂಬರ್ ಅಂತ್ಯದವರೆವಿಗೂ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜಾನ ಯೋಜನೆಯಡಿ (ಪಿ.ಎಂ.ಇ.ಜಿ.ಪಿ) ಸಾಲ ಸೌಲಭ್ಯ ನೀಡಲು ಪರಿಶಿಷ್ಟ ಜಾತಿ ಮತು ಪರಿಶಿಷ್ಟ ಪಂಗಡದ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿಗಳು ತಿಳಿಸಿದ್ದಾರೆ.

**ಯೋಜನೆಯ ಮುಖ್ಯಾಂಶಗಳು:-** ರಾಜ್ಯದ ರೆವಿನ್ಯೂ ದಾಖಲಾತಿಗಳ ಪ್ರಕಾರ ವರ್ಗೀಕರಿಸುವ ಯಾವುದೇ ಗ್ರಾಮೀಣ ಪ್ರದೇಶ ಮತ್ತು 2001ರ ಜನಗಣತಿಯಲ್ಲಿ 20000 ಜನರಿಗಿಂತ ಕಡಿಮೆ ಇರುವ ಪಟ್ಟಣವೆಂದು ವರ್ಗೀಕರಿಸಿರುವ ಪ್ರದೇಶದಲ್ಲಿನ ಅಭ್ಯರ್ಥಿಗಳು ಹಾಗೂ ನಗರ ಪ್ರದೇಶದಲ್ಲಿನ ಅಭ್ಯರ್ಥಿಗಳು ಅರ್ಹವಿರುತ್ತಾರೆ, 18 ವರ್ಷ ಮೇಲ್ಪಟ್ಟ ಯಾವುದೇ ಪರಿಶಿಷ್ಟ ಜಾತಿ ಮತು ಪರಿಶಿಷ್ಟ ಪಂಗಡದ ವ್ಯಕ್ತಿ ಅರ್ಜಿ ಸಲ್ಲಿಸಬಹುದಾಗಿದೆ.

ರೂ 10 ಲಕ್ಷ ಯೋಜನಾ ವೆಚ್ಚಕ್ಕೆ ಮೇಲ್ಪಟ್ಟು ಉತ್ಪಾದನಾ ಚಟುವಟಿಕೆಗಳಿಗೆ ಮತ್ತು ರೂ 5 ಲಕ್ಷ ಮೇಲ್ಪಟ್ಟ ಸೇವಾ ಚಟುವಟಿಕೆಗಳಿಗೆ ಕನಿಷ್ಠ 8ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು, ಯಾವುದೇ ಆದಾಯದ ಮಿತಿ ಇರುವುದಿಲ್ಲ, ಪ್ರಥಮ ಪೀಳಿಗೆ ಉದ್ಯಮಶೀಲರಿಗೆ ಮಾತ್ರ ಪ್ರತಿ ಉತ್ಪಾದನಾ ಘಟಕಕ್ಕೆ ಗರಿಷ್ಟ 20 ಲಕ್ಷ ಯೋಜನಾ ವೆಚ್ಚದ ಕಿರು ಉತ್ಪಾದನಾ ಘಟಕಗಳನ್ನು ಹಾಗೂ ರೂ 10 ಲಕ್ಷ ಯೋಜನಾ ವೆಚ್ಚದ ಸೇವಾ ಉದ್ಯಮಗಳನ್ನು ಪ್ರಾರಂಭಿಸಲು ವಿವಿಧ ಹಣಕಾಸು ಸಂಸ್ಥೆಗಳ ಮೂಲಕ ಸಾಲ ನೀಡಲಾಗುವುದು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಗ್ರಾಮೀಣ ಪ್ರದೇಶದಲ್ಲಿನ ಉದ್ಯಮಶೀಲರಿಗೆ ಯೋಜನಾ ವೆಚ್ಚದ ಶೇಕಡ 35 ರಷ್ಟು ಹಾಗೂ ನಗರ ಪ್ರದೇಶದಲ್ಲಿನ ಉದ್ಯಮಶೀಲರಿಗೆ ಯೋಜನಾ ವೆಚ್ಚದ ಶೇಕಡ 25 ರಷ್ಟು ಸಹಾಯಧನವನ್ನು ನೀಡಲಾಗುವುದು.

ಈ ಯೋಜನೆಯನ್ನು ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿಗಳು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗಳ ಮೂಲಕ ಅನುಷ್ಠಾನಗೊಳಿಸಲಾಗಿದ್ದು ಅರ್ಹತೆಯುಳ್ಳ ಆಸಕ್ತ ಯುವ ಜನರು www.kviconline.gov.in ವೆಬ್ ಸೈಟ್ ನಲ್ಲಿ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ, ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿಗಳು, ಹಾಗೂ ದೂರವಾಣಿ ಸಂಖ್ಯೆ 9480825627ಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

### ಯುವನಿಧಿ ಯೋಜನೆಯ ಸ್ವಯಂ-ಘೋಷಣೆ

**ಹಾಸನ:** ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆಯಲ್ಲಿ ನೋಂದಣಿಯಾದ ಅಭ್ಯರ್ಥಿಗಳು ಕಡ್ಡಾಯವಾಗಿ ಆಧಾರ ಸೀಡೆಡ್ ಬ್ಯಾಂಕ್ ಖಾತೆ ಹೊಂದಿರಬೇಕು. ವೆಬ್ ಸೈಟ್ https://sevasindhugs.karnataka.gov.inನಲ್ಲಿ ತಮ್ಮ ಅರ್ಜಿಯು ಯಾವ ಹಂತದಲ್ಲಿದೆ ಎಂಬುದನ್ನು ಪರಿಶೀಲಿಸಿಕೊಂಡು ಹಾಗೂ ಪರಿಶೀಲನೆಗೆ ಬಾಕಿ ಉಳಿದಿರುವ ಅಭ್ಯರ್ಥಿಗಳು ಮಾತ್ರ ಸೂಚಿಸಲ್ಪಟ್ಟ ಇಲಾಖೆಯ ಕಚೇರಿಗಳಿಗೆ ತಮ್ಮ ಎಲ್ಲ ಮೂಲ ಅಂಕಪಟ್ಟಿ ಹಾಗೂ ಇತರೆ ಪ್ರಮಾಣ ಪತ್ರಗಳೊಂದಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ ಶೀಘ್ರವಾಗಿ ದೃಢೀಕರಿಸಿಕೊಳ್ಳವಂತೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

ಈಗಾಗಲೇ ನೋಂದಾಯಿಸಿಕೊಂಡು ಹಣ ಪಡೆಯುತ್ತಿರುವ ಫಲಾನುಭವಿಗಳು ಪ್ರತಿ ತಿಂಗಳು 25ನೇ ದಿನಾಂಕದೊಳಗೆ ಸ್ವಯಂ-ಘೋಷಣೆಯನ್ನು ಮಾಡಿಕೊಳ್ಳಬೇಕಾಗಿದೆ ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ:08172-296374, ನ್ನು ಸಂಪರ್ಕಿಸಬಹುದಾಗಿದೆ.

### ಜೂ.10 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ



**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ 66/11 ಕೆವಿ ಸೋಮನಹಳ್ಳಿ ವಿವಿ ಕೇಂದ್ರ ಮತ್ತು 66/11 ಕೆವಿ ಮಾರ್ಗಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಜೂ. 10 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸದರಿ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಸೋಮನಹಳ್ಳಿ, ಚಿಕ್ಕಮೇನಹಳ್ಳಿ, ಹಿರೇಕಡಲೂರು ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

**ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಜಿಲ್ಲಾ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ**

# ನೂತನ ಅಧ್ಯಕ್ಷರಾಗಿ ಚನ್ನಕೃಷ್ಣಯ್ಯ, ಪ್ರಧಾನ ಕಾರ್ಯದರ್ಶಿಯಾಗಿ ಚಂದ್ರಲಿಂಗ ಆಯ್ಕೆ

**ಮಂಡ್ಯ:** ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ (ರಿ), ಬೆಂಗಳೂರು, 2026-31 ರ ಅವಧಿಗಾಗಿ ಮಂಡ್ಯ ಜಿಲ್ಲಾ ಘಟಕದ ರಚನೆಗೆ ಚುನಾವಣೆ ಜೂನ್ 7 ರಂದು ನಗರದ ಸ.ಪ.ಪೂ.ಕಾಲೇಜು (ಮಾಜಿ ಪುರಸಭೆ) ನಲ್ಲಿ ನಡೆಯಿತು.

ಒಟ್ಟು 469 ಮತಗಳಲ್ಲಿ 451 ಮತಗಳು ಚಲಾವಣೆಯಾಗಿದ್ದು ಶೇಕಡ 96 ರಷ್ಟು ಮತದಾನವಾಗಿದೆ.

ಶ್ರೀರಂಗಪಟ್ಟಣ ತಾ॥ ಮಹದೇವಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಚನ್ನಕೃಷ್ಣಯ್ಯ 231 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಪ್ರಧಾನ ಕಾರ್ಯದರ್ಶಿಯಾಗಿ ಮಂಡ್ಯ ಸರ್ಕಾರಿ ಪದವಿಪೂರ್ವ ಕಾಲೇಜು (ಕಲ್ಲು ಕಟ್ಟಡ) ಅರ್ಥಶಾಸ್ತ್ರ ಉಪನ್ಯಾಸಕ ಚಂದ್ರಲಿಂಗ, ಖಜಾಂಚಿಯಾಗಿ ಮದ್ದೂರು ತಾಲೂಕು ಶಿವಪುರ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕ ಕೆ.ಶ್ರೀನಿವಾಸ್ ಆಯ್ಕೆಯಾಗಿದ್ದಾರೆ.



ಇನ್ನುಳಿದಂತೆ ಕಾರ್ಯಾಧ್ಯಕ್ಷರಾಗಿ ಕೆ.ಆರ್.ಪೇಟೆ ತಾಲೂಕು ಸಂತೆ ಬಾಚಹಳ್ಳಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಡಿ.ವೆಂಕಟೇಗೌಡ, ಕಾರ್ಯದರ್ಶಿಯಾಗಿ ಮಳವಳ್ಳಿ ತಾಲೂಕು ಹಾಡ್ಲಿ ಸರ್ಕಲ್ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಇಂಗ್ಲಿಷ್ ಉಪನ್ಯಾಸಕ ಟಿ.ವಿ. ಶಿವಕುಮಾರ್,ಪ್ರಧಾನ ಸಂಘಟನಾ ಕಾರ್ಯದರ್ಶಿಯಾಗಿ ಕೆ ಆರ್ ಪೇಟೆಯ ಪದ್ಮನಾಭ,ಜಂಟಿ ಕಾರ್ಯದರ್ಶಿಯಾಗಿ ಮದ್ದೂರು ತಾಲೂಕು ಕೊಪ್ಪ ಸರ್ವೋದಯ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ರವೀಲ.ಬಿ.ಎಸ್, ಸಂಚಾಲಕರಾಗಿ ಕೆ.ಆರ್.ಪೇಟೆ ತಾಲ್ಲೂಕು ಕಿಕ್ಕೇರಿ ಕಾಲೇಜಿನ ವಿನಾಯಕ.ಎಂ ಹಾಗೂ ಉಪಾಧ್ಯಕ್ಷರಾಗಿ(ಮಹಿಳಾ ಮೀಸಲು) ಪಾಂಡವಪುರ ತಾಲೂಕು ಬನ್ನಂಗಾಡಿ ಕಾಲೇಜಿನ ಉಪನ್ಯಾಸಕಿ ಲತಾ ಬಿ.ಎಸ್ ಆಯ್ಕೆಗೊಂಡಿದ್ದಾರೆ ಎಂದು ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಸಂಘ (ರಿ), ಬೆಂಗಳೂರು ಮಂಡ್ಯ ಜಿಲ್ಲಾ ಚುನಾವಣಾಧಿಕಾರಿಯಾಗಿದ್ದ ಕೆಂಪೇಗೌಡ.ಎ.ಟಿ. ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಪ್ರಾಂಶುಪಾಲರಾದ ಹನುಮಂತಯ್ಯ, ಉಪನ್ಯಾಸಕರಾದ ಶಿವಲಿಂಗಯ್ಯ, ನಿಂಗರಾಜು, ಚಂದ್ರಶೇಖರ್, ಕೃಷ್ಣ, ಮಹೇಶ್.ವಿಶ್ವನಾಥ್ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಹಿರಿಯ ನಾಗರಿಕರಿಗೆ ಸನ್ಮಾನ

**ಮಂಡ್ಯ:** ನಗರದ ಸೇವಾ ಕಿರಣ ವೃದ್ಧಾಶ್ರಮದಲ್ಲಿ ರಾಷ್ಟ್ರೀಯ ಸಂಘರ್ಷ ಸಮಿತಿ (ಮೈಸೂರು ಪ್ರಾಂತೀಯ ವಲಯ) ವತಿಯಿಂದ 9ನೇ ವಾರ್ಷಿಕೋತ್ಸವದ ಅಂಗವಾಗಿ ಹಿರಿಯ ನಾಗರಿಕರಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಸಂಘದ ಪ್ರಾದೇಶಿಕ ಸಂಯೋಜಕ ಹುಚ್ಚಪ್ಪ ಅವರು, ಸಂಘದ ವಾರ್ಷಿಕೋತ್ಸವದ ಅಂಗವಾಗಿ ಸಮಾಜದ ಅಭಿವೃದ್ಧಿಗೆ ಶ್ರಮಿಸಿದ ಹಿರಿಯ ನಾಗರಿಕರನ್ನು ಗೌರವಿಸಲಾಗುತ್ತಿದೆ ಎಂದು ತಿಳಿಸಿದರು. ಹಿರಿಯರು ಸಮಾಜಕ್ಕೆ ನೀಡಿರುವ ಕೊಡುಗೆ ಅಮೂಲ್ಯವಾಗಿದ್ದು, ಅವರ ಅನುಭವ ಮತ್ತು ಮಾರ್ಗದರ್ಶನ ಯುವ ಪೀಳಿಗೆಗೆ ಪ್ರೇರಣೆಯಾಗಬೇಕು ಎಂದು ಹೇಳಿದರು.

ಹಿರಿಯ ನಾಗರಿಕರು, ಮಕ್ಕಳು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವ ಉದ್ದೇಶದಿಂದ ವಿವಿಧ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಸಮಾಜದ ಎಲ್ಲ ವರ್ಗದ ಜನರಿಗೆ ನೆರವಾಗುವ ಕಾರ್ಯಗಳನ್ನು ಮುಂದುವರಿಸಲಾಗುವುದು ಎಂದು ಅವರು ತಿಳಿಸಿದರು.

ವಾರ್ಷಿಕೋತ್ಸವದ ಅಂಗವಾಗಿ ಸೇವಾ ಕಿರಣ ವೃದ್ಧಾಶ್ರಮದ ನಿವಾಸಿಗಳಿಗೆ ವಿಶೇಷ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಹಿರಿಯ ನಾಗರಿಕರನ್ನು ಸನ್ಮಾನಿಸಿ, ಅವರ ಆರೋಗ್ಯ ಹಾಗೂ ಸುಖಶಾಂತಿಗಾಗಿ ಶುಭ ಹಾರೈಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಅಧ್ಯಕ್ಷ ರಾಮೇಗೌಡ, ಉಪಾಧ್ಯಕ್ಷ ಮಹದೇವಸ್ವಾಮಿ, ಸದಸ್ಯರಾದ ಚಿಕ್ಕಣ್ಣ, ಲೋಕೇಶ್, ಸುರೇಶ್, ಚಲುವಯ್ಯ, ಪುಟ್ಟರಾಜು, ಶಿವಣ್ಣ, ವೆಂಕಟೇಶ್ ಹಾಗೂ ನಾಗರಾಜಮೂರ್ತಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.




# ರೂ.6.5 ಕೋಟಿ ವೆಚ್ಚದ ಸುಸಜ್ಜಿತ ವಿದ್ಯಾರ್ಥಿನಿಲಯ ನಿರ್ಮಾಣ

**ಮಂಡ್ಯ:** ಜಿಲ್ಲೆಯ ವಿದ್ಯಾರ್ಥಿನಿಯರ ಶೈಕ್ಷಣಿಕ ಸೌಲಭ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಮಂಡ್ಯ ನಗರದ ಶಂಕರನಗರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯದ ನೂತನ ಕಟ್ಟಡವನ್ನು ರೂ.6.5 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ ಎಂದು ಶಾಸಕ ಪಿ.ರವಿಕುಮಾರ್ ತಿಳಿಸಿದ್ದಾರೆ.

ನಗರದ ಶಂಕರನಗರದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ವಿದ್ಯಾರ್ಥಿನಿಲಯ ಕಟ್ಟಡದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಿಲ್ಲೆಯ ವಿದ್ಯಾರ್ಥಿಗಳಿಗೆ ಉತ್ತಮ ವಸತಿ ಹಾಗೂ ಶೈಕ್ಷಣಿಕ ವಾತಾವರಣ ಕಲ್ಪಿಸಲು ಸರ್ಕಾರ ಬದ್ಧವಾಗಿದೆ ಎಂದರು.

ಜಿಲ್ಲೆಯಲ್ಲಿ ಈಗಾಗಲೇ ಮೂರು ವಿದ್ಯಾರ್ಥಿನಿಲಯಗಳನ್ನು ಆರಂಭಿಸಲಾಗಿದ್ದು, ಮತ್ತಷ್ಟು ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಕಟ್ಟಡ ನಿರ್ಮಾಣ ಕಾರ್ಯಗಳನ್ನು ವೇಗವಾಗಿ ಕೈಗೊಳ್ಳಲಾಗಿದೆ. ಮುಂದಿನ ಆರು ತಿಂಗಳೊಳಗೆ ಇನ್ನಷ್ಟು ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಳ್ಳಲಿವೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕುಮಾರ್, ಸುಮಾರು ರೂ.6.5 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಈ ವಿದ್ಯಾರ್ಥಿನಿಲಯದಲ್ಲಿ 100 ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ವಿದ್ಯಾರ್ಥಿನಿಯರು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಶಿಕ್ಷಣದ ಮೂಲಕ ಜೀವನದಲ್ಲಿ ಉನ್ನತ ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು.




ನೂತನ ಕಟ್ಟಡದಲ್ಲಿ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲಾಗಿದ್ದು, ಸುರಕ್ಷಿತ ಹಾಗೂ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಿಸಲಾಗಿದೆ.

## ಬೃಂದಾವನ ಬಾಲಗೋಕುಲ ನೂತನ ಶಾಖೆ ಉದ್ಘಾಟನೆ

**ಮಡಿಕೇರಿ:** ಇಂದಿನ ಆಧುನಿಕ ಯುಗದಲ್ಲಿ ಮಕ್ಕಳ ಮುಗ್ಧ ಮನಸ್ಸುಗಳಲ್ಲಿ ಭಾರತೀಯ ಸಂಸ್ಕಾರ, ಉತ್ತಮ ನೈತಿಕ ಮೌಲ್ಯಗಳು ಹಾಗೂ ದೇಶಭಕ್ತಿಯನ್ನು ಬಿತ್ತುವ ಸದುದ್ದೇಶದಿಂದ ಮಡಿಕೇರಿ ನಗರದ ಸಮರ್ಥ ವಸತಿಯಲ್ಲಿ ನೂತನ ಬೃಂದಾವನಬಾಲಗೋಕುಲಶಾಖೆಯನ್ನು ಯಶಸ್ವಿಯಾಗಿ ಉದ್ಘಾಟಿಸಲಾಯಿತು.

ಕಳೆದ ಶನಿವಾರ (ಜೂನ್ 6) ನಡೆದ ಉದ್ಘಾಟನಾ ಸಮಾರಂಭಕ್ಕೆ ಪ್ರಮುಖರಾದ ಶ್ರೀ ಮಂಜುನಾಥ್ ಜಿ ಅವರು ಮಾರ್ಗದರ್ಶನ ನೀಡಿ ಶುಭ ಹಾರೈಸಿದರು. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಇಂತಹ ಸಂಸ್ಕಾರ ಕೇಂದ್ರಗಳು ಇಂದಿನ ಅಗತ್ಯವಾಗಿದೆ ಎಂದು ಅವರು ಈ ಸಂದರ್ಭದಲ್ಲಿ ಅಭಿಪ್ರಾಯಪಟ್ಟರು.

**ಸಂಭ್ರಮದ ಉದ್ಘಾಟನಾ ಕಾರ್ಯಕ್ರಮ:** ಸಮಾರಂಭದಲ್ಲಿ ಪುಟಾಣಿಗಳಿಂದ ಶ್ಲೋಕ ಮತ್ತು ಕಥಾ ಸಮಯದ ಕಾರ್ಯಕ್ರಮಗಳು ಜರುಗಿದವು. ಗೌರಿ ಅವರ ನಿತ್ಯ ಶ್ಲೋಕ ಪಠಣದೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ, ಶ್ರುತಿ ಅವರು ಏಕಲವ್ಯನ ಕಥೆಯನ್ನು ರೋಚಕವಾಗಿ ಪ್ರಸ್ತುತಪಡಿಸಿದರು.



ಮೇಘ ಅವರು ಭಗವದ್ಗೀತೆ ಪಠಣ ಮಾಡಿದರು ಹಾಗೂ ಸುಜಾತ ಅವರ ನೇತೃತ್ವದಲ್ಲಿ ಹನುಮಾನ್ ಚಾಲೀಸ ಭಜನೆ ನಡೆಯಿತು. ದಿನೇಶಣ್ಣ ಅವರ ನೇತೃತ್ವದಲ್ಲಿ ಮಕ್ಕಳಿಗೆ ವಿವಿಧ ಸಾಂಪ್ರದಾಯಿಕ ಆಟಗಳನ್ನು ಆಡಿಸಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ರಾಧಿಕಾ ನೆರವೇರಿಸಿದರು.

**ಪ್ರತಿ ಶನಿವಾರ ಉಚಿತ ತರಗತಿಗಳು:** ಈ ನೂತನ ಬಾಲಗೋಕುಲ ಶಾಖೆಯಲ್ಲಿ ಪ್ರತಿ ಶನಿವಾರ ಸಂಜೆ 4:00 ರಿಂದ 5:30 ರವರೆಗೆ ತರಗತಿಗಳು ನಡೆಯಲಿವೆ. ಇಲ್ಲಿ ಮಕ್ಕಳಿಗೆ ಸಂಪೂರ್ಣ ಉಚಿತವಾಗಿ ಶ್ಲೋಕ ಪಠಣ, ಭಗವದ್ಗೀತೆ, ನೈತಿಕ ಕಥೆಗಳು, ಸಾಂಪ್ರದಾಯಿಕ ಆಟಗಳು ಹಾಗೂ ದೇಶಭಕ್ತಿ ಗೀತೆಗಳನ್ನು ಕಲಿಸಿಕೊಡಲಾಗುತ್ತದೆ. ಸ್ಥಳೀಯ ಪೋಷಕರು ತಮ್ಮ ಮಕ್ಕಳನ್ನು ಪ್ರತಿ ಶನಿವಾರ ತಪ್ಪದೇ ಕಳುಹಿಸಿಕೊಡುವ ಮೂಲಕ ಈ ಉಚಿತ ತರಗತಿಗಳ ಸದುಪಯೋಗ ಪಡೆದುಕೊಳ್ಳಬೇಕಾಗಿ ಸಂಘಟಕರು ಪ್ರಕಟಣೆಯಲ್ಲಿ ಕೋರಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 91416 78047

**ಜೂ.27ರ ಬದಲು ಬೇರೆ ದಿನಾಂಕದಂದು ಅದ್ದೂರಿ ಆಚರಣೆಗೆ ಒಕ್ಕೊರಲ ತೀರ್ಮಾನ**

# ಕೆಂಪೇಗೌಡ ಜಯಂತಿಗೆ ಸಿಎಂ ಡಿಕೆಶಿ, ಚುಂಚಶ್ರೀ ಸಾರಥ್ಯ

**ಮೈಸೂರು:** ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಹಾಗೂ ಆದಿಚುಂಚನಗಿರಿ ಶ್ರೀ ನಿರ್ಮಲಾನಂದ ನಾಥ ಸ್ವಾಮೀಜಿ ಒಟ್ಟಾರೆಯಾಗಿ ನೀಡುವ ದಿನಾಂಕದಂದು ಸಮೃದ್ಧಿಯಾಗಿ ಕೆಂಪೇಗೌಡ ಜಯಂತಿಯನ್ನು ಆಚರಿಸಲು ಕೆಂಪೇಗೌಡ ಜಯಂತಿ ಮಹೋತ್ಸವ ಸಮಿತಿ ತೀರ್ಮಾನಿಸಿತು.

ಕೆಂಪೇಗೌಡ ಜಯಂತಿ -2026 ಸಂಬಂಧ ಹೆಬ್ಬಾಳಿನಲ್ಲಿ ಲಕ್ಷ್ಮಿಕಾಂತ ದೇವಾಲಯದ ಶ್ರೀ ಆದಿಚುಂಚನಗಿರಿ ಶಾಖಾ ಮಠದಲ್ಲಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮೇಲಿನ ತೀರ್ಮಾನ ಕೈಗೊಳ್ಳಲಾಯಿತು. ಸಭೆ ಅಧ್ಯಕ್ಷತೆವಹಿಸಿದ್ದ ಶ್ರೀ ಸೋಮೇಶ್ವರ ನಾಥ ಸ್ವಾಮೀಜಿ ಮಾತನಾಡಿ ಎಲ್ಲರ ಆಶಯದಂತೆ ಈ ಬಾರಿ ಅದ್ದೂರಿ ಜತೆಗೆ ಸಮೃದ್ಧಿ ಕೆಂಪೇಗೌಡ ಜಯಂತಿ ಆಚರಣೆಗೆ ತೀರ್ಮಾನಿಸಲಾಗಿದೆ. ಎಲ್ಲಾ ತಾಲ್ಲೂಕಿನಿಂದಲೂ ಜನರು ಆಗಮಿಸಲು ಅನೂಕೂಲ ಆಗುವ ನಿಟ್ಟಿನಲ್ಲಿ ಜೂ.27ರ ಬದಲಿ ದಿನಾಂಕದಂದು ಅದ್ದೂರಿಯಾಗಿ ಕೆಂಪೇಗೌಡ ಜಯಂತಿ ಆಚರಣೆಗೆ ತೀರ್ಮಾನಿಸಲಾಗಿದೆ. ಸಮುದಾಯದವರು ಒಂದೆಡೆ ಸೇರಿ ಸಂಭ್ರಮಿಸುವ ನಿಟ್ಟಿನಲ್ಲಿ ಪ್ರತ್ಯೇಕ ದಿನ ಆಚರಣೆಗೆ ಪ್ರಚಾರ ಮಾಡಲು ತಯಾರಿ ನಡೆಸುವಂತೆ ಹೇಳಿದರು.

ಜೂ.27ಕ್ಕೆ ಎಲ್ಲಾ ತಾಲ್ಲೂಕು, ಹೋಬಳಿ, ಗ್ರಾಮಗಳಲ್ಲಿ ಎಂದಿನಂತೆ ನಡೆಯಲಿ. ಜಿಲ್ಲೆಯಲ್ಲಿ ಪ್ರತ್ಯೇಕವಾಗಿ ಜಯಂತಿ ಆಚರಣೆ ಮಾಡಲಾಗುವುದು. ಸಮಾಜದವರನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ಅತಿಹೆಚ್ಚಿನ ಜನಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಹೇಳಿದರು.

ಶಾಸಕ ಹರೀಶ್ಗೌಡ ಮಾತನಾಡಿ, ಸಮುದಾಯದ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿರುವುದರಿಂದ ಅವರ ನೇತೃತ್ವದಲ್ಲಿ ಜಯಂತಿ ಅದ್ದೂರಿಯಾಗಿ ನಡೆಸಬೇಕೆಂಬ ನಿಮ್ಮೆಲ್ಲರ ಅಭಿಪ್ರಾಯಕ್ಕೆ ನನ್ನ ಸಹಮತವಿದೆ. ಅದಕ್ಕೆ ಬೇಕಾಗುವ ಎಲ್ಲಾ ರೀತಿಯ ಸಹಕಾರ ನೀಡುತ್ತದೆ. ಪ್ರಚಾರ ರಥದ ಮೂಲಕ ತಾಲ್ಲೂಕು ಮಟ್ಟದಲ್ಲಿಯೂ ಪ್ರಚಾರ ನಡೆಸಿ, ಅಗತ್ಯವಿದ್ದರೆ ತಾಲ್ಲೂಕಿನ ಆಗಮಿಸುವವರೆಗೆ ಬಸ್ ವ್ಯವಸ್ಥೆ ಕಲ್ಪಿಸಿಕೊಡಿ. ಕಲಾಮಂದಿರದ ಬದಲಿಗೆ ಬೇರೆ ಜಾಗದಲ್ಲಿ ಅದ್ದೂರಿಯಾಗಿ ಆಚರಿಸಲು ಕೆಂಪೇಗೌಡ ಜಯಂತೋತ್ಸವ ಕೈಗೊಳ್ಳುವ ತೀರ್ಮಾನಕ್ಕೆ ಬೆಂಬಲವಾಗಿ ಕೆಲಸ ಮಾಡಲಿದ್ದೇನೆಂದರು.

ಮಾಜಿ ಸಂಸದ ಪ್ರತಾಪಸಿಂಹ ಮಾತನಾಡಿ, ಪಕ್ಷ ಯಾವುದಾದರೂ ಸರಿಯೇ ಸಮುದಾಯದವರು ಮುಖ್ಯಮಂತ್ರಿ ಆಗಿರುವುದನ್ನು ನಾವೆಲ್ಲರೂ ಸ್ವಾಗತಿಸೋಣ. ಕೆಂಪೇಗೌಡರ ಜತೆಗೆ ಗಂಗರ ಇತಿಹಾಸದ ಬಗ್ಗೆಯೂ ತಿಳಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಈ ದಿಸೆಯಲ್ಲಿ ಕೆಂಪೇಗೌಡ ಜಯಂತಿಗೆ ಅಗತ್ಯ ಸಹಕಾರ ನೀಡುವುದಾಗಿ ಹೇಳಿದರು.

ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಮೈಸೂರಿನ ಕೆಂಪೇಗೌಡ ಜಯಂತಿಗೆ ಒಂದು ಭವ್ಯ ಇತಿಹಾಸವಿದೆ. ಜತೆಗೆ ಸಮುದಾಯದ ವಿಚಾರ ಬಂದಾಗ ಎಲ್ಲರೂ ಸಂಘಟಿತರಾಗಬೇಕಿದೆ. ಈ ನಿಟ್ಟಿನಲ್ಲಿ ಸ್ವಾಮೀಜಿಗಳ ಸಾನಿಧ್ಯದಲ್ಲಿ ಜಯಂತೋತ್ಸವವನ್ನು ಅದ್ದೂರಿಯಾಗಿ ಆಚರಣೆ ಮಾಡಲು ನನ್ನ ಸಹ ಮತವಿದ್ದು ಅದಕ್ಕೆ ಬೇಕಾದ ಸಹಕಾ ನೀಡುತ್ತೇನೆಂದು ತಿಳಿಸಿದರು.

ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ.ಗಂಗಾಧರ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಕೆ.ವಿ.ಶ್ರೀಧರ್, ಎಂ.ಬಿ.ಮಂಜೇಗೌಡ, ಮೈಸೂರು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಮರಿಸ್ವಾಮಿ ಮಾತನಾಡಿ ಕೆಂಪೇಗೌಡ ಜಯಂತಿ ದಿನಾಂಕ ನಿಗಧಿ, ಜಯಂತಿ ಸಮಿತಿ ರಚನೆ ಇತ್ಯಾದಿ ವಿವರಗಳನ್ನು ಶ್ರೀ ಸೋಮೇಶ್ವರನಾಥ ಸ್ವಾಮಿ ನೇತೃತ್ವದಲ್ಲಿ ಅಂತಿಮಗೊಳಿಸಲಾಗುವುದು ಎಂದು ಹೇಳಿದರು. ಕಳೆದ ಬಾರಿ ಕೆಂಪೇಗೌಡ ಜಯಂತೋತ್ಸವದ ಅಧ್ಯಕ್ಷತೆವಹಿಸಿದ್ದ ಪಿ.ಪ್ರಶಾಂತಗೌಡರಿಗೆ ಅಭಿನಂದನೆ ಸಲ್ಲಿಸಿದರು. ಇದೇ ವೇಳೆ ಮಾಜಿ ಮೇಯರ್ ಮೋದಾಮಣಿ, ಪುಷ್ಪಲತಾ ಜಗನ್ನಾಥ್, ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಮರಿಸ್ವಾಮಿ, ಗೌರವಾಧ್ಯಕ್ಷ ಆಲತೂರು ಜಯರಾಮ್, ಉಪಾಧ್ಯಕ್ಷ ರವಿಕುಮಾರ್ ರಾಜಕೀಯ, ಪ್ರಧಾನ ಕಾರ್ಯದರ್ಶಿ ಎಂ.ಈ.ಚೇತನ್, ಖಜಾಂಚಿ ಲೋಕೇಶ್, ನಿರ್ದೇಶಕರಾದ ಉಮೇಶ್, ಕುಮಾರ್ ಗೌಡ, ನಂಜನಗೂಡು ಗೋಪಾಲ್, ಎಂ.ಸುಶೀಲ ನಂಜಪ್ಪ, ಪ್ರಕಾಶ್, ಗಿರೀಶ್ ಗೌಡ, ಗುರುರಾಜ್, ಬೋರೇಗೌಡ, ಎ.ರವಿ, ಸಮುದಾಯದ ಮುಖಂಡರಾದ ಬೀಡನಹಳ್ಳಿ ಸತೀಶ್ ಗೌಡ, ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಮೈಸೂರು ಕೈಗಾರಿಕೆಗಳ ಸಂಘದ ಅಧ್ಯಕ್ಷ ಕೆ.ಬಿ.ಲಿಂಗರಾಜು, ನೇಗಿಲಯೋಗಿ ರವಿಕುಮಾರ್, ಕರ್ನಾಟಕ ಕಾವಲುಪಡೆದ ಅಧ್ಯಕ್ಷ ಮೋಹನ್ ಕುಮಾರ್ ಗೌಡ, ರಾಜಣ್ಣ, ತಾಲ್ಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಕೂರ್ಗಳ್ಳಿ ಮಹದೇವ್, ರಾಜಕುಮಾರ್, ಹಂಚ್ಯಾ ಸ್ವಾಮಿಗೌಡ, ಯರಗನಹಳ್ಳಿ ವೆಂಕಿಗೌಡ ಇನ್ನಿತರರು ಉಪಸ್ಥಿತರಿದ್ದರು.



# ಹೇಮಗಿರಿಯ ಬಿಜಿಎಸ್ ಪಬ್ಲಿಕ್ ಶಾಲೆಯಲ್ಲಿ ಪೋಷಕರಿಗೆ ಹೂವು- ಹಣ್ಣಿನ ಗಿಡಗಳ ವಿತರಣೆ

**ಕೆ.ಆರ್.ಪೇಟೆ:** ತಾಲೂಕಿನ ಹೇಮಗಿರಿಯ ಬಿಜಿಎಸ್ ಪಬ್ಲಿಕ್ ಶಾಲೆಯಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮ ಹಾಗೂ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪೋಷಕರಿಗೆ ಹೂವು ಮತ್ತು ಹಣ್ಣಿನ ಗಿಡಗಳ ವಿತರಣಾ ಕಾರ್ಯಕ್ರಮ ನಡೆಯಿತು.

ತಾಲ್ಲೂಕು ನಾಲ್ವಡಿ ಕೃಷ್ಣರಾಜ ಒಡೆಯರ್ ಪರಿಸರ ಜಾಗೃತಿ ವೇದಿಕೆಯ ಅಧ್ಯಕ್ಷ ಬಳ್ಳೇಕೆರೆ ಮಂಜುನಾಥ್ ಸಸಿಗಳನ್ನು ವಿತರಣೆ ಮಾಡಿ ಮಾತನಾಡಿ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯು ಗುರುಕುಲ ಪದ್ಧತಿಯ ಮಾದರಿಯಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ, ಭವಿಷ್ಯದ ನಾಯಕರನ್ನು ರೂಪಿಸುವ ಕೆಲಸವನ್ನು ಬದ್ಧತೆಯಿಂದ ಮಾಡುತ್ತಿದೆ ಎಂದು ಹೇಳಿದರು. ಬಿಜಿಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳಿಗೆ ಅಕ್ಷರ ಅಭ್ಯಾಸ ಕಾರ್ಯಕ್ರಮದ ಜೊತೆಗೆ ವಿಶ್ವ ಪರಿಸರ ದಿನದ ಅಂಗವಾಗಿ ವಿವಿಧ ಬಗೆಯ ಹೂವು ಮತ್ತು ಹಣ್ಣಿನ ಸಸಿಗಳನ್ನು ವಿತರಣೆ ಮಾಡಿರುವುದು ಒಳ್ಳೆಯ ಕೆಲಸವಾಗಿದೆ. ಜಾಗತಿಕ ಜಗತ್ತಿನ ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ವಿದ್ಯಾರ್ಥಿಗಳು ಮೊಬೈಲ್ ಮಾಯಾಜಾಲದಲ್ಲಿ ಸಿಲುಕಿ ಅತಂತ್ರ ಪರಿಸ್ಥಿತಿಯಲ್ಲಿರುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಆಯೋಜಿಸಿ ಗುರು ಹಿರಿಯರು ಹಾಗೂ ತಂದೆ ತಾಯಿಗಳನ್ನು ಗೌರವಿಸಿ ಪೂಜಿಸುವ ಸಂಸ್ಕಾರವನ್ನು ಕಲಿಸುವ ಈ ವಿಶೇಷವಾದ ಕಾರ್ಯಕ್ರಮವು ಮಕ್ಕಳಿಗೆ ಬಾಲ್ಯದಿಂದಲೇ ನೈತಿಕ ಶಿಕ್ಷಣ ಹಾಗೂ ಸಂಸ್ಕಾರವನ್ನು ನೀಡುವ ಜಾಗೃತಿಯ ಕಾರ್ಯಕ್ರಮವಾಗಿದೆ. ಶಿಕ್ಷಣ ಪ್ರೇಮಿಗಳು ಹಾಗೂ ಆದಿಚುಂಚನಗಿರಿಯ ಹೇಮಗಿರಿ ಶಾಖಾ ಮಠದ ಗೌರವ ಕಾರ್ಯದರ್ಶಿಗಳಾಗಿರುವ ಡಾ. ಜೆ.ಎನ್. ರಾಮಕೃಷ್ಣೇಗೌಡ ಅವರು ಶೃಂಗೇರಿಯ ಶಾರದಾ ಪೀಠದಲ್ಲಿ ನಡೆಯುವ ಮಕ್ಕಳ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಹೇಮಗಿರಿ ಶಾಖಾ ಮಠದಲ್ಲಿ ಪ್ರತಿ ವರ್ಷವೂ ಆಯೋಜಿಸುವ ಮೂಲಕ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವ ಕಾಯಕವನ್ನು ಶ್ರದ್ಧಾಭಕ್ತಿಯಿಂದ ಮಾಡುತ್ತಿದ್ದಾರಲ್ಲದೇ ಮಕ್ಕಳು ಹಾಗೂ ಮಕ್ಕಳ ಪೋಷಕರಿಗೆ ನಮ್ಮ ಸನಾತನ ಹಿಂದೂ ಧರ್ಮದ ಶ್ರೇಷ್ಠತೆಯನ್ನು ಪರಿಚಯಿಸುವ ಕಾಯಕವನ್ನು ಕೂಡಾ ಬದ್ಧತೆಯಿಂದ ಮಾಡುತ್ತಿದ್ದಾರೆ ಎಂದು ಮಂಜುನಾಥ್ ಹೇಳಿದರು.



ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಕೆ.ಹರಿಚರಣತಿಲಕ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ ನಾವು ತಿನ್ನುವ ಆಹಾರ, ಉಸಿರಾಡುವ ಗಾಳಿ, ಕುಡಿಯುವ ನೀರು ಸೇರಿದಂತೆ ನಾವು ವಾಸ ಮಾಡುವ ಪರಿಸರವು ಮಾನವನ ನಿರಂತರವಾದ ದೌರ್ಜನ್ಯ ದಬ್ಬಾಳಿಕೆಯಿಂದಾಗಿ ಮಾಲಿನ್ಯವಾಗುತ್ತಿದೆ. ನಗರೀಕರಣದ ಪ್ರಭಾವದಿಂದಾಗಿ ಗಿಡಮರಗಳನ್ನು ಕಡಿದು , ಕಾಡನ್ನು ನಾಶ ಮಾಡುತ್ತಿರುವುದರಿಂದ ಕಾಲಕಾಲಕ್ಕೆ ಮಳೆಯಾಗಿ ಉತ್ತಮವಾದ ಬೆಳೆಯಾಗದೆ ಮಾನವರಾದ ನಾವು ಸಂಕಷ್ಟಕ್ಕೆ ಸಿಲುಕಿ ನರಳ ಬೇಕಾಗಿದೆ ಆದ್ದರಿಂದ ಗಿಡಮರಗಳನ್ನು ನೆಟ್ಟು ನಮ್ಮ ಮಕ್ಕಳಂತೆ ಪೋಷಿಸಿ ಹಾರೈಕೆ ಮಾಡುವ ಮೂಲಕ ಪರಿಸರ ಸಮತೋಲನವನ್ನು ಕಾಪಾಡಿ ನಮ್ಮ ಮುಂದಿನ ತಲೆಮಾರಿಗೆ ಉತ್ತಮವಾದ ವಾತಾವರಣವನ್ನು ಹೊಂದಿರುವ ಪರಿಸರವನ್ನು ಕಾಪಾಡಬೇಕಾಗುವುದು ಇಂದಿನ ಅಗತ್ಯವಾಗಿದೆ ಎಂದು ಹರಿಚರಣತಿಲಕ್ ಹೇಳಿದರು.

ಪುರಸಭೆ ಮಾಜಿ ಸದಸ್ಯ ಕೆ.ಆರ್.ನೀಲಕಂಠ ಮಾತನಾಡಿ ಇಂದಿನ ಮಕ್ಕಳೇ ನಾಳಿನ ಭವ್ಯ ಭಾರತದ ಸತ್ಪ್ರಜೆಗಳಾದ್ದರಿಂದ ನಾವು ಮಕ್ಕಳಿಗಾಗಿ ಆಸ್ತಿ ಅಂತಸ್ತನ್ನು ಸಂಪಾದನೆ ಮಾಡಿ ಕೂಡಿಡುವ ಬದಲಿಗೆ, ನಮ್ಮ ಮಕ್ಕಳಿಗೆ ಉತ್ತಮವಾದ ಸಂಸ್ಕಾರ ಹಾಗೂ ಶಿಕ್ಷಣವನ್ನು ಕೊಡಿಸಿ ಸಮಾಜದ ಮುಖ್ಯವಾಹಿನಿಗೆ ಬಂದು ಸಾಧನೆ ಮಾಡುವಂತೆ ಬೆನ್ನು ತಟ್ಟಿ ಪ್ರೋತ್ಸಾಹಿಸುವ ಜೊತೆಗೆ, ನಮ್ಮ ಮಕ್ಕಳನ್ನೇ ಸಮಾಜಕ್ಕೆ ಆಸ್ತಿಯನ್ನಾಗಿ ಕೊಡುಗೆ ನೀಡಲು ದೃಢ ಸಂಕಲ್ಪ ಮಾಡಬೇಕು ಎಂದು ನೀಲಕಂಠ ಪೋಷಕರಿಗೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ನಾಲ್ವಡಿ ಕೃಷ್ಣರಾಜ ಒಡೆಯರ್ ಪರಿಸರ ಜಾಗೃತಿ ವೇದಿಕೆಯ ಸಂಚಾಲಕ ಅಗ್ರಹಾರಬಾಚಹಳ್ಳಿ ಶ್ರೀನಿವಾಸ್, ಕಾಮನಹಳ್ಳಿ ,ಮಂಜುನಾಥ್, ಆರ್ ಟಿ ಒ ಮಲ್ಲಿಕಾರ್ಜುನ್, ಆಪ್ತ ಸಹಾಯಕ ಗಂಜಿಗೆರೆ ಮಹೇಶ್,ಹೊನ್ನೇನಹಳ್ಳಿ ಎಸ್ ರವಿ,ಮನು, ವಿ.ಲೋಕೇಶ್, ಸಾಯಿಕುಮಾರ್, ,ಬಿಜಿಎಸ್ ಶಾಲೆಯ ಮುಖ್ಯಸ್ಥ ಪುನೀತ್ , ಸೇರಿದಂತೆ ಶಾಲಾ ಮಕ್ಕಳ ನೂರಾರು ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಅಮ್ಮನ ಮುದ್ರೆ, ಜೀವದ ತಾಕತ್ತು!



| ರೂಪ ಮಂಜುನಾಥ ಹೊಳೆನರಸೀಪುರ



ಜಗತ್ತಿನ ಅದಾವ ಮೂಲೆಯ ಮನೆಗೆ ಹೋದರೂ ಮುಖ್ಯ ದ್ವಾರದ ಮುಂದೆ ಒಂದು ನಾಮಫಲಕ ಇರುತ್ತದೆ. ಆ ನಾಮಫಲಕದ ಮೇಲೆ ಅಚ್ಚಾಗಿರುವ ಹೆಸರು, ಅದರ ಪಕ್ಕದಲ್ಲಿರುವ ಸರ್‌ನೇಮ್ ಅಥವಾ ವಂಶದ ಹೆಗ್ಗುರುತು ಯಾವುದೋ ಒಬ್ಬ ಪುರುಷ ಪೂರ್ವಜನ ಕಥೆಯನ್ನು ಹೇಳುತ್ತಿರುತ್ತದೆ. ತಂದೆಯಿಂದ ಮಗನಿಗೆ, ಅವನಿಂದ ಮೊಮ್ಮಗನಿಗೆ ಹಸ್ತಾಂತರವಾಗುತ್ತಾ ಸಾಗುವ ಈ 'ಹೆಸರಿನ' ಪರಂಪರೆಯಲ್ಲಿ, ಆ ಮನೆಗೆ ಜೀವ ತುಂಬಿದ, ಮನೆಗೆ ಮಹಾಲಕ್ಷ್ಮಿಯಂತಿರುವ, ಅಮ್ಮಂದಿರ ಹೆಸರುಗಳು ಮಾತ್ರ ಎಲ್ಲೋ ಮರೆಯಾಗಿಬಿಡುತ್ತವೆ.? ಮಾತೆಯ ಮಹತ್ವದ ಬಗ್ಗೆ ನೂರಾರು ನುಡಿಮುತ್ತುಗಳಿದ್ದರೂ, ಈ ಪುರುಷ ಪ್ರಾಧಾನ್ಯ ಸಮಾಜದಲ್ಲಿ ಬೃಹದಾಕಾರವಾಗಿ ಹರಡಿಕೊಂಡಿರುವ ವಂಶವೃಕ್ಷದ ರೆಂಬೆ-ಕೊಂಬೆಗಳ ನಡುವೆ ಅಮ್ಮಂದಿರು ಎನ್ನುವ ಅಮೃತದಂಥ ಸಿಹಿಫಲಗಳು ಕಾಣದಂತೆ ತೆರೆಯ ಮರೆಯಲ್ಲೇ ಉಳಿದುಬಿಡುತ್ತವೆ.

ಆದರೆ, ಮನುಷ್ಯರು ಬರೆದ ಇತಿಹಾಸದ ಪುಸ್ತಕಗಳಿಗಿಂತ ಪ್ರಕೃತಿಯ ಕಣ್ಣುಗಳು ತುಂಬಾ ತೀಕ್ಷ್ಣವಾದವು. ಮನುಷ್ಯ ತನ್ನ ಅಹಂಕಾರದಿಂದ ಸಮಾಜದಲ್ಲಿ 'ಪಿತೃಪ್ರಧಾನ' ಗೋಡೆಗಳನ್ನು ಕಟ್ಟಿಕೊಂಡರೆ, ಪ್ರಕೃತಿ ಮಾತ್ರ ನಮ್ಮ ದೇಹದ ಒಳಗೊಂದು ಮೌನವಾದ, ಮುರಿಯದ 'ಮಾತೃಪ್ರಧಾನ' ಸಾಮ್ರಾಜ್ಯವನ್ನು ಸೃಷ್ಟಿಸಿ ಅಮ್ಮಂದಿರ ಪಾತ್ರವನ್ನು ಹೆಮ್ಮೆಯಿಂದ ಎತ್ತಿ ಹಿಡಿದಿದೆ. ಇತಿಹಾಸದ ಪುಟಗಳು ತಂದೆಯ ಹೆಸರನ್ನು ಹುಡುಕುತ್ತಾ ಹೋದರೆ, ನಮ್ಮ ದೇಹದ ಜೀವಕೋಶಗಳು ನಮ್ಮ ನಿಜವಾದ ಮೂಲವನ್ನು ಕೇವಲ ತಾಯಂದಿರ ಮೂಲಕ ಮಾತ್ರ ನೆನಪಿಸಿಕೊಳ್ಳುತ್ತವೆ.

ಇದೊಂದು ಪ್ರಕೃತಿ ಆಡಿದ ಜೈವಿಕ ಜಾಣ್ಮೆಯ ಆಟ!

ನಮ್ಮ ದೇಹದ ಪ್ರತಿ ಜೀವಕೋಶದ ಒಳಗೂ ಎರಡು ರೀತಿಯ ಡಿಎನ್‌ಎ (DNA) ಲಿಪಿಗಳಿವೆ. ಒಂದು, 'ನ್ಯೂಕ್ಲಿಯರ್ ಡಿಎನ್‌ಎ'. ಇದು ತಂದೆ-ತಾಯಿ ಇಬ್ಬರ ಕಡೆಯಿಂದಲೂ ಅರ್ಧರ್ಧ ಬಂದು, ನಮ್ಮ ಕಣ್ಣಿನ ಬಣ್ಣವನ್ನೋ, ಮೂಗಿನ ಆಕಾರವನ್ನೋ ನಿರ್ಧರಿಸಿಬಿಟ್ಟು ಕೈತೊಳೆದುಕೊಳ್ಳುತ್ತದೆ. ಆದರೆ, ಜೀವಕೋಶದ ಆಳದಲ್ಲಿ 'ಮೈಟೊಕಾಂಡ್ರಿಯಾ' ಎಂಬ ಪುಟ್ಟ ಶಕ್ತಿ ಕೇಂದ್ರಗಳಿವೆ. ನಾವು ಉಸಿರಾಡುವ, ಓಡುವ, ಯೋಚಿಸುವ ಪ್ರತಿ ಕ್ಷಣಕ್ಕೂ ಬೇಕಾದ ಜೈವಿಕ ಇಂಧನವನ್ನು ಒದಗಿಸುವ ದೀಪಗಳಿವು. ಈ ದೀಪದ ಒಳಗೊಂದು ಪುಟ್ಟ ವಂಶವಾಹಿಯ ಸುರುಳಿಯಿದೆ, ಅದೇ 'ಮೈಟೊಕಾಂಡ್ರಿಯಲ್ ಡಿಎನ್‌ಎ' (mtDNA).

ದೇಹದಲ್ಲಿರುವ ಈ ಮೈಟೊಕಾಂಡ್ರಿಯಾಗಳು ಎಷ್ಟು ಶ್ರಮಜೀವಿಗಳು ಗೊತ್ತೇ? ಅವು ಪ್ರತಿದಿನವೂ ನಮ್ಮ ಇಡೀ ದೇಹದ ತೂಕಕ್ಕೆ ಸಮನಾದ ಪ್ರಮಾಣದಲ್ಲಿ ಎಟಿಪಿ (ATP - ಶಕ್ತಿ ಅಣುಗಳು) ಯನ್ನು ಉತ್ಪಾದಿಸುತ್ತವೆ! ಈ ಶಕ್ತಿ ಇಲ್ಲದಿದ್ದರೆ ನಾವು ಉಸಿರಾಡಲು, ಯೋಚಿಸಲು ಅಥವಾ ಒಂದೇ ಒಂದು ಹೆಜ್ಜೆ ಇಡಲೂ ಸಾಧ್ಯವಿರುತ್ತಿರಲಿಲ್ಲ. ವಿಸ್ಮಯವೆಂದರೆ, ನಮಗೆ ಜೀವ ತುಂಬುವ ಈ ಪ್ರತಿಯೊಂದು ಶಕ್ತಿ ಕೇಂದ್ರವೂ ನಮಗೆ ನೇರವಾಗಿ ಬಂದಿರುವುದು ನಮ್ಮ ಅಮ್ಮನಿಂದಲೇ ಹೊರತು ಅಪ್ಪನಿಂದಲ್ಲ!ದಯವಿಟ್ಟು ಈ ವಿಚಾರಕ್ಕೆ ಯಾವ ಅಪ್ಪಂದಿರೂ ಬೇಸರ ಪಟ್ಟುಕೊಳ್ಳಬೇಡಿ.ಇದು ಸ್ತ್ರೀವಾದಿಗಳ ಹೇಳಿಕೆಯಲ್ಲ! ವೈಜ್ಞಾನಿಕ ಸತ್ಯ!

ಚಿತ್ರಾನ್ನಕ್ಕೆ ಸಾಸಿವೆ ಒಗ್ಗರಣೆ ಕೊಟ್ಟ ಹಾಗೆ, ಈ ಡಿಎನ್‌ಎ ಮೇಲೆ ತಂದೆಯ ಯಾವ ಪ್ರಭಾವವೂ ಇರುವುದಿಲ್ಲ. ಮಗುವಾಗುವ ಪ್ರಕ್ರಿಯೆಯಲ್ಲಿ ತಂದೆಯ ಕಡೆಯಿಂದ ಬರುವ ವೀರ್ಯಾಣುವು ತಾಯಿಯ ಅಂಡಾಣುವನ್ನು ಸೇರಿದಾಗ, ತಂದೆಯ ಮೈಟೊಕಾಂಡ್ರಿಯಾಗಳು ಕೂಡ ಒಳಗೆ ಪ್ರವೇಶಿಸಬಹುದು. ಆದರೆ, ಅಂಡಾಣುವಿನ ಒಳಗೆ ಪ್ರಕೃತಿಯು ಒಂದು ಅದ್ಭುತವಾದ 'ಹುಡುಕಿ ನಾಶಪಡಿಸುವ' (Search and Destroy) ವಿಶೇಷ ವ್ಯವಸ್ಥೆಯನ್ನು ಇಟ್ಟಿದೆ. ಅದು ತಂದೆಯ ಮೈಟೊಕಾಂಡ್ರಿಯಾಗಳನ್ನು ಪ್ರತ್ಯೇಕವಾಗಿ ಗುರುತಿಸಿ, ಸಂಪೂರ್ಣವಾಗಿ ಧ್ವಂಸಗೊಳಿಸಿಬಿಡುತ್ತದೆ.

ಆದರೆ ವಿಜ್ಞಾನದ ಇತಿಹಾಸದಲ್ಲಿ, ತಂದೆಯ ಮೈಟೊಕಾಂಡ್ರಿಯಾಗಳು ಹೇಗೋ ಬದುಕುಳಿದು ಅಂಡಾಣುವಿನ ಒಳಗೆ ಉಳಿದುಕೊಂಡ ಅತ್ಯಂತ ಅಪರೂಪದ ಕೆಲವು ಪ್ರಕರಣಗಳು ದಾಖಲಾಗಿವೆ. ಆಶ್ಚರ್ಯವೆಂದರೆ, ?ದಾಖಲಾದ ಕೆಲವು ಅಪರೂಪದ ಪ್ರಕರಣಗಳಲ್ಲಿ ಆರೋಗ್ಯ ಸಮಸ್ಯೆಗಳು ಕಂಡುಬಂದಿವೆ? ಹಾಗೆ ತಂದೆಯ mtDNA ಹೊಂದಿದ್ದ ಪ್ರತಿಯೊಬ್ಬ ವ್ಯಕ್ತಿಯೂ ತೀವ್ರವಾದ ಸ್ನಾಯು ರೋಗದಿಂದ (Serious muscular disease) ಬಳಲುತ್ತಿದ್ದರು! ಪ್ರಕೃತಿಯೇ ಇದನ್ನು ಒಂದು ದೋಷ ಅಥವಾ ತಪ್ಪು (Malfunction) ಎಂದು ಪರಿಗಣಿಸುತ್ತದೆ. ಇದು ತಾಯಿಯ ಕಡೆಯಿಂದಲೇ ಮೈಟೊಕಾಂಡ್ರಿಯಾ ಬರಬೇಕು ಎಂಬ ನಿಯಮ ಎಷ್ಟು ಕಡ್ಡಾಯ ಮತ್ತು ಅನಿವಾರ್ಯ ಎಂಬುದನ್ನು ನಮಗೆ ತೋರಿಸಿಕೊಡುತ್ತದೆ.

ಕಾಲದ ಓಟದಲ್ಲಿ ಈ ಜೀನ್‌ನಲ್ಲಿ ಸಣ್ಣ ಸಣ್ಣ ಮ್ಯುಟೇಷನ್‌ಗಳು ಅಥವಾ ರೂಪಾಂತರಗಳು ಸಂಭವಿಸುತ್ತವೆಯಾದರೂ, ತಾಯಿಗೆ ಅವಳ ಅಮ್ಮನಿಂದ, ಅವಳಿಗೆ ಅವಳ ಅಮ್ಮನಿಂದ... ಹೀಗೆ ತಲೆಮಾರುಗಳಿಂದ ಒಂದು ಸುಂದರ ಪರಂಪರೆಯಾಗಿ ಈ ಜೀನ್ ನೇರವಾಗಿ ನಮ್ಮನ್ನು ತಲುಪುತ್ತದೆ.

ವಿಜ್ಞಾನಿಗಳು ಈ ಸೂತ್ರವನ್ನು ಹಿಡಿದುಕೊಂಡು ಮನುಷ್ಯನ ಇತಿಹಾಸದ ಹಾದಿಯಲ್ಲಿ ಉಲ್ಟಾ ಹೆಜ್ಜೆ ಇಡುತ್ತಾ ಹೋದರು. ಜಗತ್ತಿನ ಬೇರೆ ಬೇರೆ ದೇಶಗಳ ಜನರ ಮೈಟೊಕಾಂಡ್ರಿಯಲ್ ಡಿಎನ್‌ಎಗಳನ್ನು ಪರೀಕ್ಷಿಸಿದಾಗ ಅವರೆಲ್ಲರ ತಾಯಿಯ ಕಡೆಯ ವಂಶಸರಣಿಯ ದಾರಿಗಳು ಕೊನೆಗೆ ಮುಟ್ಟಿದ್ದು ಒಂದೇ ಒಂದು ಬಿಂದುವನ್ನು! ಹೌದು, ಸುಮಾರು ಎರಡು ಲಕ್ಷ ವರ್ಷಗಳ ಹಿಂದೆ, ಆಫ್ರಿಕಾದ ಹಚ್ಚಹಸಿರ ಕಾಡುಗಳ ನಡುವೆ ಒಬ್ಬಳು ಹೆಣ್ಣುಮಗಳು ಬದುಕಿದ್ದಳು. ವಿಜ್ಞಾನಿಗಳು ಆಕೆಯನ್ನು ಪ್ರೀತಿಯಿಂದ "ಮೈಟೊಕಾಂಡ್ರಿಯಲ್ ಈವ್" (ಆದಿ ತಾಯಿ) ಎಂದು ಕರೆದರು.

ಇಲ್ಲಿ ಒಂದು ರೋಮಾಂಚಕ ಸಂಗತಿಯಿದೆ: ಜಗತ್ತಿನ ಬಹುತೇಕ ಎಲ್ಲಾ ಧರ್ಮ ಮತ್ತು ಸಂಸ್ಕೃತಿಗಳಲ್ಲಿ ಒಬ್ಬ 'ಆದಿ ತಾಯಿ'ಯ ಕಲ್ಪನೆಯಿದೆ?ಹಿಂದೂ ಧರ್ಮದ 'ಆದಿ ಶಕ್ತಿ', ಕ್ರಿಶ್ಚಿಯನ್ ಧರ್ಮದ 'ಈವ್' ಮತ್ತು ಇಸ್ಲಾಂ ಧರ್ಮದ 'ಹವ್ವ'. ಎಷ್ಟು ಆಶ್ಚರ್ಯಕರ ಸಂಗತಿಯೆಂದರೆ, ಆಧುನಿಕ ವಿಜ್ಞಾನವು ಡಿಎನ್‌ಎ ಸಂಶೋಧನೆಯ ಮೂಲಕ ಸ್ವತಂತ್ರವಾಗಿ ನಡೆಸಿ ಕೊನೆಗೆ ಅದೇ ತೀರ್ಮಾನಕ್ಕೆ ಬಂದು ನಿಂತಿದೆ: ಇಡೀ ಮಾನವಕುಲ ಒಬ್ಬಳೇ ಒಬ್ಬ ಮಹಿಳೆಯಿಂದ ಹುಟ್ಟಿಕೊಂಡಿದೆ! ಆಧ್ಯಾತ್ಮಿಕ ಅಂತಃಪ್ರಜ್ಞೆ ಮತ್ತು ವೈಜ್ಞಾನಿಕ ಅನ್ವೇಷಣೆ ಎರಡೂ ಒಂದೇ ಸತ್ಯದ ಕಡೆಗೆ ಬೆರಳು ಮಾಡಿ ತೋರಿಸುತ್ತಿವೆ.

ಇಲ್ಲಿ ನಾವು ನೆನಪಿಡಬೇಕಾದ ಮತ್ತೊಂದು ವಿಷಯವೆಂದರೆ, ಆಕೆ ಆ ಕಾಲದಲ್ಲಿ ಬದುಕಿದ್ದ ಏಕೈಕ ಮಹಿಳೆಯಲ್ಲ. ಅವಳ ಜೊತೆ ಸಾವಿರಾರು ಮಹಿಳೆಯರಿದ್ದರು. ಆದರೆ ಕಾಲಚಕ್ರ ಉರುಳಿದಂತೆ ಉಳಿದ ಮಹಿಳೆಯರ ವಂಶಾವಳಿಯಲ್ಲಿ ಹೆಣ್ಣುಮಕ್ಕಳ ಸರಣಿಯ ಕೊಂಡಿ ಕಟ್ ಆಗಿಹೋಯಿತು. ಆದರೆ ಈ 'ಈವ್' ಎಂಬ ತಾಯಿಯ ಹೆಣ್ಣುಮಕ್ಕಳ ಪರಂಪರೆ ಮಾತ್ರ ಮುರಿಯದೇ ಇಂದಿನವರೆಗೂ ಮುಂದುವರಿದಿದೆ. ಇಂದು ಬದುಕಿರುವ ಇಡೀ ಜಗತ್ತಿನ ಪ್ರತಿಯೊಬ್ಬ ಮಾನವನ ತಾಯಿಯ-ತಾಯಿಯ-ತಾಯಿಯ ವಂಶಸರಣಿ ಕೊನೆಗೆ ಆ ಒಬ್ಬಳೇ ಮಹಿಳೆಯವರೆಗೆ ತಲುಪುತ್ತದೆ!

ಭಾರತೀಯ ತಳಿವಿಜ್ಞಾನದ (Indian population genetics) ಅಧ್ಯಯನಗಳು ಮತ್ತೊಂದು ಹೆಮ್ಮೆಯ ವಿಷಯವನ್ನು ಬಹಿರಂಗಪಡಿಸುತ್ತವೆ. ಮಾನವಕುಲ ಆಫ್ರಿಕಾದಿಂದ ಹೊರಟು ಜಗತ್ತಿನಾದ್ಯಂತ ವಲಸೆ ಹೋದಾಗ, ಭಾರತವು ಅತ್ಯಂತ ಆರಂಭಿಕ ಮತ್ತು ಪ್ರಮುಖ ನಿಲ್ದಾಣವಾಗಿತ್ತು. ಭಾರತೀಯ ಮಹಿಳೆಯರ ಮಾತೃ ವಂಶಾವಳಿಗಳು (Maternal lineages) ಆಫ್ರಿಕಾದ ಹೊರಗಿರುವ ಇಡೀ ಜಗತ್ತಿನಲ್ಲೇ ಅತ್ಯಂತ ಪುರಾತನವಾದವುಗಳಾಗಿವೆ. ಒಂದು ನೈಜ ಅರ್ಥದಲ್ಲಿ ಹೇಳಬೇಕೆಂದರೆ, ಭಾರತದ ಅಮ್ಮಂದಿರು ನಮ್ಮ ಆ 'ಮೈಟೊಕಾಂಡ್ರಿಯಲ್ ಈವ್' ನ ಮೊದಲ ಮೊಮ್ಮಕ್ಕಳಾಗಿದ್ದಾರೆ!

ತಾಯಿಯಿಂದ ನಮಗೆ ಬರುವ ಈ ಆಸ್ತಿ ಕೇವಲ ದೈನಂದಿನ ಶಕ್ತಿಗೆ ಮಾತ್ರ ಸೀಮಿತವಾಗಿಲ್ಲ. ನಾವು ಅಮ್ಮನಿಂದ ಪಡೆಯುವ mtDNA ಯ ಆರೋಗ್ಯವು ನಮ್ಮ ರೋಗನಿರೋಧಕ ಶಕ್ತಿ, ನಾವು ವಯಸ್ಸಾಗುವ ವಿಧಾನ ಮತ್ತು ಮಧುಮೇಹ (Diabetes) ಹಾಗೂ ಹೃದಯ ಕಾಯಿಲೆಗಳಂತಹ ಗಂಭೀರ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆಗಳನ್ನೂ ನಿರ್ಧರಿಸುತ್ತದೆ. ಇದೇ ಕಾರಣಕ್ಕೆ ಇಂದಿಗೂ ವೈದ್ಯರು ರೋಗಿಗಳನ್ನು ತಪಾಸಣೆ ಮಾಡುವಾಗ, ?ನಿಮ್ಮ ತಾಯಿಗೆ ಈ ಕಾಯಿಲೆ ಇತ್ತೇ?? ಎಂದು ಕೇಳುತ್ತಾರೆ. ಅಮ್ಮನ ಜೈವಿಕ ಪರಂಪರೆ ನಾವು ಅಂದುಕೊಂಡಿದ್ದಕ್ಕಿಂತಲೂ ಎಷ್ಟು ಆಳವಾಗಿ ನಮ್ಮನ್ನು ಆವರಿಸಿದೆ ಅನ್ನುವುದನ್ನು ಒಪ್ಪಲೇಬೇಕಿದೆ.

ವಿಜ್ಞಾನ ಈಗ ಎಷ್ಟು ಮುಂದುವರಿದಿದೆ ಎಂದರೆ, ವೈದ್ಯಕೀಯ ಲೋಕವು "ಮೈಟೊಕಾಂಡ್ರಿಯಲ್ ರಿಪ್ಲೇಸ್‌ಮೆಂಟ್ ಥೆರಪಿ" (Mitochondrial Replacement Therapy) ಎಂಬ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಇದನ್ನು ಆಡುಭಾಷೆಯಲ್ಲಿ "ಮೂರು ಪೋಷಕರ ಮಗು" (Three-parent baby) ವಿಧಾನ ಎನ್ನಲಾಗುತ್ತದೆ. ಒಬ್ಬ ತಾಯಿಗೆ ಮೈಟೊಕಾಂಡ್ರಿಯಲ್ ಕಾಯಿಲೆ ಇದ್ದಾಗ, ವೈದ್ಯರು ಅವಳ ದೋಷಪೂರಿತ ಟಣಆಓಂ ಜಾಗದಲ್ಲಿ ಮತ್ತೊಬ್ಬ ಆರೋಗ್ಯವಂತ ದಾತ ಮಹಿಳೆಯ (Donor woman) ಮೈಟೊಕಾಂದ್ರಿಯಾವನ್ನು ಬದಲಾಯಿಸುತ್ತಾರೆ. ಮಗುವಿನ ಉಳಿದೆಲ್ಲಾ ಮುಖ್ಯ ಆಓಂ ಹೆತ್ತವರಿಂದಲೇ ಬಂದಿರುತ್ತದೆ. ಯುಕೆ (UK) ದೇಶವು ಈಗಾಗಲೇ ಇದನ್ನು ಕಾನೂನುಬದ್ಧಗೊಳಿಸಿದೆ. ಈ ತಂತ್ರಜ್ಞಾನ ಮನಸ್ಸಿನಲ್ಲಿ ಒಂದು ಸುಂದರವಾದ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ: ಜೀವದ ಮೂಲ ಶಕ್ತಿಯೇ ಆ ಮೂರನೇ ಮಹಿಳೆಯ ಮೈಟೊಕಾಂಡ್ರಿಯಾದಿಂದ ಬರುವುದಾದರೆ, ಆಕೆಯೂ ಒಂದು ಸಣ್ಣ ಅರ್ಥದಲ್ಲಿ ಆ ಮಗುವಿಗೆ ತಾಯಿಯಲ್ಲವೇ?

ನಾವು ಹೊರಗಿನ ಸಮಾಜದಲ್ಲಿ ಅಪ್ಪನ ಹೆಸರಿನಲ್ಲಿ ನಮ್ಮ ಹೆಸರುಗಳನ್ನು ಸೇರಿಸಬಹುದು, ಅಪ್ಪನ ವಿಳಾಸವನ್ನು ಜೇಬಿನಲ್ಲಿಟ್ಟುಕೊಂಡು ತಿರುಗಾಡಬಹುದು, ನಮ್ಮ ದೇಹದ ಅರ್ಧದಷ್ಟು ಲಕ್ಷಣಗಳು ಅಪ್ಪನಿಂದಲೇ ಬಂದಿರಬಹುದು. ಆದರೆ ನಮ್ಮ ದೇಹದ ಒಳಗಿರುವ ಪ್ರತಿ ಜೀವಕೋಶದ ಉಸಿರಾಟದಲ್ಲೂ ಅಮ್ಮನ ಮುದ್ರೆಯಿದೆ. ಹೆಸರಿನ ವಂಶಾವಳಿಯ ವಿಷಯದಲ್ಲಿ ಪುರುಷರು ಮುಂಚೂಣಿಯಲ್ಲಿ ಕಾಣಬಹುದು, ಆದರೆ ಜೀವದ ಶಕ್ತಿಯ ಪರಂಪರೆಯನ್ನು ಮುಂದುವರಿಸುವಲ್ಲಿ ತಾಯಿಯ ಪಾತ್ರ ಅನನ್ಯ.

ನಾಮಫಲಕಗಳ ಹೆಸರುಗಳಲ್ಲಿ ಅಪ್ಪನೇ ರಾಜ್ಯಭಾರ ಮಾಡಲಿ!ಆದರೆ ಪ್ರಕೃತಿಯು ನಮ್ಮ ರಕ್ತದ ಕಣಕಣದಲ್ಲೂ ಅಮ್ಮನ ವೀರತ್ವವನ್ನು ಮೆರೆಸಿರುವುದು ಎಂದಿಗೂ ಅಳಿಸಲಾಗದ ವೈಜ್ಞಾನಿಕ ನಿಜಸ್ಥಿತಿ! ವಂದನೆಗಳು.

ಇಂಗ್ಲಿಷ್ ಮೂಲ
ಮೃದುಲಾ ಗಂಗೂರ್
ಕನ್ನಡಕ್ಕೆ

---

# ಬಸವಣ್ಣನವರ ಹಿಂದಿನ ಸ್ತ್ರೀಶಕ್ತಿ.... ಅಕ್ಕನಾಗಮ್ಮ

## ಉಪೇಕ್ಷಿತ ವಚನಕಾರರು




ಅಕ್ಕ ನಾಗಮ್ಮನವರ ಮೂಲ ಹೆಸರು ನಾಗಲಾಂಬಿಕೆ.. ಆದರೆ ಆಕೆ ಬಸವಣ್ಣನವರ ಜೊತೆಗೆ ಇಡೀ ಶರಣ ಸಂಕುಲಕ್ಕೆ ಅಕ್ಕ ಎಂದೇ ಗುರುತಿಸಿಕೊಂಡ ದೈತ್ಯ ಸಾತ್ವಿಕತೆ ಹಾಗೂ ದಿಟ್ಟತನ ಮಿಳಿತವಾದ ಸ್ತ್ರೀಶಕ್ತಿ. ಬಸವಣ್ಣ ಎಂಬ ವಿಶ್ವಜ್ಯೋತಿಯ ಉದಯಕ್ಕೆ ತೈಲವಾಗಿ ತನ್ನನ್ನು ತಾನು ಉರಿಸಿಕೊಂಡಾಕೆ. ಜೋಡುಬತ್ತಿಯಾಗಿ ಅವರ ಇಬ್ಬರು ಪತ್ನಿಯರು ಇದ್ದರು.

ತಂದೆ ಮಾದರಸ ಹಾಗೂ ತಾಯಿ ಮಾದಲಾಂಬೆಯರ ಮೂರು ಜನ ಮಕ್ಕಳಲ್ಲಿ ಈಕೆ ಹಿರಿಯವಳು. ತಮ್ಮ ಬಸವಣ್ಣನವರ ಬದುಕಿನಲ್ಲಿ ಅತ್ಯಂತ ಹಿರಿದಾದ ಪ್ರಭಾವವನ್ನು ಬೀರಿದ ಹಾಗೂ ಅವರನ್ನು ಮಹಾಮಾನವತವಾದಿಯನ್ನಾಗಿಸಿ ಬೆಳೆಸಿದ ಕೀರ್ತಿ ಮತ್ತು ಹೆಮ್ಮೆ ಅಕ್ಕ ನಾಗಮ್ಮನವರದ್ದು. ಇವರಿಬ್ಬರಿಗೂ ಓರ್ವ ಸಹೋದರ ಇದ್ದ ಎಂಬ ಕುರಿತು ಕೆಲವು ಮಾಹಿತಿಗಳು ಲಭ್ಯವಾಗಿದ್ದರೂ ಕೂಡ ಅದರ ನಿಖರತೆ ಸ್ಪಷ್ಟವಾಗಿಲ್ಲ.

ಬಸವಣ್ಣನವರ ಬೆಳವಣಿಗೆಯ ಕುರಿತು ಯಾವುದೇ ರೀತಿಯ ಶಾಸನಗಳು ಲಭ್ಯವಾಗಿಲ್ಲ.... ನುಡಿದಂತೆ ನಡೆದ ಶರಣರು ತಮ್ಮ ವ್ಯಕ್ತಿಗತ ಇತಿಹಾಸಕ್ಕಿಂತ ವ್ಯಕ್ತಿತ್ವ ವಿಕಸನಕ್ಕೆ ಹೆಚ್ಚು ಆದ್ಯತೆ ನೀಡಿದವರು.

ಬಹುತೇಕ ಲೇಖಕರ ಅಭಿಪ್ರಾಯದಂತೆ ಬ್ರಾಹ್ಮಣ ಸಂಪ್ರದಾಯದಂತೆ ಮಾದರಸರು ತಮ್ಮ ಮಗನಿಗೆ ಜನಿವಾರ ಹಾಕಲು ಪ್ರಯತ್ನಿಸಿದಾಗ ಅಕ್ಕನಿಗೆ ಇರದ ಜನಿವಾರ ನನಗೆ ಏಕೆ? ಎಂದು ಅಲ್ಲಿ ಬಂದ ಬ್ರಾಹ್ಮಣ ಪುರೋಹಿತರಾದಿಯಾಗಿ ಎಲ್ಲರೊಂದಿಗೆ ವಾದಿಸಿದ ಬಸವಣ್ಣನವರು ಮನೆಯನ್ನು ತೊರೆದು ಕಪ್ಪಡಿ ಸಂಗಮಕ್ಕೆ ಹೋಗಿ ನೆಲೆಯಾದರು. ಅಲ್ಲಿಯ ಸಂಗಮನಾಥ ದೇವಸ್ಥಾನದ ಗುರುಗಳಾದ ಈಶಾನ್ಯ ಗುರುಗಳ ಬಳಿ ಹೆಚ್ಚಿನ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ನಾಗಮ್ಮನನ್ನು ಕಪ್ಪಡಿ ಸಂಗಮದ ಬಳಿಯ ಪುಟ್ಟ ಹಳ್ಳಿಯೊಂದರ ಶಿವಸ್ವಾಮಿ ಎಂಬ ಯುವಕನೊಂದಿಗೆ ಮದುವೆ ಮಾಡಿಕೊಡಲಾಗಿದ್ದು ಆಗಾಗ ಬಸವಣ್ಣನವರು ಹೋಗಿ ಅಕ್ಕನನ್ನು ಭೇಟಿಯಾಗಿ ಬರುತ್ತಿದ್ದರು ಎಂಬ ಮಾಹಿತಿ ಲಭ್ಯವಾಗುತ್ತದೆ.



ಮುಂದೆ ಬಸವಣ್ಣನವರು ಕಲ್ಯಾಣ ಪಟ್ಟಣಕ್ಕೆ ಹೋಗಿ ನೆಲೆಸಿದಾಗ ಅಲ್ಲಿಗೆ ಅವರನ್ನು ಅನುಸರಿಸಿ ಬಂದವರು ಅಕ್ಕನಾಗಮ್ಮ ಹಾಗೂ ಅವರ ಪತಿ ಶಿವ ಸ್ವಾಮಿ . ಅವರ ಪುತ್ರನೇ ಚನ್ನಬಸವಣ್ಣ. ಅಕ್ಕ ನಾಗಮ್ಮನ ಹಿರಿತನದಲ್ಲಿ ಬಸವಣ್ಣನವರ ಇಬ್ಬರು ಪತ್ನಿಯರು ಹಾಗೂ ಬಸವಣ್ಣನವರು ನಡೆಯುತ್ತಿದ್ದರು.

ಮುಂದೆ ಬಸವಣ್ಣನವರು ಕಲ್ಯಾಣದಲ್ಲಿ ಮಹಾಮಂತ್ರಿಯಾಗಿ ಬಿಜ್ಜಳ ಮಹಾರಾಜನ ಆಸ್ಥಾನದಲ್ಲಿ ನಿಯುಕ್ತರಾದರು. ಇತ್ತ ಅನುಭವ ಮಂಟಪವನ್ನು ಕಟ್ಟಿ ಜಾತಿ ಮತ ವರ್ಗ ವರ್ಣ ರಹಿತ ಸಮ ಸಮಾಜದ ಪರಿಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಹೆಗಲೆಣೆಯಾಗಿ ನಿಂತವರು ಅಕ್ಕ ನಾಗಮ್ಮ. ಮಹಾಮನೆಯ ದಾಸೋಹ ವ್ಯವಸ್ಥೆ ಮಾಡುವುದರಿಂದ ಹಿಡಿದು ಅನುಭವ ಮಂಟಪದ ಎಲ್ಲಾ ಶರಣರ ಒಗ್ಗೂಡಿಸುವಿಕೆಗೆ ಕಾರಣರಾದವರು ಅಕ್ಕನಾಗಮ್ಮ.

ಅರಮನೆ ಮತ್ತು ಗುರು ಮನೆಗಳ ನಡುವಿನ ಅಜಗಜಾಂತರ ವ್ಯತ್ಯಾಸಗಳ ತೊಳಲಾಟದಲ್ಲಿ ಬಸವಣ್ಣನವರು ಒದ್ದಾಡಿದಾಗ ಅವರಿಗೆ ಸಮಾಧಾನ ಹೇಳಿ ವಾಸ್ತವಕ್ಕೆ ಕರೆತಂದವರು ಅಕ್ಕ ನಾಗಮ್ಮ.

ಮುಂದೆ ಕಲ್ಯಾಣ ಕ್ರಾಂತಿಯ ಸಮಯದಲ್ಲಿ ಬಸವಣ್ಣನವರು ಕಪ್ಪಡಿ ಸಂಗಮಕ್ಕೆ ಹೋಗಿ ನೆಲೆಯಾದಾಗ ವಚನಗಳ ಕಟ್ಟುಗಳ ಸಂರಕ್ಷಣೆಯ ಭಾರವನ್ನು ಹೊತ್ತು ಎಲ್ಲ ಶರಣರಲ್ಲಿ ಭರವಸೆಯನ್ನು ತುಂಬಿ ಅವರೆಲ್ಲರನ್ನು ಒಗ್ಗೂಡಿಸಿಕೊಂಡು ಉಳವಿಯತ್ತ ಸಾಗಿದಾಕೆ ಅಕ್ಕ ನಾಗಮ್ಮ.

ಉಳವಿಯಲ್ಲಿ ಗೋವೆಯನ್ನು ಅಂದು ಆಳುತ್ತಿದ್ದ ಮಹಾರಾಜರ ಸಹಾಯದಿಂದ ವಚನಗಳ ಕಟ್ಟುಗಳ ಸಾವಿರಾರು ಪ್ರತಿಗಳನ್ನು ಮಾಡಿ ಅವುಗಳನ್ನು ನಾಡಿನ ನಾಲ್ಕೂ ದಿಕ್ಕುಗಳಲ್ಲಿ ಸಂರಕ್ಷಿಸಲು ಕಳುಹಿಸಲು ಅಹರ್ನಿಶಿ ದುಡಿದ ದಿಟ್ಟ ಮಹಿಳೆ ಅಕ್ಕನಾಗಮ್ಮ.

ಸಹೋದರ ಬಸವಣ್ಣ ಮತ್ತವನ ಪತ್ನಿಯರನ್ನು ಭೌತಿಕವಾಗಿ ಅಗಲಿಯೂ ಕೂಡ ಒಂದು ಉನ್ನತ ಧ್ಯೇಯೋದ್ದೇಶಕ್ಕಾಗಿ ತನ್ನ ಬದುಕನ್ನು ಮುಡಿಪಾಗಿಟ್ಟು ಬದುಕಿದಾಕೆ ಅಕ್ಕನಾಗಮ್ಮ.

ವಚನಗಳ ಪ್ರತಿಗಳನ್ನು ಮಾಡುವ ಕೆಲಸ ಮುಗಿದು ಅವುಗಳನ್ನು ನಾಡಿನ ನಾಲ್ಕು ದಿಕ್ಕಿಗೂ ಕಳುಹಿಸುವ ಸಮಯದಲ್ಲಿ ತನ್ನ ಪುತ್ರ ಚೆನ್ನಬಸವಣ್ಣನ ಕಾಲ ಸನ್ನಿಹಿತವಾಯಿತೆಂದು ತಿಳಿದು ಕೂಡ ದೃಢತೆಯನ್ನು ಸಾಧಿಸಿದ ಮಹಾಮಾತೆ ಆಕೆ.

ವಚನಗಳ ಕಟ್ಟುಗಳನ್ನು ತೆಗೆದುಕೊಂಡು ಸಾಗುವ ಗುಂಪಿನ ನೇತೃತ್ವವನ್ನು ವಹಿಸಿ ತಾನು ಕೂಡ ಮುಂದೆ ಸಾಗಿ ಚಿಕ್ಕಮಗಳೂರು ಬಳಿಯ ಎಣ್ಣೆ ಹೊಳೆ ತೀರದ ತರೀಕೆರೆಯಲ್ಲಿ ಬಯಲಾದಾಕೆ ಅಕ್ಕ ನಾಗಮ್ಮ.

ಅಕ್ಕ ನಾಗಮ್ಮನವರ 15 ವಚನಗಳು ನಮಗೆ ದೊರಕಿವೆ. ಬಸವಣ್ಣ ಪ್ರಿಯ ಚನ್ನಸಂಗಯ್ಯ ಎಂಬ ಅಂಕಿತನಾಮದಲ್ಲಿ ವಚನಗಳನ್ನು ರಚಿಸಿರುವ ಅಕ್ಕನಾಗಮ್ಮನವರ ವಚನಗಳಲ್ಲಿ ಬಹುತೇಕ ವಚನಗಳು ಸೋದರ ಬಸವಣ್ಣನವರ ಕುರಿತಾಗಿವೆ.

ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂದಡೆ
ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲಾ ಪಸರಿಸಿತ್ತಲ್ಲಾ
!
ಅಯ್ಯಾ, ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ
ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು
ಬಲ್ಲರು ?
ಅಣ್ಣಾ, ಶಶಿಧರನಟ್ಟಿದ ಮಣಿಹ
ಪೂರೈಸಿತ್ತೆಂದು
ನೀವು ಲಿಂಗೈಕ್ಯವಾದೊಡೆ,
ನಿಮ್ಮೊಡನೆ ಭಕ್ತಿ
ಹೋಯಿತ್ತಯ್ಯಾ.
ನಿಮ್ಮೊಡನೆ ಅಸಂಖ್ಯಾತ
ಮಹಾಗಣಂಗಳು ಹೋದರಣ್ಣಾ.
ಮರ್ತ್ಯಲೋಕದ ಮಹಾಮನೆ
ಶೂನ್ಯವಾಯಿತ್ತಲ್ಲಾ ಬಸವಣ್ಣಾ.
ಎನ್ನನೊಯ್ಯದೆ ಹೋದೆಯಲ್ಲಾ
ಪಂಚಪರುಷಮೂರ್ತಿ ಬಸವಣ್ಣಾ.
ಬಸವಣ್ಣಪ್ರಿಯ ಚೆನ್ನಸಂಗಯ್ಯಂಗೆ
**ಪ್ರಾಣಲಿಂಗವಾಗಿ ಹೋದೆಯ
ಸಂಗನಬಸವಣ್ಣಾ ?**
**ಶ್ರೀ ಗುರುವೇ ತಾಯಿ ತಂದೆಯಾಗಿ
ಲಿಂಗವೇ ಪತಿಯಾಗಿ
ಜಂಗಮವೇ ಅತ್ತೆ ಮಾವಂದಿರಾಗಿ
ಶಿವ ಭಕ್ತರೇ ಬಾಂಧವರಾಗಿ**
ಸತ್ಯಸದಾಚಾರವೆಂಬ ಮನೆಗೆ
ಕಳುಹಿದರಾಗಿ,
ಶರಣಸತಿ ಎಂಬ ನಾಮ ನಿಜವಾಯಿತ್ತು.
ಆದಂತೆ ಇರುವೆ, ಹಿಂದುಮುಂದರಿಯದೆ
ನಡೆವೆ.
ಮನಕ್ಕೆ ಮನಸಾಕ್ಷಿಯಾಗಿ ಮಾಡುವೆ,
ಬಸವಣ್ಣಪ್ರಿಯ ಚೆನ್ನಸಂಗಯ್ಯಾ
ನಿಮ್ಮಡಿಗಳಿಗೆ

ಎಂಬ ಮೇಲಿನ ಎಲ್ಲ ವಚನಗಳಲ್ಲಿ ಅವರು ಶರಣ ಧರ್ಮದ ನಿಜವಾದ ನಡೆ-ನುಡಿಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮತ್ತು ನಡೆದುಕೊಳ್ಳುವ ತಮ್ಮ ನಿಲುವಿನ ಕುರಿತು ಅತ್ಯಂತ ಸ್ಪಷ್ಟವಾಗಿ ಹೇಳಿದ್ದಾರೆ.


ಅಕ್ಕ ನಾಗಮ್ಮನವರು ಕಾರಣಿಕ ಪುರುಷ ಬಸವಣ್ಣನವರ ಬದುಕಿನ ಸಮಸ್ತ ಆಗುಹೋಗುಗಳಿಗೆ ತಾವೇ ಮುಂಚೂಣಿಯಲ್ಲಿ ನಿಂತು ನಡೆದವರು. ಅಂತಹ ಮಹಾ ತಾಯಿಗೆ ಶರಣು ಶರಣಾರ್ಥಿ

---

# ಕೊಟ್ಟಿಯೂರು ದೇವಸ್ಥಾನ



| ಪುಷ್ಪ ಪ್ರಸಾದ್




ಕೊಟ್ಟಿಯೂರು ದೇವಸ್ಥಾನ ತೀರ್ಥಯಾತ್ರೆ (ಋತುಮಾನ) ಪ್ರತಿ ವರ್ಷ ಮೇ-ಜೂನ್ ತಿಂಗಳಿನಲ್ಲಿ ತೆರೆಯಲ್ಪಡುತ್ತದೆ. ಈಗಾಗಲೇ ಹಲವಾರು ಕಡೆಗಳಿಂದ ಜನರು ಭೇಟಿ ನೀಡಿ ದೇವರ ದರ್ಶನ ಪಡೆಯುತ್ತಿದ್ದಾರೆ. ಕೊಟ್ಟಿಯೂರು ದೇವಸ್ಥಾನವು ಕೇರಳದ ಒಂದು ಪ್ರಮುಖ ಶಿವ ದೇವಾಲಯವಾಗಿದೆ. ವಡಕ್ಕೇಶ್ವರಂ ದೇವಸ್ಥಾನವು ಪ್ರಾಚೀನ ಕಾಲದಿಂದಲೂ ಈ ದೇವಸ್ಥಾನದ ಸಾಮಾನ್ಯ ಹೆಸರಾಗಿದೆ, ಆದರೆ ಕೆಲವು ಸ್ಥಳೀಯ ಜನರು ಕೊಟ್ಟಿಯೂರು ಗ್ರಾಮದ ಬಳಿ ನದಿಯ ದಡದಲ್ಲಿರುವ ದೇವಾಲಯವನ್ನು ಇಕ್ಕರೆ ಕೊಟ್ಟಿಯೂರು ಎಂದು ಕರೆಯುತ್ತಾರೆ; ನದಿಯ ಇನ್ನೊಂದು ಬದಿಯಲ್ಲಿರುವ ದೇವಾಲಯದಿಂದ ಇದನ್ನು ಪ್ರತ್ಯೇಕಿಸಲು. ತೃಚ್ಚೇರುಮನ ಕ್ಷೇತ್ರವು ಕೊಟ್ಟಿಯೂರು ದೇವಸ್ಥಾನದ ಸರಿಯಾದ ಹೆಸರು. ಈ ದೇವಸ್ಥಾನವು ಮಲಬಾರ್ ದೇವಸ್ವಂ ಮಂಡಳಿಯ ಅಡಿಯಲ್ಲಿ ವಿಶೇಷ ವರ್ಗದ ದೇವಾಲಯವಾಗಿದೆ. ಉತ್ತರ ಕೇರಳದಲ್ಲಿರುವ ಪುರಾತನ ಯಾತ್ರಾ ಸ್ಥಳವಾದ ಕೊಟ್ಟಿಯೂರು ಶಿವ ದೇವಾಲಯವು ಪಶ್ಚಿಮ ಘಟ್ಟಗಳ ಶಾಂತ ಬೆಟ್ಟದ ಪ್ರದೇಶದಲ್ಲಿದೆ. ಬಾವಲಿ ನದಿಯ ಎದುರು ದಡದಲ್ಲಿ ಅಕ್ಕರೆ ಕೊಟ್ಟಿಯೂರು ಮತ್ತು ಇಕ್ಕರೆ ಕೊಟ್ಟಿಯೂರು ಎಂಬ ಎರಡು ದೇವಾಲಯಗಳಿವೆ. ಮೇ-ಜೂನ್ ತಿಂಗಳುಗಳಲ್ಲಿ ಬರುವ ದೇವಾಲಯದ ವಾರ್ಷಿಕ ಉತ್ಸವವಾದ ವೈಶಾಖ ಮಹೋತ್ಸವದ ಸಮಯದಲ್ಲಿ ಅಕ್ಕರೆ ಕೊಟ್ಟಿಯೂರು 27-28 ದಿನಗಳವರೆಗೆ ಮಾತ್ರ ತೆರೆದಿರುತ್ತದೆ. ಆ ಸಮಯದಲ್ಲಿ, ಇಕ್ಕರೆ ಕೊಟ್ಟಿಯೂರು ಮುಚ್ಚಿರುತ್ತದೆ. ನದಿಯ ಪಶ್ಚಿಮ ದಂಡೆಯಲ್ಲಿರುವ ವಡಕ್ಕೇಶ್ವರಂ ಅಥವಾ ಇಕ್ಕರೆ ಕೊಟ್ಟಿಯೂರು (ತೃಚ್ಚೇರುಮನ ದೇವಾಲಯ) ಇತರ ಎಲ್ಲಾ ದೇವಾಲಯಗಳಂತೆ ಶಾಶ್ವತ ದೇವಾಲಯ ಸಂಕೀರ್ಣವಾಗಿದೆ. ಈ ದೇವಾಲಯವು ಸುಮಾರು 80 ಎಕರೆಗಳಷ್ಟು ವಿಸ್ತೀರ್ಣದ ಪವಿತ್ರ ತೋಪಿನ ನಡುವೆ ದಟ್ಟವಾದ ಅರಣ್ಯ ಪ್ರದೇಶದಲ್ಲಿದೆ. ಈ ತೀರ್ಥಯಾತ್ರೆ ಪ್ರಯಾಗದ ಕುಂಭಮೇಳವನ್ನು ಹೋಲುತ್ತದೆ, ಅಲ್ಲಿ ಶುದ್ಧೀಕರಣವನ್ನು ಮಾಡಲಾಗುತ್ತದೆ. ವೈಶಾಖ ಮಹೋತ್ಸವವು ಹಿಂದೂಗಳ ಶಬರಿಮಲೆ ತೀರ್ಥಯಾತ್ರೆಯಂತೆ ವಾರ್ಷಿಕ ತೀರ್ಥಯಾತ್ರೆಯಾಗಿದ್ದು, ಅಲ್ಲಿ ಅನೇಕ ಸ್ಥಳಗಳಿಂದ ಪ್ರಯಾಣಿಸುವ ಭಕ್ತರು ವರ್ಷದಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಒಂದು ದೇಗುಲಕ್ಕೆ ಸಾಮೂಹಿಕವಾಗಿ ಹೋಗುತ್ತಾರೆ. ದೇವಾಲಯ ಮತ್ತು ಮೈದಾನವನ್ನು ದಕ್ಷಿಣ ಕಾಶಿ ಎಂದೂ ಕರೆಯಲಾಗುತ್ತದೆ. ಇಕ್ಕರೆ ಕೊಟ್ಟಿಯೂರು ದೇವಸ್ಥಾನ ಮತ್ತು ಅಕ್ಕರೆ ಕೊಟ್ಟಿಯೂರು ದೇವಸ್ಥಾನಗಳು ಮಹಾದೇವನಿಗೆ ಅರ್ಪಿತವಾಗಿವೆ. ಇಕ್ಕರೆ ಕೊಟ್ಟಿಯೂರು ದೇವಸ್ಥಾನವನ್ನು ಪರಶುರಾಮನು ಸೃಷ್ಟಿಸಿದನೆಂದು ನಂಬಲಾಗಿದೆ, ಆದರೆ ಅಕ್ಕರೆ ಕೊಟ್ಟಿಯೂರು ದೇವಸ್ಥಾನವು ಸ್ವಯಂ ಭೂ, ಅಂದರೆ ನೈಸರ್ಗಿಕವಾಗಿ ರೂಪುಗೊಂಡದ್ದು. ದೇವಾಲಯದ ವಿಧಿವಿಧಾನಗಳು ಮತ್ತು ಆಚರಣೆಗಳ ವ್ಯವಸ್ಥೆಯನ್ನು ಶಂಕರಾಚಾರ್ಯರು ಅಭಿವೃದ್ಧಿಪಡಿಸಿದರಂತೆ.



?ಈ ದೇವಾಲಯದ ಇತಿಹಾಸವು ದಕ್ಷ ಯಾಗದೊಂದಿಗೆ ಸಂಬಂಧ ಹೊಂದಿದೆ. ಹಿಂದೂ ಪುರಾಣದ ಪ್ರಕಾರ, ದಕ್ಷಪ್ರಜಾಪತಿ ತನ್ನ ಮಗಳು ಶಿವನೊಂದಿಗೆ ಮದುವೆಯಾದುದನ್ನು ನೋಡಿ ಸಂತೋಷಪಡದೆ, ತನ್ನ ಮಗಳು ಸತಿ ದೇವಿಗೆ ಮತ್ತು ಶಿವನಿಗೆ ತಿಳಿಸದೆ ಈ ಸ್ಥಳದಲ್ಲಿ ಯಾಗ ನಡೆಸಲು ನಿರ್ಧರಿಸುತ್ತಾನೆ. ಸತಿ ದೇವಿಯು ತನ್ನ ಉದ್ದೇಶವನ್ನು ಅರಿಯದೆ ಯಾಗಭೂಮಿಗೆ ಭೇಟಿ ನೀಡುತ್ತಾಳೆ, ಆದರೆ ಅವಳ ತಂದೆಯಿಂದ ಅವಮಾನಿಸಲ್ಪಡುತ್ತಾಳೆ. ಗಾಯಗೊಂಡು ಅವಮಾನಿತಳಾದ ಅವಳು ತನ್ನ ಯೋಗಶಕ್ತಿಯೊಂದಿಗೆ (ಆಧ್ಯಾತ್ಮಿಕ ಶಕ್ತಿ) ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಈ ಕೃತ್ಯದಿಂದ ವಿಚಲಿತನಾದ ಶಿವನು ವೀರಭದ್ರನಾಗಿ ತಾಂಡವನೃತಂ (ವಿನಾಶಕಾರಿ ನೃತ್ಯ) ಮಾಡಿ ದಕ್ಷನ ಶಿರಚ್ಛೇದ ಮಾಡುತ್ತಾನೆ. ಬ್ರಹ್ಮ, ವಿಷ್ಣು ಮತ್ತು ಇತರ ದೇವರುಗಳು ಶಿವನನ್ನು ಸಮಾಧಾನಪಡಿಸಲು ಬರುತ್ತಾರೆ. ನಂತರ, ಶಿವನು ದಕ್ಷನ ತಲೆಯನ್ನು ಆಡಿನ ತಲೆಯಿಂದ ಬದಲಾಯಿಸುತ್ತಾನೆ. ಆದ್ದರಿಂದ ಈ ಸ್ಥಳವು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಶಿವನ ದೈವಿಕ ಉಪಸ್ಥಿತಿಯನ್ನು ಹೊಂದಿರುವುದಾಗಿದೆ ಎಂದು ಹೇಳಲಾಗುತ್ತದೆ. ವಿಷ್ಣು, ಬ್ರಹ್ಮ ಮತ್ತು ಶಿವ ದೇವರುಗಳು ಭೇಟಿಯಾದ ಸ್ಥಳವನ್ನು ಕೂಡಿಯೂರು ಎಂದು ಕರೆಯಲಾಯಿತು. ಮಲಯಾಳಂನಲ್ಲಿ ಕೂಡಿ ಎಂದರೆ ಒಟ್ಟಿಗೆ ಮತ್ತು ಊರು ಎಂದರೆ ಸ್ಥಳ, ಕೂಡಿಯೂರು ನಂತರ ಕೊಟ್ಟಿಯೂರು ಆಯಿತು. ಸತಿದೇವಿ ತನ್ನ ಜೀವನವನ್ನು ಕೊನೆಗೊಳಿಸಿದ ಮೂಲ ಸ್ಥಳ ಅಕ್ಕರೆ ದೇವಸ್ಥಾನ. ಆ ಸ್ಥಳವು ಯಾವುದೇ ಶಾಶ್ವತ ರಚನೆ ಅಥವಾ ಕಟ್ಟಡವಿಲ್ಲದೆ ಹಾಗೆಯೇ ಉಳಿದಿದೆ. ಅದು ತಿರುವಂಚಿರ ಎಂಬ ಆಳವಿಲ್ಲದ ಕೊಳ. ಇಕ್ಕರೆ ಕೊಟ್ಟಿಯೂರು ಇತರ ಯಾವುದೇ ದೇವಾಲಯದಂತೆ ಔಪಚಾರಿಕ ದೇವಾಲಯ ಸಂಕೀರ್ಣವಾಗಿದೆ. ಮತ್ತೊಂದೆಡೆ, ಅಕ್ಕರೆ ಕೊಟ್ಟಿಯೂರು ದೇವಾಲಯವು ಕೊಳದ ಮಧ್ಯದಲ್ಲಿದೆ ಮತ್ತು ಯಾವುದೇ ಔಪಚಾರಿಕ ರಚನೆಯನ್ನು ಹೊಂದಿಲ್ಲ. ಸ್ವಯಂಭೂ ಶಿವಲಿಂಗವನ್ನು ನದಿ ಕಲ್ಲುಗಳಿಂದ ಎತ್ತರಿಸಿದ ವೇದಿಕೆಯ ಮೇಲೆ ಇರಿಸಲಾಗಿದೆ. ವೈಶಾಕಮಹೋತ್ಸವವು ನೆಯ್ಯಟ್ಟಂ (ತುಪ್ಪವನ್ನು ಬಳಸಿ ಶುದ್ಧೀಕರಣ) ದೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಎಳನೀರಟ್ಟಂ (ಎಳೆ ತೆಂಗಿನ ನೀರನ್ನು ಬಳಸಿ ಶುದ್ಧೀಕರಣ) ದೊಂದಿಗೆ ಕೊನೆಗೊಳ್ಳುತ್ತದೆ, ಇವು ದೇವಾಲಯದಲ್ಲಿ ವಿಶೇಷ ಆಚರಣೆಗಳಾಗಿವೆ. ಕೊಟ್ಟಿಯೂರು ಪ್ರಕೃತಿ, ಮನುಷ್ಯ ಮತ್ತು ದೇವರು ಒಂದಾಗುವ ಸ್ಥಳ ಎಂದು ಹೇಳಲಾಗುತ್ತದೆ.

?ಈ ದೇವಸ್ಥಾನ ಇನ್ನೇನು ಜೂನ್ ತಿಂಗಳ ಕೆಲವು ದಿನಗಳವರೆಗೆ ಮಾತ್ರ ತೆರೆದಿರುತ್ತದೆ. ಈಗ ಮಳೆ ಶುರುವಾಗಿದೆ, ಆದ್ದರಿಂದ ಈ ಯಾತ್ರೆಗೆ ತೆರಳುವವರು ಮಳೆಯಲ್ಲಿ ಸ್ವಲ್ಪ ಜಾಗ್ರತೆಯಿಂದ ಹೋಗಿ ಬನ್ನಿ.

---

# ಎಂಟರ ಹರೆಯದಲ್ಲಿ ವಿಶ್ವ ದಾಖಲೆಯ ಹೆಜ್ಜೆ

ಸ್ಫೂರ್ತಿ ಸುಧೆ - 39



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸುಳ್ಯದ ಕಣಿವೆ ಸೀಮೆಯಿಂದ ಯೋಗಲೋಕಕ್ಕೆ ಧುಮುಕಿದ ಧೀಮಂತ ಚೇತನವೇ ಸೋನಾ. ಕೃಷಿಕರಾದ ಶರತ್ ಅಡ್ಕಾರ್-ಶೋಭಾ ಶರತ್ ದಂಪತಿಯ ಕಣ್ಮಣಿಯಾದ ಈಕೆ, ಎಂಟರ ಎಳವೆಯಲ್ಲೇ ಯೋಗಸಾಧನೆಯೆಂಬ ತಪಸ್ಸಿಗೆ ಮುಂದಾದಳು. ಸಂತೋಷ್ ಸುಳ್ಯ,ನವೀನ್ ಪುತ್ತೂರು, ವಿಷ್ಣು, ಡಾ. ನವೀನ್, ಡಾ. ರಂಜಿತ್ ಕಡೂರು ಅವರ ಶಿಸ್ತಿನ ಗರಡಿಯಲ್ಲಿ ಬೆವರು ಸುರಿಸಿ ದೇಹ-ಚಿತ್ತವನ್ನು ಸಾಣೆಹಿಡಿದರು. ಮಹಾತ್ಮ ಗಾಂಧಿ ವಿದ್ಯಾಮಂದಿರದ 08ನೇ ತರಗತಿಯ ಈ ಬಾಲಕಿ, ಯೋಗದ ನಿರ್ಮಲ ನಿಶ್ಚಲತೆಯೊಂದಿಗೆ ಪಿಳಿನಳಿಕೆ ನೃತ್ಯದ ಗೆಜ್ಜೆಯ ಝೇಂಕಾರವನ್ನೂ ಮೇಳೈಸಿದ್ದಾರೆ.



2025ರ ಪಶ್ಚಿಮ ಬಂಗಾಳದ ಎಸ್‌ಜಿಎಫ್‌ಐ ಕಣದಲ್ಲಿ ಕಂಚಿನ ಪದಕವನ್ನು ಜಯಿಸಿದ ಸೋನಾ, ಚಿತ್ರದುರ್ಗದ ಕೆವೈಎಸ್‌ಎಯ ಟ್ವಿಸ್ಟಿಂಗ್ ಸೆಣಸಾಟದಲ್ಲಿ ಚಿನ್ನದ ಪತಾಕೆ ಹಾರಿಸಿದರು. ಎಂವೈಎಸ್‌ಎ ರಾಷ್ಟ್ರಮಟ್ಟದ ಸಮರಾಂಗಣದಲ್ಲಿ ಭೂಮಾಸನದಲ್ಲಿ ಎರಡು ತಾಸು ಎರಡು ನಿಮಿಷಗಳ ಕಾಲ ಅಚಲ ಪರ್ವತದಂತೆ ನಿಂತು ಇಂಡಿಯನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ತನ್ನ ಹೆಸರನ್ನು ಸ್ವರ್ಣಾಕ್ಷರದಲ್ಲಿ ಬರೆಸಿದರು. ನೃತ್ಯಮಾಣಿಕ್ಯ, ಕಿತ್ತೂರು ರಾಣಿ ಚೆನ್ನಮ್ಮ, ಕರುನಾಡ ಭೂಷಣದ ಬಿರುದುಗಳು ಈ ಬಾಲ ಸಾಧಕಿಯ ಕಿರೀಟಕ್ಕೆ ರತ್ನಗಳಾಗಿವೆ.

ಭರಮಸಾಗರದ ತರಳಬಾಳು ಹುಣ್ಣಿಮೆಯಲ್ಲಿ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರಿಂದ ಮಂತ್ರಾಕ್ಷತೆ ಪಡೆದ ಸೋನಾ ಕನ್ನಡ ನಾಡಿನ ಅಭಿಮಾನದ ದೀಪ. ಇಂತಹ ಕನಸುಗಣ್ಣಿನ ಮೊಳಕೆಗಳಿಗೆ ಸಮಾಜ, ದಾನಿಗಳು, ಕ್ರೀಡಾ ಪ್ರೋತ್ಸಾಹಕರು, ಗುರುಗಳು ಆಸರೆಯಾದರೆ, ಎಂಟರ ಹರೆಯದ ಈ ಮಿಂಚು ಯೋಗದ ಗಗನದಲ್ಲಿ ಧ್ರುವತಾರೆಯಾಗಿ ಬೆಳಗುವುದು ನಿಶ್ಚಯ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,